

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಏಪ್ರಿಲ್ 28 ಮಂಗಳವಾರ 2026
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
47
ಸಂಪುಟ: 47 | ಸಂಚಿಕೆ: 13 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ರಾಜನಾಥ್ ಸಿಂಗ್ ದೇಶದ ಮುಂದಿನ ರಾಷ್ಟ್ರಪತಿ?

ಜೂನ್‌ನಲ್ಲಿ ನೇಮಕ ಸಾಧ್ಯತೆ



ನವದೆಹಲಿ: ರಕ್ಷಣಾ ಸಚಿವ ರಾಜನಾಥ್ ಸಿಂಗ್ ದೇಶದ ಮುಂದಿನ ರಾಷ್ಟ್ರಪತಿ ಆಗಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ರಾಜನಾಥ್ ಸಿಂಗ್ ಅವರನ್ನು ಜೂನ್ 2027ರಲ್ಲಿ ಭಾರತದ ರಾಷ್ಟ್ರಪತಿಯಾಗಿ ಬಡ್ತಿ ನೀಡಲಾಗುವುದು ಎಂಬ ಮಾತು ಉತ್ತರ ಪ್ರದೇಶ ಬಿಜೆಪಿಯ ಪ್ರಬಲ ಠಾಕೂರ್ ಸಮುದಾಯದ ನಾಯಕರ ಗುಂಪಿನಲ್ಲೇ ಕೇಳಿಬರುತ್ತಿದೆ. ಅಲ್ಲದೇ ರಾಷ್ಟ್ರಪತಿ ಭವನಕ್ಕೆ ರಾಜನಾಥ್ ಸಿಂಗ್ ಹೆಸರನ್ನು ಶಿಫಾರಸು ಮಾಡಲು ಆರ್‌ಎಸ್‌ಎಸ್ ಕೂಡಾ ಹೆಚ್ಚಿನ ■ 6ನೇ ಪುಟಕ್ಕೆ

ಸಿಇಟಿ ಉತ್ತರಗಳ ಪ್ರಕಟಿಸಿದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಏ. 30ರೊಳಗೆ ಆಕ್ಷೇಪಣೆ ಆಹ್ವಾನ

ಬೆಂಗಳೂರು, ಏ.27– ಇಂಜಿನಿಯರಿಂಗ್ ಸೇರಿದಂತೆ ಇತರೆ ವೃತ್ತಿಪರ ಶಿಕ್ಷಣ ಪ್ರವೇಶಕ್ಕಾಗಿ ಕಳೆದ ವಾರ ನಡೆದಿದ್ದ ಪ್ರಸಕ್ತ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ)ಯ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಕೀ ಉತ್ತರಗಳಿಗೆ ಆಕ್ಷೇಪಣೆಗಳು ಏನಾದರೂ ಇದ್ದರೆ ಏ.30ರೊಳಗೆ ಸಲ್ಲಿಸಬೇಕು. ಇದಕ್ಕೆ ಆನ್‌ಲೈನ್ ಲಿಂಕ್ ಕೂಡ ಬಿಡುಗಡೆ ಮಾಡಿದ್ದು, ಆಕ್ಷೇಪಣೆಗಳ ಜೊತೆಗೆ ಪ್ರಶ್ನೆ ಸಂಖ್ಯೆ, ವರ್ಷನ್ ಕೋಡ್ ಇತ್ಯಾದಿ ಮಾಹಿತಿಯನ್ನು ನಿಖರವಾಗಿ ದಾಖಲಿಸಬೇಕು ಎಂದು ಕೆಇಎ ತಿಳಿಸಿದೆ. ಅಪೂರ್ಣ ಮಾಹಿತಿಯ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ. ಈ ವಿಚಾರದಲ್ಲಿ ವಿಷಯ ತಜ್ಞರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಕೆಇಎ ಮಾಹಿತಿ ನೀಡಿದೆ. ಅಭ್ಯರ್ಥಿಗಳು kamataka.gov.in 305 KCET 2026 ಉತ್ತರ ಕೀ ಪಿಡಿಎಫ್ ಅನ್ನು ಪಡೆಯಬಹುದು ಅಲ್ಲದೆ, ಅವರು ಏ.30 ರವರೆಗೆ ಕೆಸಿಇಟಿ 2026 ಉತ್ತರ ಕೀಗೆ ಆಕ್ಷೇಪಣೆ ಸಲ್ಲಿಸಬಹುದು. ಫಲಿತಾಂಶವನ್ನು ಮೇ ಮೂರನೇ ವಾರದಲ್ಲಿ ಘೋಷಿಸಲಾಗುತ್ತದೆ.

ಕ್ಲೈಮ್ಯಾಕ್ಸ್ ಹಂತಕ್ಕೆ ಕಾಂಗ್ರೆಸ್ 'ಪವರ್' ಪಾಲಿಟಿಕ್ಸ್

■ ಡಿಕೆಶಿ ಸಿಎಂ ಮಾಡುವಂತೆ ದೆಹಲಿಗೆ ತೆರಳಲು ಶಾಸಕರ ಒಂದು ತಂಡ ನಿರ್ಧಾರ ■ ಮೂರು ಬಾರಿಗಿಂತ ಹೆಚ್ಚು ಸಲ ಗೆದ್ದ ಶಾಸಕರು ಸಚಿವ ಸ್ಥಾನಕ್ಕೆ ವರಿಷ್ಠರ ಮೊರೆ ■ ಸಂಪುಟ ಪುನರ್‌ರಚನೆಗೆ ಅವಕಾಶ ಕಲ್ಪಿಸುವಂತೆ ಸಿಎಂ ಸಿದ್ದರಾಮಯ್ಯ ಮೇ ಮೊದಲ ವಾರವೇ ವರಿಷ್ಠರ ಭೇಟಿಗೆ ಸಿದ್ಧತೆ

ಬೆಂಗಳೂರು, ಏ.27– ಅಧಿಕಾರ ಹಂಚಿಕೆ ಹಾಗೂ ಸಂಪುಟ ಪುನಾರಚನೆ ಕುರಿತಂತೆ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಇದೀಗ ಕ್ಲೈಮ್ಯಾಕ್ಸ್ ಹಂತ ತಲುಪಿವೆ.

ತಮ್ಮ ಸರ್ಕಾರ ಮೂರು ವರ್ಷಗಳ ಅಧಿಕಾರಾವಧಿ ಪೂರ್ಣಗೊಳಿಸುತ್ತಿದೆ. ಈ ಹಂತದಲ್ಲಿ ಸಂಪುಟ ಪುನಾರಚನೆ ಮೂಲಕ ಸರ್ಕಾರಕ್ಕೆ ಹೊಸ ವರ್ಚಸ್ಸು ತರಬೇಕಿದೆ. ಇದಕ್ಕಾಗಿ ಅನುಮತಿ ನೀಡುವಂತೆ ಹೈಕಮಾಂಡ್‌ಗೆ ಮನವಿ ಸಲ್ಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮೇ ಮೊದಲ ವಾರದಲ್ಲಿ ದೆಹಲಿಗೆ ತೆರಳಲು ತೀರ್ಮಾನಿಸಿದ್ದಾರೆ.

ಇದರ ಬೆನ್ನಲ್ಲೇ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಉನ್ನತ ಹುದ್ದೆ ನೀಡಬೇಕು ಎಂದು ವರಿಷ್ಠರಿಗೆ ಮನವಿ ಸಲ್ಲಿಸಲು ಅವರ ಬೆಂಬಲಿಗ ಶಾಸಕರು ಈ ವಾರಾಂತ್ಯದಲ್ಲಿ ದೆಹಲಿಗೆ ತೆರಳುವ ಸಿದ್ಧತೆಯಲ್ಲಿದ್ದಾರೆ. ಮತ್ತೊಂದೆಡೆ ಮೂರಕ್ಕಿಂತ ಹೆಚ್ಚು ಬಾರಿ ಶಾಸಕರಾಗಿರುವ 30ಕ್ಕೂ ಹೆಚ್ಚು ಮಂದಿ ಶಾಸಕರು ಮೇ ಎರಡನೇ ವಾರದಲ್ಲಿ ದೆಹಲಿಗೆ ತೆರಳಿ ಸಂಪುಟ ಪುನಾರಚನೆಗೆ ■ 6ನೇ ಪುಟಕ್ಕೆ



ಡಿಕೆಶಿ ಹುಟ್ಟುಹಬ್ಬಕ್ಕೆ ಸಿಹಿ ಸುದ್ದಿ ಬರಬಹುದು!



ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕರು ಕೂಡ ದೆಹಲಿಯಾತ್ರೆಗೆ ಸಜ್ಜುಗೊಂಡಿದ್ದಾರೆ. ವಿಧಾನಸಭೆ ಚುನಾವಣೆ ಫಲಿತಾಂಶ ಬರುತ್ತಿದ್ದಂತೆ ಇವರೆಲ್ಲರೂ ವರಿಷ್ಠರನ್ನು ಭೇಟಿ ಮಾಡಿ ಅಧಿಕಾರ ಹಸ್ತಾಂತರ ಪ್ರಕ್ರಿಯೆ ಆರಂಭಿಸುವಂತೆ ಮನವಿ ಮಾಡಲು ತೀರ್ಮಾನಿಸಿದ್ದಾರೆ.

ಈ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿದ ಕುಣಿಗಲ್ ಶಾಸಕ ಡಾ. ರಂಗನಾಥ್, ಮೇ ತಿಂಗಳ 15ರಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜನ್ಮದಿನ ಇದೆ. ಅಷ್ಟರೊಳಗೆ ಸಂತೋಷದ ವಿಚಾರ ಅಥವಾ ಸಿಹಿ ಸುದ್ದಿ ಬರಬಹುದು ಎಂಬ ಆಶಯ ನಮ್ಮೆಲ್ಲರದ್ದಾಗಿದೆ ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳ್ಳೆಯ ಆಡಳಿತ ನೀಡುತ್ತಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್ ಅವರಿಗೂ ಮುಖ್ಯಮಂತ್ರಿ ■ 6ನೇ ಪುಟಕ್ಕೆ

ದೆಹಲಿಗೆ ಹೋಗಲು 40-50 ಶಾಸಕರ ಟಿಕೆಟ್ ಬುಕ್ಕಿಂಗ್

ಮಾಲೂರು (ಕೋಲಾರ): ಸಚಿವ ಡಿ.ಸುಧಾಕರ್ ಅವರ ಆರೋಗ್ಯದ ವಾಸ್ತವಾಂಶವನ್ನು ರಾಜ್ಯ ಸರ್ಕಾರವು ಜನರ ಮುಂದೆ ಇಡಬೇಕು. ಅವರನ್ನು ನಂಬಿರುವ ಅಭಿಮಾನಿಗಳು, ಕ್ಷೇತ್ರದ ಜನರ ಪರಿಸ್ಥಿತಿ ಅರ್ಥ ಮಾಡಿಕೊಳ್ಳಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಒತ್ತಾಯಿಸಿದರು.



ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೆಲ ದುರ್ಬುದ್ಧಿ ಜನರು ಇರುತ್ತಾರೆ. ಅಂಥ ಜನರಿಂದ ಹೆಬ್ಬೆಟ್ಟಿನ ಘಟನೆ ನಡೆಯುತ್ತವೆ. ದುರ್ಬಳಕೆ ಆಗುವ ಸಾಧ್ಯತೆ ಹಿನ್ನೆಲೆಯಲ್ಲಿ ತುಸು ಎಚ್ಚರದಿಂದ ಇರಬೇಕು ಎಂದಷ್ಟೇ ಹೇಳಿದ್ದೆ. ಸುಧಾಕರ್ ವಿಚಾರದಲ್ಲಿ ಹೇಳಿದ್ದಲ್ಲ, ನನ್ನ ಮಾತಿನಲ್ಲಿ ಮಾರ್ಮಿಕ ಅರ್ಥವೂ ಇಲ್ಲ' ಎಂದರು.

ದೆಹಲಿ ಯಾತ್ರೆಗೆ ಸಿದ್ಧತೆ: ರಾಜ್ಯದಲ್ಲಿ ಮುಖ್ಯಮಂತ್ರಿ ಗಾದಿ ಪೈಪೋಟಿ ಕುರಿತು ಪ್ರತಿಕ್ರಿಯಿಸಿ, 'ದೆಹಲಿಗೆ ತೆರಳಲು 40ರಿಂದ 50 ಶಾಸಕರು ವಿಮಾನದ ಟಿಕೆಟ್ ಬುಕ್ಕಿಂಗ್ ನಡೆಯುತ್ತಿದೆ. ಮುಖ್ಯಮಂತ್ರಿ ಆಗಬೇಕೆಂದು ಪದೇ ಪದೆ ದೆಹಲಿಗೆ ಭೇಟಿ ನೀಡುತ್ತಿದ್ದಾರೆ. ವರ್ಷದಿಂದ ಈ ಪೈಪೋಟಿ ನಡೆಯುತ್ತಿದೆ. ಈಗಾಗಲೇ ಸಂಕ್ರಾಂತಿ, ಯುಗಾದಿ ಕ್ರಾಂತಿ ಮಾತು ಮುಗಿದಿದೆ. ಚುನಾವಣೆ ಫಲಿತಾಂಶದ ಬಳಿಕ ಕ್ರಾಂತಿ ಆಗುವ ಬಗ್ಗೆ ಮಾತುಗಳು ಕೇಳಿಬರುತ್ತಿವೆ. ಯಾವ ರೀತಿ ಕ್ರಾಂತಿ ನಡೆಯಬಹುದೆಂದು ನಾನು ಕುತೂಹಲದಿಂದ ಕಾಯುತ್ತಿದ್ದೇನೆ' ಎಂದು ಹೇಳಿದರು. ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಏನೆಲ್ಲಾ ವ್ಯವಹಾರ ನಡೆಯುತ್ತಿದೆ ಎಂಬುದು ನನಗೆ ಗೊತ್ತಿಲ್ಲ ಎಂದರು. ■ 6ನೇ ಪುಟಕ್ಕೆ

ಮಹಿಳೆಯರು ಎಲ್ಲೂ ಸುರಕ್ಷಿತವಾಗಿಲ್ಲ

ಹೈಕೋರ್ಟ್ ಕಳವಳ



ಬೆಂಗಳೂರು: ಮಹಿಳೆಯರು ಯಾವ ಸ್ಥಳದಲ್ಲೂ ಸುರಕ್ಷಿತವಾಗಿಲ್ಲ ಎಂದು ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್; ಮೆಟ್ರೋ ರೈಲಿನಲ್ಲಿ ಸಂಚರಿಸುವ ಮಹಿಳೆಯರ ದೇಹದ ಹಿಂಭಾಗಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಅವುಗಳನ್ನು ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲತಾಣ ವೇದಿಕೆಯಲ್ಲಿ ಬಿತ್ತರಿಸಿ ನಂತರ ನಾಶಪಡಿಸಿದ ಆರೋಪಿಯ ವಿರುದ್ಧದ ಪ್ರಕರಣ ರದ್ದುಗೊಳಿಸಲು ನಿರಾಕರಿಸಿದೆ.

ನನ್ನ ವಿರುದ್ಧದ ಎಫ್‌ಐಆರ್ ಮತ್ತು ನಗರದ 2ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿನ ನ್ಯಾಯಿಕ ವಿಚಾರಣೆ ರದ್ದುಪಡಿಸಬೇಕು ಎಂದು ಕೋರಿ ಕರಿಹೋಬನಹಳ್ಳಿ ತಿಗಳರಪಾಳ್ಯ ಮುಖ್ಯ ರಸ್ತೆಯ ನಿವಾಸಿ ಬಿ.ಕೆ.ದಿಗಂತ್ (28) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಅರ್ಜಿದಾರರು ಈ ಕೃತ್ಯ ಎಸಗಿಲ್ಲ. ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದರೆ ಗೊತ್ತಾಗುತ್ತದೆ ಎಂಬ ಪ್ರತಿಪಾದನೆಗೆ ಮುಂದಾದರು. ಆದರೆ, ನ್ಯಾಯಮೂರ್ತಿಗಳು ವಕೀಲರ ಈ ಮಾತಿಗೆ ಕಿಡಿಕಿಡಿಯಾದರು. ಅವರನ್ನು ತೀವ್ರ ತರಾಟೆಗೂ ತೆಗೆದುಕೊಂಡರಲ್ಲದೆ, ಏನ್ರೀ ಇದೆಲ್ಲಾ ■ 6ನೇ ಪುಟಕ್ಕೆ

ಮಂಗಳೂರು ಕುಕ್ಕರ್ ಬಾಂಬ್ ಬ್ಲಾಸ್ಟ್ ಪ್ರಕರಣ

ಉಗ್ರ ಶಾರಿಕ್‌ಗೆ 10 ವರ್ಷ ಕಠಿಣ ಜೈಲು ಶಿಕ್ಷೆ

ಎನ್‌ಐಎ ಕೋರ್ಟ್ ಮಹತ್ವದ ತೀರ್ಪು



ಮಂಗಳೂರು: ಕರಾವಳಿಯನ್ನು ಬೆಚ್ಚಿ ಬೀಳಿಸಿದ್ದ ಮಂಗಳೂರು ನಗರದಲ್ಲಿ ಆಟೋದಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರಿಕ್‌ನನ್ನು ದೋಷಿ ಎಂದು ಘೋಷಿಸಿರುವ ಬೆಂಗಳೂರಿನ ಎನ್‌ಐಎ ವಿಶೇಷ ಕೋರ್ಟ್, ಸೋಮವಾರ 10 ವರ್ಷ ಕಠಿಣ ಶಿಕ್ಷೆ ವಿಧಿಸಿ ಮಹತ್ವದ ತೀರ್ಪು ನೀಡಿದೆ.

2022ರ ನವೆಂಬರ್ 19ರಂದು ಮಂಗಳೂರಿನ ಕಂಕನಾಡಿ ಬಳಿ ಆಟೋರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು. ಆರೋಪಿ ಶಾರಿಕ್ ಬಾಂಬ್ ಹೊತ್ತು ಸಾಗಿಸುತ್ತಿದ್ದಾಗಲೇ ಅದು ಆಕಸ್ಮಿಕವಾಗಿ ಸ್ಫೋಟಗೊಂಡಿದ್ದರಿಂದ ಭಾರಿ ಅನಾಹುತವೊಂದು ತಪ್ಪಿತ್ತು.

ಸ್ಫೋಟದಲ್ಲಿ ಶಾರಿಕ್ ಮತ್ತು ಆಟೋ ಚಾಲಕ ಇಬ್ಬರೂ ಗಾಯಗೊಂಡಿದ್ದರು. ದೇಶದ ಭದ್ರತೆಗೆ ಧಕ್ಕೆ ತರುವ ಸಂಚು ರೂಪಿಸಿದ ಹಿನ್ನೆಲೆಯಲ್ಲಿ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಲಾಗಿತ್ತು. ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಎನ್‌ಐಎ ಕೋರ್ಟ್, ಐಪಿಸಿ ಸೆಕ್ಷನ್ 121ಎ, ಐಪಿಸಿ ಸೆಕ್ಷನ್ 326 ಹಾಗೂ ಭಯೋತ್ಪಾದನಾ ಚಟುವಟಿಕೆಗಳ ತಡೆ ಕಾಯ್ದೆಯಡಿ ಕಠಿಣ ಶಿಕ್ಷೆ ವಿಧಿಸಿದೆ. ಈ ಪ್ರಕರಣದಲ್ಲಿ ಶಾರಿಕ್ ತನ್ನ ಮೇಲಿರುವ ಎಲ್ಲಾ ಆರೋಪಗಳನ್ನು ಮತ್ತು ಮಾಡಿದ ತಪ್ಪನ್ನು ನ್ಯಾಯಾಲಯದ ಮುಂದೆ ಒಪ್ಪಿಕೊಂಡಿದ್ದ.

ಜೀವಾವಧಿ ಶಿಕ್ಷೆ ನೀಡಬೇಕಿತ್ತು: ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಉಗ್ರ ಶಾರಿಕ್ 10 ವರ್ಷ ಜೈಲು ಶಿಕ್ಷೆಗೆ ಒಳಗಾಗಿರುವ ಬಗ್ಗೆ, ಸ್ಫೋಟದಲ್ಲಿ ಗಾಯಗೊಂಡಿದ್ದ ಆಟೋ ಚಾಲಕ ಪುರುಷೋತ್ತಮ ಪೂಜಾರಿ, ಈ ಉಗ್ರನಿಗೆ ಹತ್ತು ವರ್ಷ ಅಲ್ಲ ಜೀವಾವಧಿ ಶಿಕ್ಷೆ ನೀಡಬೇಕಿತ್ತು. ಜೈಲಿನಿಂದ ಹೊರಬಂದ ನಂತರ ಮತ್ತೆ ಅಂತಹದ್ದೇ ಕೃತ್ಯದಲ್ಲಿ ಭಾಗಿಯಾಗುತ್ತಾನೆ. ಅವನಿಗೆ ಹಿಂದಿನಿಂದ ಸಹಾಯ ಮಾಡೋರು ಇದ್ದಾರೆ. ಹೀಗಾಗಿ, ಜೀವಾವಧಿ ಶಿಕ್ಷೆ ನೀಡಿದರೆ ಮುಂದೆ ಅವನಿಂದ ಯಾವುದೇ ಕೃತ್ಯ ನಡೆಯೋದಿಲ್ಲ ಎಂದು ಅಭಿಪ್ರಾಯಪಟ್ಟರು. ಮಾಡದ ತಪ್ಪಿಗಾಗಿ ನಾನು ಶಿಕ್ಷೆ ಅನುಭವಿಸುತ್ತಿದ್ದೇನೆ. ಮೂರು ವರ್ಷದಿಂದ ನರಕಯಾತನೆ ಅನುಭವಿಸಿದ್ದೇನೆ. ಆಟೋದಲ್ಲೇ ಬಾಂಬ್ ಸ್ಫೋಟ ಆಗಿರುವುದರಿಂದ ನನಗೊಬ್ಬನಿಗೇ ತೊಂದರೆಯಾಯಿತು. ಇಲ್ಲದಿದ್ದಲ್ಲಿ ಸಾಕಷ್ಟು ಮಂದಿಗೆ ತೊಂದರೆಯಾಗುತ್ತಿತ್ತು. ■ 6ನೇ ಪುಟಕ್ಕೆ

ನಾನು 2028ಕ್ಕೆ ವಿಧಾನಸೌಧ ಪ್ರವೇಶಿಸುವುದು ಖಂಡಿತ

ಡಿ.ಕೆ. ಶಿವಕುಮಾರ್ ನನ್ನನ್ನು ಕಾಂಗ್ರೆಸ್‌ಗೆ ಕರೆದಿದ್ದರು!: ಪ್ರತಾಪ್‌ಸಿಂಹ

ಕುಮಟಾ: 2024ರ ಲೋಕಸಭೆ ಚುನಾವಣೆಯಲ್ಲಿ ಮೈಸೂರು ಲೋಕ ಸಭಾ ಕ್ಷೇತ್ರಕ್ಕೆ ಮೂರನೇ ಬಾರಿಗೆ ಟಿಕೆಟ್ ಸಿಗದೇ ಇದ್ದಾಗ ಡಿ.ಕೆ. ಶಿವಕುಮಾರ್ ಅವರು ಕುಣಿಗಲ್ ಶಾಸಕ ರಂಗನಾಥ್ ಅವರ ಮೊಬೈಲ್‌ನಿಂದ ಕರೆ ಮಾಡಿ ಕಾಂಗ್ರೆಸ್‌ಗೆ ಬಂದುಬಿಡು, ನಿನಗೆ ಟಿಕೆಟ್ ಕೊಡುತ್ತೇವೆ ಎಂದರು ಎಂದು ಮೈಸೂರು ಕ್ಷೇತ್ರದ ಮಾಜಿ ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

ನಮ್ಮಪ್ಪನೇ ಆರ್‌ಎಸ್‌ಎಸ್, ನಮಗೂ ನಿಮಗೂ ಸಿದ್ಧಾಂತ ಆಗಿಬರಲ್ಲ ಎಂದು ತಿರಸ್ಕರಿಸಿದ್ದೆ. 5 ವರ್ಷ ಬಿಟ್ಮೇಲೆ ವಾಪಸ್ ಹೋಗುಬೇಕಾದರೆ. ಆದರೆ, ಈಗ ಸರ್ವೈವಲ್ ಮುಖ್ಯ ಎಂದರು. ಆದರೆ ಇದಕ್ಕೆ ಒಪ್ಪದೇ ತಿರಸ್ಕರಿಸಿದ್ದೇನೆ ಎಂದರು. ನಂತರ 4 ಮಂದಿ ಕಾಂಗ್ರೆಸ್ ಶಾಸಕರು ಕೂಡ ನನ್ನ ಬೆನ್ನತ್ತಿದ್ದರು. ಆದರೆ, ನಾನು ಯಾರ ಮಾತಿಗೂ ಪ್ರಭಾವಿತನಾಗದೆ ಬಿಜೆಪಿಯಲ್ಲಿಯೇ ಮುಂದುವರಿದೆ ಎಂದು ಹೇಳಿದ್ದಾರೆ.



ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಅಂದಿನ ಪರಿಸ್ಥಿತಿಗೆ ಕಾಂಗ್ರೆಸ್‌ಗೆ ಹೋಗಿದ್ದರೆ ನಾನೇ ಗೆಲ್ಲುತ್ತಿದ್ದೆ. ನಾನು ಕ್ಷೇತ್ರದಲ್ಲಿ ಮಾಡಿದ್ದ ಕೆಲಸದಿಂದ ಜನರು ಕೈಹಿಡಿಯುತ್ತಿದ್ದರು. ಆದರೆ ಯುವಕರು ನನ್ನ ಬೆನ್ನ ಹಿಂದೆ ಇದ್ದಾರೆ, ನನ್ನ ಬಗ್ಗೆ ಬೇರೆ ರೀತಿ ಯೋಚನೆ ಮಾಡಿದ್ದಾರೆ. ಹಾಗಾಗಿ ಹೋಗಲಿಲ್ಲ, ಆದರೆ, ಕಾಂಗ್ರೆಸ್‌ನಲ್ಲಿ ಗೌರವಯುತವಾಗಿ ನಡೆಸಿಕೊಳ್ಳುತ್ತಿದ್ದರು ಎಂದಿದ್ದಾರೆ.

2028ರಲ್ಲಿ ವಿಧಾನಸಭೆ ಚುನಾವಣೆಗೆ ನಿಲ್ತೇನೆ: 2028ರ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ವಿಧಾನಸೌಧ ಪ್ರವೇಶ ಮಾಡುತ್ತೇನೆ ಎಂಬ ಸಂಪೂರ್ಣ ವಿಶ್ವಾಸ ನನಗಿದೆ. ನಾನು ಬಡತನದಿಂದ ಮೇಲೆ ಬಂದವನು. ಬಾಲಕನಾಗಿದ್ದಾಗ ಹೊಟೇಲ್‌ಗೆ ಹಾಲು ಹಾಕುತ್ತಿದ್ದೆ, ನಾನು ಇಂದು ಪತ್ರಕರ್ತನಾಗಿ ಹಾಗೂ ರಾಜಕೀಯದಲ್ಲೂ ಗುರುತಿಸಿಕೊಂಡಿದ್ದೇನೆ. ಸಾಮಾನ್ಯ ಯುವಕನಾಗಿದ್ದ ನಾನು ಇವತ್ತು ಈ ಮಟ್ಟಕ್ಕೆ ಬೆಳೆದಿದ್ದೇನೆ ಎಂದರೆ ನನ್ನಂಥ ಬಡ, ಸಾಮಾನ್ಯ ಹುಡುಗರು ಮುಂದೆ ಬರಬಹುದು ಎಂಬುದನ್ನು ಇಂದಿನ ಯುವ ಜನತೆಗೆ ಸಾರಲು ಈ ಮಾತನ್ನು ಹೇಳುತ್ತಿದ್ದೇನೆ ಎಂದು ಪ್ರತಾಪ್ ಸಿಂಹ ಹೇಳಿದರು.

ವಿವಿಧ ಜಿಲ್ಲೆಗಳ ಜಿಪಂ ಕ್ಷೇತ್ರದ ಗಡಿ ಮರುವಿಂಗಡಣೆ

ಆಕ್ಷೇಪಣೆ ಆಹ್ವಾನಿಸಿದ ರಾಜ್ಯ ಸರ್ಕಾರ

ಬೆಂಗಳೂರು, ಏ.27– ಚುನಾಯಿತ ಸದಸ್ಯರ ಅಧಿಕಾರವಧಿ ಪೂರ್ಣಗೊಂಡಿರುವ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ನಡೆಸಬೇಕು ಎಂಬ ಆಗ್ರಹದ ಬೆನ್ನಲ್ಲೇ ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಕೂಲಕ್ಕಾಗಿ ರಾಜ್ಯದ ಎಂಟು ಜಿಲ್ಲೆಗಳ ಜಿಲ್ಲಾ ಪಂಚಾಯತಿ ಕ್ಷೇತ್ರಗಳ ಗಡಿಗಳನ್ನು ಮರುವಿಂಗಡಣೆ ಮಾಡಿ ಆದೇಶ ಹೊರಡಿಸಿದೆ.

ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಹಾಸನ, ಉತ್ತರ ಕನ್ನಡ, ಯಾದಗಿರಿ, ಬೀದರ್ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿಗಳನ್ನು ಮರು ವಿಂಗಡಣೆ ಮಾಡಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸಿ ನೂತನ ಅಧಿಸೂಚನೆಯನ್ನು ಹೊರಡಿಸಿದೆ. ಈ ಮೊದಲು ಈ ಜಿಲ್ಲೆಗಳ ಗಡಿಗಳನ್ನು ಗುರುತಿಸಲಾಗಿತ್ತು. ಆದರೆ ನಂತರದಲ್ಲಿ ಈ ಗಡಿಗಳ ಪ್ರದೇಶದಲ್ಲಿನ ಕೆಲವು ಗ್ರಾಮಗಳು ಪುರಸಭೆ ಪಟ್ಟಣ ಪಂಚಾಯಿತಿ ಮತ್ತು ನಗರಸಭೆ ವ್ಯಾಪ್ತಿಗೆ ಸೇರ್ಪಡೆಯಾಗಿದ್ದವು ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಆಡಳಿತಾತ್ಮಕ ದೃಷ್ಟಿ ಯಿಂದ ಈ ನಿರ್ಧಾರ ಕೈಗೊಂಡಿದೆ.

ಜಿಲ್ಲಾ ಪಂಚಾಯತಿ ಕ್ಷೇತ್ರಗಳ ಕ್ರಮ ಸಂಖ್ಯೆಯಲ್ಲಿ ಗೊಂದಲವಾಗದಿರಲು ಹಾಗೂ ನಿರಂತರತೆ ಕಾಪಾಡುವ ಉದ್ದೇಶದಿಂದ, ಈ ಹಿಂದಿನ ಹಳೆಯ ಅಧಿಸೂಚನೆಗಳನ್ನು ಸರ್ಕಾರ ಹಿಂಪಡೆದಿದೆ. ಬದಲಾಗಿ, ಹೊಸ ಕ್ರಮಸಂಖ್ಯೆಗಳೊಂದಿಗೆ ಕ್ಷೇತ್ರಗಳ ಹೆಸರು ಮತ್ತು ಭೌಗೋಳಿಕ ವ್ಯಾಪ್ತಿಯನ್ನು ಪ್ರಕಟಿಸಿದೆ. ■ 6ನೇ ಪುಟಕ್ಕೆ



ಏಕಾಏಕಿ ಕಾಡಾನೆ ನುಗ್ಗಿದ ಆತಂಕ

ಸಂಗಮ, ಮೇಕೆದಾಟು ಪ್ರವಾಸಿ ತಾಣಕ್ಕೆ ಮೇ 3ರವರೆಗೆ ಪ್ರವೇಶ ನಿಷಿದ್ಧ

ಮೈಸೂರು, ಏ.27(ಎಂಟಿವೈ)– ನದಿ ನೀರಲ್ಲಿ ಆಟವಾಡುತ್ತಿದ್ದ ಪ್ರವಾಸಿಗರ ಮೇಲೆ ಕಾಡಾನೆ ನುಗ್ಗಿ ಓರ್ವ ಮಹಿಳೆ ಗಾಯಗೊಂಡ ಹಿನ್ನೆಲೆಯಲ್ಲಿ ಕಾವೇರಿ ವನ್ಯಧಾಮದ ಸಂಗಮ ಹಾಗೂ ಮೇಕೆದಾಟು ಪ್ರವಾಸಿ ತಾಣಕ್ಕೆ ಮೇ 3ರವರೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಿ ಅರಣ್ಯ ಇಲಾಖೆ ಆದೇಶಿಸಿದೆ.

ಬೇಸಿಗೆ ಹಿನ್ನೆಲೆಯಲ್ಲಿ ಕಾವೇರಿ ನದಿ ಪಾತ್ರದ ಪ್ರವಾಸಿ ತಾಣಗಳಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, ಕಾವೇರಿ ವನ್ಯಧಾಮ ವ್ಯಾಪ್ತಿಯ ಸಂಗಮ ಪ್ರವಾಸಿ ತಾಣ ಹಾಗೂ ಮೇಕೆದಾಟು ಪ್ರದೇಶಕ್ಕೆ ಮೈಸೂರು, ಬೆಂಗಳೂರು, ಮಂಡ್ಯ ಸೇರಿದಂತೆ ವಿವಿಧೆಡೆಯಿಂದ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ಏ.23ರಂದು ಸಂಗಮ ಪ್ರವಾಸಿ ತಾಣದಲ್ಲಿ ನದಿಯಲ್ಲಿ ನೂರಾರು ಮಂದಿ ವಿಹರಿಸುತ್ತಿದ್ದ ವೇಳೆ ಕಾಡಿನಿಂದ ಬಂದ ಒಂಟಿ ಸಲಗ ಏಕಾಏಕಿ ಜನರ ನಡುವೆ ನುಗ್ಗಿತ್ತು. ಒಂದು ಬದಿಯಿಂದ ನದಿ ದಾಟಿ ಮತ್ತೊಂದು ಬದಿಗೆ ಹೋಗುವ ಭರದಲ್ಲಿ ಒಂಟಿ ಸಲಗ ಮುಂದೆ ಹೋಗುತ್ತಿದ್ದ ಹಸುವೊಂದನ್ನು ಬೆನ್ನಟ್ಟುವ ವೇಳೆ ನದಿ ನೀರಿನಲ್ಲಿ ಆಟವಾಡುತ್ತಿದ್ದ ಬೆಂಗಳೂರು ಮೂಲದ ಮಹಿಳೆಯೊಬ್ಬರು ಆನೆ ಕಾಲಿಗೆ ಸಿಲುಕಿದ್ದರು. ಆನೆ ಹಸುವಿನ ಮೇಲೆ ದೃಷ್ಟಿ ಹಾಯಿಸಿದ್ದರಿಂದ ■ 6ನೇ ಪುಟಕ್ಕೆ



ಕಾವೇರಿ ವನ್ಯಧಾಮದ ಸಂಗಮ ಹಾಗೂ ಮೇಕೆದಾಟು ಪ್ರವಾಸಿ ತಾಣಕ್ಕೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಿರುವುದು.

ಬಿಸಿಲಿನ ದಗೆಯಿಂದ ಕೆರೆಯಲ್ಲಿ ಮಿಂದೆದ್ದ ಹುಲಿರಾಯ; ಪ್ರವಾಸಿಗರಿಗೆ ಕಣ್ಣಿಗೆ ಹಬ್ಬ!



ಪ್ರವಾಸಿಗರಿಗೆ ಕೆರೆಯೊಂದರಲ್ಲಿ ಮಲಗಿದ್ದ ಹುಲಿ ದರ್ಶನ. /ಚಿತ್ರ; ಎಂ.ಎನ್.ಲಕ್ಷ್ಮೀನಾರಾಯಣ ಯಾದವ್.

ಮೈಸೂರು, ಏ.27(ಎಂಟಿವೈ)– ಬಿಸಿಲಿನ ಬೇಗೆಗೆ ವನ್ಯಜೀವಿಗಳು ತತ್ತರಿಸಿದ್ದು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ಅಂತರಸಂತೆ ವಲಯದ ಪ್ರವಾಸಿ ವಲಯದಲ್ಲಿ ಹುಲಿಯೊಂದು ಅರಣ್ಯದಲ್ಲಿನ ಕೆರೆಯೊಂದರ ನೀರಿನಲ್ಲಿ ಮಲಗಿ ದೇಹ ತಣಿಸಿಕೊಳ್ಳುವ ಮೂಲಕ ಪ್ರವಾಸಿಗರಲ್ಲಿ ಹರ್ಷತಂದಿದೆ. ■ 6ನೇ ಪುಟಕ್ಕೆ



ಅಂಡರ್–13 ಚೆಸ್ ಚಾಂಪಿಯನ್‌ಶಿಪ್–2026

ಆದ್ಯಗೌಡಗೆ ಸಮಗ್ರ ಚಾಂಪಿಯನ್


ಕರ್ನಾಟಕ ರಾಜ್ಯ ಓಪನ್, ಬಾಲಕಿಯರ ಅಂಡರ್–13 ಚೆಸ್ ಚಾಂಪಿಯನ್‌ಶಿಪ್ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಮೈಸೂರು, ಏ.27(ಜಿಎ)–ಮೈಸೂರು ಚೆಸ್ ಸೆಂಟರ್ ಹಾಗೂ ಕರ್ನಾಟಕ ರಾಜ್ಯ ಚೆಸ್ ಅಸೋಸಿಯೇಷನ್ ಸಹಯೋಗದಲ್ಲಿ ದಾಸ್‌ಪ್ರಕಾಶ್ ಪ್ಯಾರಡೈಸ್ ಹೋಟೇಲ್‌ನಲ್ಲಿ ಆಯೋಜಿಸಿದ್ದ ಮೂರು ದಿನಗಳ 'ಕರ್ನಾಟಕ ರಾಜ್ಯ ಓಪನ್ ಮತ್ತು ಬಾಲಕಿಯರ ಅಂಡರ್–13 ಚೆಸ್ ಚಾಂಪಿಯನ್‌ಶಿಪ್–2026' ಪಂದ್ಯಾವಳಿ ಪೂರ್ಣಗೊಂಡಿದ್ದು, ಚಾಣಾಕ್ಷತನ ಮೆರೆದ ಆದ್ಯ ಗೌಡ ಸಮಗ್ರ ಚಾಂಪಿಯನ್ ಆಗಿ ಹೊರಹೊಮ್ಮಿದರು.

ರಾಜ್ಯದ 17 ಜಿಲ್ಲೆಗಳಿಂದ 394 ಸ್ಪರ್ಧಿಗಳು ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದ್ದರು. ಮುಕ್ತ ವಿಭಾಗದಲ್ಲಿ 260 ಹಾಗೂ ಬಾಲಕಿಯರ ವಿಭಾಗದಲ್ಲಿ 134 ಸ್ಪರ್ಧಿಗಳು ಪಾಲ್ಗೊಂಡು ತಮ್ಮ ಚಾಣಾಕ್ಷತನ ಮೆರೆದರು. ಓಪನ್ಸ್ ವಿಭಾಗದಲ್ಲಿ ಬೆಂಗಳೂರಿನ ಆದ್ಯ ಗೌಡ ಪ್ರಥಮ ಸ್ಥಾನ ಪಡೆದುಕೊಂಡರು. ಇಶಾನ್ ಭನ್ಸಾಲಿ ರನ್ನರ್–ಅಪ್ ತಮ್ಮದಾಗಿಸಿಕೊಂಡರು. ಬಾಲಕಿಯರಿಗಾಗಿ ಪ್ರತ್ಯೇಕ ವಿಭಾಗವಿದ್ದರೂ ಬಾಲಕಿ ಆದ್ಯ ಗೌಡ ಮುಕ್ತ ವಿಭಾಗದಲ್ಲಿ ಸ್ಪರ್ಧಿಸಿ ಬಾಲಕರನ್ನು ಹಿಂದಿಕ್ಕಿ ಸಮಗ್ರ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಬಾಲಕಿಯರ ವಿಭಾಗದಲ್ಲಿ ಶ್ರೇಯಾ ರಾಜೇಶ್ ಪ್ರಥಮ, ಇಂದು ಶೀತಲ ರನ್ನರ್–ಅಪ್ ಆದರೂ. ಶ್ರೇಯಾ ರಾಜೇಶ್ ಅವರು ಟೈ–ಬ್ರೇಕರ್ ನಿಯಮದ ಆಧಾರದ ಮೇಲೆ ಪ್ರಥಮ ಸ್ಥಾನ ಪಡೆದರು.

ರಾಷ್ಟ್ರ ಮಟ್ಟಕ್ಕೆ ಆಯ್ಕೆ: ಈ ಪಂದ್ಯಾವಳಿಯಲ್ಲಿ ಓಪನ್ಸ್ ಮತ್ತು ಬಾಲಕಿಯರ ವಿಭಾಗದ ಮೊದಲ 2 ಸ್ಥಾನ ಪಡೆದ ವಿಜೇತರು, ಬರುವ ಸೆಪ್ಟೆಂಬರ್‌ನಲ್ಲಿ ಪಾಂಡಿಚೇರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಮಟ್ಟದ 13 ವರ್ಷದೊಳಗಿ ನವರ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲಿದ್ದಾರೆ. ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯ ಅಧ್ಯಕ್ಷ ಟಿ.ಎನ್.ಮಧುಕರ್, ಕಾರ್ಯದರ್ಶಿ ಎಂ.ಎಸ್.ತೇಜ್‌ಕುಮಾರ್ ಮಕ್ಕಳ ಸಾಧನೆಯನ್ನು ಶ್ಲಾಘಿಸಿದ್ದಾರೆ

ಬಹುಮಾನ ವಿತರಣಾ ಸಮಾ ರಂಭದಲ್ಲಿ ಮೈಸೂರು ಚೆಸ್ ಸೆಂಟರ್ ಸ್ಥಾಪಕ ನಾಗೇಂದ್ರ, ಮುರಳೀಧರ್, ಹೊಸ ಮೈಸೂರು ಜಿಲ್ಲಾ ಚೆಸ್ ಸಂಸ್ಥೆಯ ಅಧ್ಯಕ್ಷ ಡಾ.ವೇಣುಗೋಪಾಲ್, ಕೆ.ಎಸ್.ಸಿ.ಎ ಪದಾಧಿಕಾರಿಗಳಾದ ಸುರೇಶ್ ಜೆ, ಸುರೇಶ್‌ಬಾಬು ಎಂ.ಎಚ್, ದಾಸ ಪ್ರಕಾಶ್ ಹೋಟೆಲ್ ಮಾಲೀಕರಾದ ದಾಸ್, ಮಾಜಿ ಚಾಂಪಿಯನ್ ಕವನ.ಎಂ, ಅಂತರ ರಾಷ್ಟ್ರೀಯ ಆರ್ಬಿಟರ್ ರವಿಕಿರಣ್ ಡಿ.ಜೆ ಮತ್ತು ಏಷ್ಯನ್ ಕಂಚಿನ ಪದಕ ವಿಜೇತೆ ಮಾನಸ ಎಚ್.ಆರ್ ಉಪಸ್ಥಿತರಿದ್ದರು.

ಬಸವೇಶ್ವರ; ಡಾ.ಅಂಬೇಡ್ಕರ್ ಜಯಂತಿ ಆಚರಣೆ


ಮೈಸೂರು ವಿಜಯನಗರ 3ನೇ ಹಂತದ ಸಾಂಸ್ಕೃತಿಕ ವೇದಿಕೆ ವತಿಯಿಂದ ಜಗಜ್ಯೋತಿ ಬಸವೇಶ್ವರ ಹಾಗೂ ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ವೇಳೆ ಶಾಸಕ ಜಿ.ಟಿ.ದೇವೇಗೌಡರು ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರನ್ನು ಆತ್ಮೀಯವಾಗಿ ಅಭಿನಂದಿಸಿದರು.


ಮೈಸೂರು,ಏ.27–ವಿಜಯನಗರ 3ನೇ ಹಂತದ ಸಾಂಸ್ಕೃತಿಕ ವೇದಿಕೆ ವತಿಯಿಂದ ಜಗಜ್ಯೋತಿ ಬಸವೇಶ್ವರ ಹಾಗೂ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿಜಯನಗರದ ಕಲಿಕೆ ಎಜುಕೇಶನ್ ಟ್ರಸ್ಟ್‌ನ ಸಂಸ್ಥಾಪಕಿ ಶ್ರೀಮತಿ ಅಮೂಲ್ಯ ಮದಕರಿ ನಾಯಕ, ಶ್ರೀಮತಿ ಜಯಶ್ರೀ, ಶ್ರೀಮತಿ ಎ.ಎಲ್.ಹೇಮ, ಡಾ.ಸುಮಂಗಲ ಹಾಗೂ ಜಿ.ಎನ್.ಚೇತನ ಇವರುಗಳನ್ನು ಗುರುತಿಸಿ ಸನ್ಮಾನಿಸಿ, ಗೌರವಿಸಿದರು.

ಶ್ರೀಮತಿ ಅಮೂಲ್ಯ ಮದಕರಿನಾಯಕ ಅವರು ಕಲಿಕೆ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ, ಮೌಲ್ಯಾಧಾರಿತ ಶಿಕ್ಷಣವನ್ನು ಅನೇಕ ವಿದ್ಯಾರ್ಥಿಗಳಿಗೆ ನೀಡುತ್ತಾ ಸಮಾಜಮುಖಿ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲದೇ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡುವ ಮೂಲಕ ತಮ್ಮ ಸೇವಾಭಾವವನ್ನು ವ್ಯಕ್ತಪಡಿಸಿದ್ದಾರೆ. ಇದೇ ಸಂದರ್ಭದಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಕಲಿಕೆ ಎಜುಕೇಶನ್ ಟ್ರಸ್ಟ್‌ನ ಸಂಸ್ಥಾಪಕ ಮದಕರಿನಾಯಕ ಹಾಗೂ ಶ್ರೀಮತಿ ಅಮೂಲ್ಯ ಮದಕರಿ ನಾಯಕರವರು ಚೀಲಗಳನ್ನು ವಿತರಿಸಿದರು.

ವೇದಿಕೆಯಲ್ಲಿ ವಿಜಯನಗರ 3ನೇ ಹಂತದ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಎಸ್.ಮಂಜುನಾಥ್, ಡಾ.ರಾಮಚಂದ್ರ, ಎಸ್.ವೆಂಕಟೇಶ್, ಡಾ.ಲಕ್ಷ್ಮೀಗೌಡ (ಸುಲಕ್ಷ ಆಸ್ಪತ್ರೆಯ ಮಾಲೀಕ) ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ 120ನೇ ಸಂಸ್ಥಾಪನಾ ದಿನಾಚರಣೆ...


ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಬ್ಯಾಂಕಿನ 120ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಹಾಗೂ ಬಸವಣ್ಣ ಜಯಂತಿ ಆಚರಿಸಲಾಯಿತು. ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ ನಿರ್ದೇಶಕರಾದ ಎಸ್‌ಬಿಎಂ ಮಂಜು, ಎನ್.ಯೋಗಾನಂದ, ಹೆಚ್.ಹರೀಶ್‌ಕುಮಾರ್, ಆರ್.ಸೋಮಣ್ಣ, ಕೆ.ಗಿರೀಶ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಿ.ರಾಜೇಶ್ವರಿ, ಕಾರ್ಯದರ್ಶಿ ಕೆ.ಹರ್ಷಿತ್‌ಗೌಡ ಹಾಗೂ ಷೇರುದಾರರು, ಬ್ಯಾಂಕ್ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಜಾಹ್ನವಿ ಸತೀಶ್‌ಗೆ 600 ಅಂಕ



ಮೈಸೂರು: ಮೈಸೂರಿನ ಬನ್ನಿಮಂಟಪದ ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್‌ನ ವಿದ್ಯಾರ್ಥಿನಿ ಜಾಹ್ನವಿ ಸತೀಶ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 600 ಅಂಕ ಪಡೆದಿದ್ದಾಳೆ. ಇಂಗ್ಲಿಷ್–120, ಕನ್ನಡ–98, ಹಿಂದಿ–99, ಗಣಿತ–93, ವಿಜ್ಞಾನ–94, ಸಮಾಜ ವಿಜ್ಞಾನ–96 ಅಂಕ ಗಳಿಸಿದ್ದಾಳೆ. ಚಾಮುಂಡೇಶ್ವರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜೆ.ಸತೀಶ್‌ಕುಮಾರ್ ಅವರ ಪುತ್ರಿ.

ಮೇ 11, ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು,ಏ.27–ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಲಿರುವ ಸಾಮೂಹಿಕ ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯ ವಿವಾಹಕ್ಕೆ ಅವಕಾಶವಿರಲ್ಲ.



ವಧುವಿಗೆ ಚಿನ್ನದ ಮಾಂಗಲ್ಯ, ಬೆಳ್ಳಿ ಕಾಲುಂಗುರ, ಸೀರೆ, ಕುಪ್ಪಸಗಳನ್ನು ಹಾಗೂ ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ. 11 ಮೇ 2026 ಸೋಮವಾರ ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮವಿದ್ದು, 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 974134 2222 ಸಂಪರ್ಕಿಸಿ ನೋಂದಣಿ ಮಾಡಿಸಿಕೊಳ್ಳಬಹುದು.

ಮೇ 1ರಂದು ಬುದ್ಧ ಜಯಂತಿ

ಮೈಸೂರು, ಏ. 27–ವಿಜಯನಗರ ಮೊದಲ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಸಿದ್ಧಾರ್ಥ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ ಮೇ 1ರಂದು ಸಂಜೆ 6 ಗಂಟೆಗೆ 2570ನೇ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಬುದ್ಧಧಮ್ಮ ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ಹೇಳಿದರು.



ವಿಹಾರದಲ್ಲಿ ಹಮ್ಮಿಕೊಂಡಿದ್ದ ಬುದ್ಧ ಜಯಂತಿ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಶ್ರೀಲಂಕಾದ ನವಯಾನ ಫಾರೆಸ್ಟ್ ಮೊನಾಸ್ಟರಿಯ ಬಿಕ್ಕು ಬೋಧಿಧಮ್ಮ ಬಂತೇಜಿಯವರು ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದು, ಕಾರ್ಯಕ್ರಮಕ್ಕೂ ಮುನ್ನ ಬೋಧಿವೃಕ್ಷಕ್ಕೆ ಪೂಜೆ ಸಲ್ಲಿಸಿ, ಬುದ್ಧ, ಧಮ್ಮ, ಸಂಘ ವಂದನೆ ನೆರವೇರಿಸುವರು. ನಂತರ ಧ್ಯಾನ ಕಾರ್ಯಕ್ರಮ ನಡೆಸಿಕೊಡುವರು. ತದನಂತರ ಭಗವಾನ್ ಬುದ್ಧರ ಕುರಿತು ಪ್ರವಚನ ನೀಡುವರು ಎಂದರು.

ಹಣ, ಅಧಿಕಾರ, ಭೂಮಿಗಾಗಿ ಜಗತ್ತಿನಲ್ಲಿ ದಿನದಿಂದ ದಿನಕ್ಕೆ ಯುದ್ಧದಿಂದ ಸೃಷ್ಟಿಯಾಗುತ್ತಿರುವ ಆತಂಕದಿಂದ ಹೊರಬರಬೇಕು. ಜಗತ್ತಿನಲ್ಲಿ ಶಾಂತಿ ನೆಲೆಸಿ ಎಲ್ಲರೂ ಸುಖವಾಗಿರಲಿ ಎಂದು ಸಾಮೂಹಿಕ ಪ್ರಾರ್ಥನೆ ಮಾಡಲಿದ್ದೇವೆ. ಈ ಮೂಲಕ ಯುದ್ಧ ಬೇಡ, ಬುದ್ಧ ಬೇಕು ಎಂಬ ಸಂದೇಶವನ್ನು ತಿಳಿಸಲಾಗುವುದು. ನಾನು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ಮಾತುಗಳನ್ನಾಡುತ್ತೇನೆ. ಸಮಿತಿಯ ಅಧ್ಯಕ್ಷ ಪ್ರೊ.ಡಿ. ನಂಜುಂಡಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು ಎಂದರು. ಸಮಿತಿ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ, ಸಹಕಾರ್ಯದರ್ಶಿ ಎಚ್.ಶಿವರಾಜು, ಉಪಾಧ್ಯಕ್ಷ ಪಿ.ಮಹಾದೇವ, ಆರ್.ನಟರಾಜು, ಸಾವಕಯ್ಯ, ಡಿ.ಚಂದ್ರಶೇಖರಯ್ಯ ಇದ್ದರು.

ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ; ಜೀವನ ಶೈಲಿ ಮೂಡಿಸುವುದು ಅವಶ್ಯ

ಅಂತರ ರಾಷ್ಟ್ರೀಯ ಭೂ ದಿನಾಚರಣೆಯಲ್ಲಿ ಶಾಸಕ ಕೆ.ಹರೀಶ್‌ಗೌಡ ಅಭಿಮತ



ಮೈಸೂರಿನ ಅಖಿಲ ಭಾರತ ಮಹಿಳಾ ಪರಿಷತ್ ಮೈಸೂರು ವಲಯ ಹಾಗೂ ಎಸ್.ಡಿ.ಎಂ.ಎಂ.ಕೆ ಸ್ನಾತಕೋತ್ತರ ವಾಣಿಜ್ಯ ವಿಭಾಗದ ಸಹಯೋಗದಲ್ಲಿ ಅಖಿಲ ಭಾರತ ಮಹಿಳಾ ಪರಿಷತ್‌ನ ಕುವೆಂಪುನಗರದ ಶಾಖೆಯಲ್ಲಿ ಅಂತರಾಷ್ಟ್ರೀಯ ಭೂದಿನ ಆಚರಿಸಲಾಯಿತು.

ಮೈಸೂರು, ಏ. 27– ಮೈಸೂರಿನ ಅಖಿಲ ಭಾರತ ಮಹಿಳಾ ಪರಿಷತ್ ಮೈಸೂರು ವಲಯ ಹಾಗೂ ಎಸ್‌ಡಿಎಂ ಎಂಎಂಕೆ ಸ್ನಾತಕೋತ್ತರ ವಾಣಿಜ್ಯ ವಿಭಾಗದ ಸಹಯೋಗದಲ್ಲಿ ಅಖಿಲ ಭಾರತ ಮಹಿಳಾ ಪರಿಷತ್‌ನ ಕುವೆಂಪು ನಗರದ ಶಾಖೆಯಲ್ಲಿ ಅಂತರರಾಷ್ಟ್ರೀಯ ಭೂದಿನ ಆಚರಿಸಲಾಯಿತು.

ಶಾಸಕ ಹರೀಶ್‌ಗೌಡ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಸಾರ್ವಜನಿಕರು ಹಾಗೂ ಶಾಲಾ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮತ್ತು ಜೀವನ ಶೈಲಿ ಮೂಡಿಸುವುದು ಅತ್ಯಂತ ಅಗತ್ಯವಾದ ವಿಷಯವಾಗಿದೆ. ಅವಸರದ ಬದುಕಿನಲ್ಲಿ ಮನುಷ್ಯನು ಸ್ವಾರ್ಥಕ್ಕಾಗಿ ಪರಿಸರವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ಅತ್ಯಂತ ಆತಂಕಕಾರಿ ವಿಷಯವಾಗಿದೆ. ನಾವು ನಮ್ಮ ಸ್ವಾರ್ಥಕ್ಕಾಗಿ ಪರಿಸರದ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಆದ್ದರಿಂದ ಇಂದಿನ ಯುವಕರು ಪರಿಸರ ಜಾಗೃತಿ ಹಾಗೂ ಪರಿಸರ ಸಂರಕ್ಷಣೆ ಮಾಡುವಲ್ಲಿ ಮುಂದಾಗಬೇಕೆಂದು ತಿಳಿಸಿ, ಪರಿಸರ ಸ್ನೇಹಿ ಚಟುವಟಿಕೆಗಳಲ್ಲಿ ಭಾಗವಹಿಸುವುದರ ಮೂಲಕ ಭೂಮಾತೆಯನ್ನು ನಿತ್ಯವೂ ಕಾಪಾಡಿಕೊಳ್ಳಬೇಕೆಂದು ಕರೆ ನೀಡಿ, ಪ್ರಕೃತಿದತ್ತವಾಗಿ ಸಿಗುವ ಸಂಪನ್ಮೂಲಗಳನ್ನು ನಿತ್ಯವೂ ಉಪಯೋಗಿಸುವುದರ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ॥ಮಹಾದೇವಿ ಮಾತನಾಡಿ, 5 ವರ್ಷಗಳಿಂದ ಅಖಿಲ ಭಾರತ ಮಹಿಳಾ ಪರಿಷತ್‌ನಲ್ಲಿ ಯಾವುದೇ ಸಕ್ರಿಯಾ ಚಟುವಟಿಗಳು ನಡೆಯುತ್ತಿರಲಿಲ್ಲ. ಆದರೆ ಈ ವರ್ಷದಿಂದ ಮಹಿಳೆಯರಿಗಾಗಿಯೇ ಅನೇಕ ಜಾಗೃತಿ ವಿಚಾರ ಸಂಕಿರಣಗಳು, ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ, ಸಾಂತ್ವನಕೇಂದ್ರ ನಿರ್ಮಿಸಿ ಅದರ ಮೂಲಕ ಅನೇಕ ಜಾಗೃತಿ ಚಟುವಟಿಕೆಗಳನ್ನು ನಡೆಸುತ್ತಾ ಬರುತ್ತಿದ್ದೇವೆ. ಸಂವಿಧಾನ ಶಿಲ್ಪಿ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಸ್ತ್ರೀಯರಿಗೆ ಶಿಕ್ಷಣ, ಸಮಾನತೆ ತರುವಲ್ಲಿ ಮುಂದಿನ ದಿನಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೆಂದು ತಿಳಿಸಿ, ಪರಿಸರದ ಜಾಗೃತಿಯನ್ನು ಗ್ರಾಮೀಣ ಮತ್ತು ಸ್ಥಳೀಯ ಮಟ್ಟದಲ್ಲಿ ಬೆಳೆಸುವಲ್ಲಿ ಸಮುದಾಯ ಸಂಘಟನೆಗಳ ಮಹತ್ವದ್ದಾಗಿದೆ. ಆದ್ದರಿಂದ ಇಂದಿನ ಯುವಕರು ಗಿಡನೆಟ್ಟು ಬೆಳೆಸಿ ಉಳಿಸಬೇಕೆಂದು ಕರೆ ನೀಡಿದರು.

ನಂತರ ವೃಕ್ಷರೋಹಣ ಕಾರ್ಯಕ್ರಮವನ್ನು ಹಮ್ಮಿಕೊಂಡು ಆವರಣದ ಸುತ್ತಮುತ್ತ ಗಿಡ ನೆಡುವುದರ ಮೂಲಕ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಎಸ್‌ಡಿಎಂ ಎಂಎಂಕೆ ಕಾಲೇಜಿನ ಸ್ನಾತಕೋತ್ತರ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ॥ದೇವಕಿ ಕೆ.ಕೆ, ಉಪನ್ಯಾಸಕ ಕೆ.ಹರೀಶ್, ಅಧ್ಯಕ್ಷರಾದ ಹೇಮಲತಾ ಎಂ.ಎ ಹಾಗೂ ಮಹಿಳಾ ಮುಖ್ಯಸ್ಥರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ


ಮೈಸೂರು ಮೇಟಗಳ್ಳಿ ವಾರ್ಡ್ ನಂ.7ರಲ್ಲಿ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ರವಿಕುಮಾರ್, ವಿನೋದ್, ಶಿವು, ರಂಗಸ್ವಾಮಿ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ.ಗಿರೀಶ್ ಇತರರಿದ್ದರು.

ಕೆ–ಸೆಟ್, ಯುಜಿಸಿ–ನೆಟ್ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಏ.27–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ನಡೆಸಲಿರುವ ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ–ಸೆಟ್) ಹಾಗೂ ನವದೆಹಲಿಯ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ–ನೆಟ್) ಮತ್ತು ಕಿರಿಯ ಶಿಷ್ಯವೇತನ ಸಂಶೋಧನ ಸಹಾಯಕರ (ಜೆಆರ್‌ಎಫ್) ಅರ್ಹತಾ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನೀಡಲಾಗುತ್ತದೆ. ಆಸಕ್ತರು ಮೇ 2ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು ದೂ.ಸಂ: 0821–2515944 ಸಂಪರ್ಕಿಸಬಹುದೆಂದು ಕರ್ನಾಟಕ ರಾಜ್ಯ ಮುಕ್ತವಿದ್ಯಾನಿಲಯದ ಕುಲಸಚಿವ ಪ್ರೊ. ನವೀನ್‌ಕುಮಾರ್ ಎಸ್.ಕೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಏ.27–ಆರ್ಕೋಲಾಜಿ ವಿದ್ಯುತ್ ಮಾರ್ಗಗಳಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಏ.28ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಎಂ.ಜಿ ಕೊಪ್ಪಲು ವಿದ್ಯುತ್ ಮಾರ್ಗದ ನಿಂಗಯ್ಯನಕೆರೆ, ಕುಂಬಾರಕೊಪ್ಪಲು ಕೊನೆ ಬಸ್ ನಿಲ್ದಾಣ, ಮಂಗಳ ಬಹುಮಹಡಿ ಕಟ್ಟಡ, ಮಾದೇಗೌಡ ಸರ್ಕಲ್ ಸುತ್ತಮುತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಸೂರ್ಯ ಬೇಕರಿ ಸರ್ಕಲ್ ಸುತ್ತಮುತ್ತ, ಕುಂಬಾರಕೊಪ್ಪಲು, ಇಂದಿರ ನರ್ಸಿಂಗ್ ಹೋಂ, ರೈಲ್ವೆ ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.4.2026 ಮಂಗಳವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಉತ್ತರ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಚರ್ಮ, ಬೆನ್ನುಮೂಳೆ ಮತ್ತು ಕೀಲು ನೋವು ಸಮಸ್ಯೆ, ಮಂದ ದೃಷ್ಟಿ, ಕಣ್ಣಿನ ನೋವು ಹಾಗೂ ಕಣ್ಣಿನಲ್ಲಿ ನೀರು ಬರುವುದು, ಕೊಲೆಸ್ಟ್ರಾಲ್, ಬೊಜ್ಜು ನಿವಾರಣಾ ಚಿಕಿತ್ಸೆ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಶ್ರೀಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್** : ಬ್ರಹ್ಮ ರಥೋತ್ಸವ–2026 ಪೂಜಾ ಕಾರ್ಯಕ್ರಮ, ಬೆಳಗ್ಗೆ 9ಕ್ಕೆ ಪ್ರಾಕಾರೋತ್ಸವ, ನಿತ್ಯಹೋಮ, ಸಂಜೆ 6ಕ್ಕೆ ಶಾಂತಿಹೋಮ, ಮಹಾಪೂರ್ಣಾಹುತಿ, ಧ್ವಜಾವರೋಹಣ, ಪುಷ್ಪಯಾಗ, ರಾಷ್ಟ್ರಾಶೀರ್ವಾದ, ಸ್ಥಳ: ದೇವಾಲಯದ ಪ್ರಾಂಗಣ, ಗೋಕುಲಂ, 3ನೇ ಹಂತ ಸಂಜೆ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು** : ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಹಾಗೂ ಸಿಂಧೂರ ವಾರ್ಷಿಕ ಸಂಚಿಕೆ ಬಿಡುಗಡೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮಾರೋಪ ಭಾಷಣ : ಹಿರಿಯ ಉದ್ಘೋಷಕ ಡಾ. ಮೈಸೂರು ಉಮೇಶ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ವಾರ್ಷಿಕ ಸಂಚಿಕೆ ಬಿಡುಗಡೆ : ವಿಶ್ರಾಂತ ಪ್ರಾಂಶುಪಾಲ ಪ್ರೊ. ಕೆ. ರಾಮಮೂರ್ತಿರಾವ್, ಉಪಸ್ಥಿತರು : ಹರ್ಷಿತಾ ರಾವ್ ಬಿ.ಹೆಚ್., ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿವಿ, ಅಜೀಂ ಪ್ರೇಮ್‌ಜಿ ವಿವಿ, ಬೆಂಗಳೂರು**: ಸಾಹಿತ್ಯ ಸಹವಾಸ ಸಾಹಿತ್ಯಕ ಕಾರ್ಯಕ್ರಮ ಸರಣಿ, ಹಿರಿಯ ಸಾಹಿತಿಗಳಾದ ಶ್ರೀಮತಿ ತ್ರಿವೇಣಿ, ಕೆ.ಎಸ್. ನರಸಿಂಹಸ್ವಾಮಿ ಮತ್ತು ದೇವನೂರು ಮಹಾದೇವ ಅವರ ಕೊಡುಗೆಗಳನ್ನು ಕುರಿತು ಸಾಹಿತ್ಯಕ ಕಾರ್ಯಕ್ರಮ, ಬೆಳಗ್ಗೆ 10.30ರಿಂದ ಕೆ.ಎಸ್.ನರಸಿಂಹಸ್ವಾಮಿಯವರ ಗೀತಗಾಯನ, ಪ್ರಾಸ್ತಾವಿಕ ಭಾಷಣ: ಸುಧೀಶ್ ವೆಂಕಟೇಶ್, ಉದ್ಘಾಟನೆ: ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಆಶಯ ನುಡಿ: ಡಾ.ಎಂ.ಎಸ್.ಆಶಾದೇವಿ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ.ಲೋಲಾಕ್ಷಿ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 10.30ರಿಂದ.

■ **ಬಾಸುದೇವ ಸೋಮಾನಿ ಕಾಲೇಜು**: ಸೋಮಾನಿ ಸಂಭ್ರಮ–2026, ಎನ್‌ಎಸ್‌ಎಸ್ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ, ಬಹುಮಾನ ವಿತರಣೆ : ಕಾಲೇಜು ಅಧ್ಯಕ್ಷ ಡಾ. ಎಂ. ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು : ಆಡಳಿತಾಧಿಕಾರಿ ಪಿ. ಗೀತಾಂಜಲಿ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾದಿ ಮಠಾಧೀಶರಾದ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಸಂಜೆ 6ರಿಂದ ಪಂಡಿತ್ ಅನಿರುದ್ಧ ಆಚಾರ್ಯ ಪಾಂಡುರಂಗಿ ಅವರಿಂದ ಶ್ರೀ ಧನ್ವಂತರಿ ಮಹಿಮೆ ಪ್ರವಚನ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಟಿ.ಎನ್. ಅಶ್ವಿನಿ, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40–ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ. ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿರುವ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥರಾದ ಡಾ.ಶಿವಕುಮಾರಸ್ವಾಮಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ವಹಣೆ: ಎನ್.ಕೇಶವಮೂರ್ತಿ, 8.30 ಮತ್ತು ಸಂಜೆ 5.30–ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶುಗೀತೆಗಳ ಕಾರ್ಯಕ್ರಮ, 8.35 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಹರೀಶ್ ಹೆಚ್.ಟಿ. –ಸ್ಯಾಕ್ಸೋಫೋನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ. ಪ್ರಸ್ತುತಿ: ಆರ್.ಲೋಕೇಶ್ವರಿ. ಬಿ.ಜಿ. ಕವಿತಾ ಹಾಗೂ ಎಸ್. ಲಕ್ಷ್ಮೀನಾರಾಯಣ

ಮಧ್ಯಾಹ್ನ : 12.05 ವನಿತಾ ವಿಹಾರ, ನಾಟಕ–ಲೇಡೀಸ್ ಕಂಪಾರ್ಟ್‌ಮೆಂಟ್, ರಚನೆ–ಸುಜಾತ ಅಕ್ಕಿ, ಬಾನುಲಿ ರೂಪಾಂತರ–ಸಿ.ಎಸ್.ಪೂರ್ಣಿಮಾ, ನಿರ್ದೇಶನ ಹಾಗೂ ನಿರ್ಮಾಣ–ದಿಗ್ವಿಜಯ್ .ಬಿ, 12.35 ದೇವರನಾಮ–ಅಂಜನಾ ಡಿ. ಕುಂಬ್ಳೆ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಎಸ್.ಪ್ರವೀಣ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕೆ. ವಿ. ನಾರಾಯಣ ಸ್ವಾಮಿ–ಹಾಡುಗಾರಿಕೆ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ–ಸೀತಾ ಕಲ್ಯಾಣ, ಪ್ರಸ್ತುತಿ–ಸಂತ ಶ್ರೀ ಭದ್ರಗಿರಿ ಅಚ್ಯುತದಾಸರು, 5.00 ಪ್ರಾಯೋಜಿತ ಕಾರ್ಯಕ್ರಮ: ನಿರಾಮಯ ನಿಮ್ಮ ಆರೋಗ್ಯ ನಮ್ಮ ಮಾತು, ಪ್ರಾಯೋಜಕರು : ನಿರಾಮಯ ಹೆಲ್ತ್ ಕೇರ್, ಸರಸ್ವತಿಪುರಂ, ಮೈಸೂರು. ಭಾಗವಹಿಸುತ್ತಾರೆ–ಚರ್ಮರೋಗ ತಜ್ಞರಾದ ಡಾ. ರವಿ .ಎಸ್, ವಿಷಯ–ಸೋರಿಯಾಸಿಸ್‌ನೊಂದಿಗೆ ಬದುಕುವುದು ಹೇಗೆ?, ಪ್ರಸ್ತುತಿ–ಡಾ.ಕುಲದೀಪ್.ಎನ್ ಹಾಗೂ ತೇಜಸ್ವಿನಿ.ಜೆ, 5.35 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಕಳೆ ನಿರ್ವಹಣೆ ಈ ಕುರಿತು ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ವಿಶ್ರಾಂತ ವಿಜ್ಞಾನಿ ಎನ್.ಟಿ. ಯದುರಾಜ್ ಅವರೊಂದಿಗೆ ಸಂದರ್ಶನ, ಸಂದರ್ಶಕರು : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ದಿಗ್ವಿಜಯ್ ಬಿ, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಹರಿಪ್ರಸಾದ್ ಚೌರಾಸಿಯ– ಬಾನ್ಸುರಿ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಕಲಾವತಿ ಅವಧೂತ್, ಹಾಡುಗಾರಿಕೆ–ತ್ಯಾಗರಾಜರ ಕೃತಿಗಳು, 10.00 ಚೈತ್ರವನ– ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು.

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರ್ಕಾರದಲ್ಲಿ ಹಣವಿಲ್ಲ!

● ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪ ● ಚುನಾವಣಾ ಆಯೋಗವೇ ಈ ವಿಚಾರವನ್ನು ಕೋರ್ಟ್ ಗಮನಕ್ಕೆ ತಂದಿದೆ

ಬೆಂಗಳೂರು, ಏ.27– ಅಧಿಕಾರಕ್ಕಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಕಚ್ಚಾಟ ನಡೆಸುತ್ತಿರುವ ಪರಿಣಾಮ ರಾಜ್ಯದ ಆರ್ಥಿಕ ವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದೆ ಜಿಲ್ಲಾ, ತಾಲೂಕು ಪಂಚಾಯಿತಿ ಸೇರಿದಂತೆ ಯಾವುದೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರ್ಕಾರದ ಬಳಿ ಹಣವಿಲ್ಲ ಎಂದು ಕೇಂದ್ರ ಕೈಗಾರಿಕೆ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆಪಾದಿಸಿದ್ದಾರೆ



ತುಮಕೂರು ಜಿಲ್ಲೆಯ ತುರುವೇಕೆರೆ ತಾಲೂಕಿನ ಸೊರವನಹಳ್ಳಿ ಮತ್ತು ಕುಣಿಗಲ್ ತಾಲೂಕಿನ ಮಾದಪ್ಪನಹಳ್ಳಿ ಗ್ರಾಮಗಳಲ್ಲಿ ನೂತನ ದೇವಾಲಯಗಳ ಲೋಕಾರ್ಪಣೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಣವಿಲ್ಲದ ಕಾರಣಕ್ಕೆ ಗ್ರೇಟರ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಯಾವುದೇ ಪಾಲಿಕೆಗಳ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಹೇಳಿದರು.

ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಚುನಾವಣೆಯನ್ನು ಜೂನ್ 30ರ ಬದಲು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲು ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದೆ. ಜನಗಣತಿ ಮತ್ತು ಮತದಾರರ ಪಟ್ಟಿಯ ತಿದ್ದುಪಡಿ ಕಾರ್ಯಗಳಲ್ಲಿ ಸಿಬ್ಬಂದಿ ನಿರತರಾಗಿರುವುದು ಹಾಗೂ ಹಣಕಾಸಿನ ಕೊರತೆ ಇದಕ್ಕೆ ಕಾರಣವಾಗಿದ್ದು, ಆಯೋಗವು ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದೆ. ಅಲ್ಲಿಗೆ ರಾಜ್ಯ ಸರ್ಕಾರ ಆರ್ಥಿಕವಾಗಿ ದುರ್ಭರ ಸ್ಥಿತಿಯಲ್ಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಜನರಿಗೆ ಉಚಿತ ಗ್ಯಾರಂಟಿಗಳನ್ನು ನೀಡಿದೆ ಸರಿ. ಆದರೆ ಈ ಗ್ಯಾರಂಟಿಗಳಿಂದ ಖಜಾನೆಯನ್ನು ಖಾಲಿ ಮಾಡಿದೆ. ಈಗಾಗಲೇ ರಾಜ್ಯದ ಸಾಲ ಒಟ್ಟು 7,26,000 ಲಕ್ಷ ಕೋಟಿ ಮೀರಿದೆ. ಪ್ರತಿ ಕನ್ನಡಿಗನ ಮೇಲೆಯೂ ತಲಾ ಒಂದು ಲಕ್ಷ ರೂಪಾಯಿ ಸಾಲವಿದೆ. ಈ ಸಾಲವನ್ನು ತೀರಿಸುವುದು ಹೇಗೆ ಎಂದು ಪ್ರಶ್ನಿಸಿದರು

ಇಂತಹ ಸರ್ಕಾರದಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದು ಸಾಧ್ಯ ಆಗುತ್ತದೆಯೇ? ತಾಲೂಕು, ಜಿಲಾ ಪಂಚಾಯಿತಿ ಚುನಾವಣೆಗಳು ನಡೆಯುವುದಿಲ್ಲ. ಗ್ರೇಟರ್ ಬೆಂಗಳೂರು ಎಲೆಕ್ಷನ್ ಕೂಡ ಆಗುವುದಿಲ್ಲ. ಕರ್ನಾಟಕ ರಾಜ್ಯ ಚುನಾವಣಾ ಆಯೋಗವೇ ನ್ಯಾಯಾಲಯಕ್ಕೆ ಈ ಸರ್ಕಾರ ಹಣ ಕೊಡುತ್ತಿಲ್ಲ ಎಂದು ಹೇಳಿದೆ. ಇದಕ್ಕಿಂತ ದುಸ್ಥಿತಿ ಇನ್ನೇನಿದೆ ಎಂದರು.

ರಾಜ್ಯದ ಜನರು ಒಂದು ಕಡೆ ಕುಡಿಯುವ ನೀರಿನ ಸಮಸ್ಯೆಗೆ ತತ್ತರಿಸುತ್ತಿದ್ದರೆ, ಇನ್ನೊಂದು ಕಡೆ ಅಕಾಲಿಕ ಮಳೆಯಿಂದ ಭಾರೀ ಬೆಳೆ ನಷ್ಟಕ್ಕೆ ತುತ್ತಾಗಿದ್ದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಸಿಎಂ ಕುರ್ಚಿ ಕಾಳಗದಲ್ಲಿ ಮೈಮರೆತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಂಕಿ ರೀತಿಯ ಬೇಸಿಗೆಯನ್ನು ನೋಡುತ್ತಿದ್ದೇವೆ. ಉಷ್ಣಗಾಳಿಗೆ ಜನರು ತತ್ತರಿಸುತ್ತಿದ್ದಾರೆ. ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ರೈತರು ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರ ಜನರ ನೆರವಿಗೆ ಧಾವಿಸುವುದು ಇರಲಿ, ಅವರ ಬಗ್ಗೆ ಕನಿಕರದ ಮಾತನ್ನು ಕೂಡ ಆಡುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಈ ಸರಕಾರಕ್ಕೆ ಜನರು ಎಂದರೆ ಭಯಭಕ್ತಿ ಇಲ್ಲವಾಗಿದೆ ಎಂದ ಅವರು, ಕೇವಲ ಗ್ಯಾರಂಟಿಗಳನ್ನು ಕೊಟ್ಟು ಜೀವನ ಉತ್ತಮಗೊಳಿಸಬಹುದು ಎಂದು ಆಡಳಿತ ನಡೆಸುವವರು ನಂಬಿದ್ದಾರೆ. ಆದರೆ, ಸ್ವಾಭಿಮಾನದ ಜನರನ್ನು ಪರಾವಲಂಬಿಗಳನ್ನಾಗಿ ಮಾಡಿ ಕೈಯೊಡ್ಡಿ ಬೇಡುವ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ ಎಂದು ಕೇಂದ್ರ ಸಚಿವರು ರಾಜ್ಯ ಸರ್ಕಾರದ ವಿರುದ್ಧ ಟೀಕಾ ಪ್ರಹಾರ ನಡೆಸಿದರು.

ಭಾರತ ಜಗತ್ತಿನ ಮೂರನೇ ಬೃಹತ್ ಆರ್ಥಿಕ ಶಕ್ತಿ ಆಗುವತ್ತ ನಾಗಾಲೋಟದಲ್ಲಿ ಸಾಗುತ್ತಿದೆ. ಆದರೆ, ಕರ್ನಾಟಕ ಮಾತ್ರ ಕಾಂಗ್ರೆಸ್ ಕೈಗೆ ಸಿಕ್ಕಿ ಅಭಿವೃದ್ಧಿ ಹಿಮ್ಮುಖವಾಗಿ ಚಲಿಸುತ್ತಿದೆ. ಸಂಬಳ ಕೊಡುವುದಕ್ಕೂ ಕಷ್ಟ ಎನ್ನುವಂಥ ಧಾರುಣ ಪರಿಸ್ಥಿತಿಗೆ ರಾಜ್ಯವನ್ನು ತಂದು ನಿಲ್ಲಿಸಿದ್ದಾರೆ ಎಂದು ಕಿಡಿಕಾರಿದರು.

ಇದು ನನ್ನ ಕೊನೆಯ ರ‍್ಯಾಲಿ; ಮೇ 4ರ ನಂತರ ಬಿಜೆಪಿಯ ಪ್ರಮಾಣವಚನ ಸಮಾರಂಭಕ್ಕೆ ಬರ್ತೀನಿ

ಪ್ರಧಾನಿ ಮೋದಿ ವಿಶ್ವಾಸ



ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಎರಡನೇ ಹಂತದ ಮತದಾನಕ್ಕೂ ಮುನ್ನ, ಪ್ರಧಾನಿ ನರೇಂದ್ರ ಮೋದಿ ಸೋಮವಾರ ಬಿಜೆಪಿ ಪರ ಬಿರುಸಿನ ಪ್ರಚಾರ ನಡೆಸಿದರು. ಬ್ಯಾರಕ್‌ಪೋರ್‌ನಲ್ಲಿ ಸಾರ್ವಜನಿಕ ಸಭೆಯನ್ನು ದ್ದೇಶಿಸಿ ಮಾತನಾಡಿದ ಅವರು, ಇದು ರಾಜ್ಯದಲ್ಲಿ ತಮ್ಮ ಕೊನೆಯ ಚುನಾವಣಾ ರ‍್ಯಾಲಿ ಎಂದು ಹೇಳಿದರು. ಪಕ್ಷದ ಕಾರ್ಯಕ್ಷಮತೆಯ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ ಅವರು, ಬಿಜೆಪಿಯ ಪ್ರಮಾಣವಚನ ಸಮಾರಂಭಕ್ಕೆ ಬರುವುದಾಗಿ ಹೇಳಿದ ಮೋದಿ, ಈ ಬಾರಿ ಬಿಜೆಪಿ ಸರ್ಕಾರ ರಚಿಸುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಈ ಚುನಾವಣೆಯಲ್ಲಿ ಇದು ನನ್ನ ಕೊನೆಯ ರ‍್ಯಾಲಿ. ಮೇ 4ರಂದು ಫಲಿತಾಂಶಗಳ ನಂತರ, ನಾನು ಖಂಡಿತವಾಗಿಯೂ ಬಿಜೆಪಿಯ ಪ್ರಮಾಣವಚನ ಸಮಾರಂಭಕ್ಕೆ ಬರುತ್ತೇನೆಂಬ ವಿಶ್ವಾಸದೊಂದಿಗೆ ನಾನು ಹಿಂತಿರುಗುತ್ತಿದ್ದೇನೆ. ಇದು ನನ್ನ ಉತ್ಸಾಹವನ್ನು ಇನ್ನಷ್ಟು ಹೆಚ್ಚಿಸುತ್ತದೆ. ನಾನು ಹೆಲಿಪ್ಯಾಡ್‌ನಿಂದ ಇಲ್ಲಿಗೆ ಬರುತ್ತಿದ್ದೆ. ಅದು ಸುಮಾರು ಎರಡು ಕಿಲೋಮೀಟರ್ ದೂರದಲ್ಲಿತ್ತು. ರಸ್ತೆಯ ಎರಡೂ ಬದಿಗಳಲ್ಲಿ ಇಷ್ಟು ದೊಡ್ಡ ಜನಸಂದಣಿ ಇತ್ತು. ಬೆಳಿಗ್ಗೆ ಸಾವಿರಾರು ಜನರು ನನ್ನನ್ನು ಆಶೀರ್ವದಿಸಲು ಬಂದಿದ್ದಾರೆಂದು ನಾನು ಊಹಿಸಲೂ ಸಾಧ್ಯವಿಲ್ಲ ಎಂದರು.

ರಾಜ್ಯದಲ್ಲಿ ಕೈಗಾರಿಕಾ ಚಟುವಟಿಕೆ ಕುಸಿದಿದೆ. ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ ಎಂದು ಆರೋಪಿಸಿ ಪ್ರಧಾನಿ ಮೋದಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮೇಲೆ ಕಟುವಾದ ದಾಳಿ ನಡೆಸಿದರು. ಪಶ್ಚಿಮ ಬಂಗಾಳದ ಭವಿಷ್ಯದ ಅಭಿವೃದ್ಧಿಗೆ ಟಿಎಂಸಿ ಸರ್ಕಾರಕ್ಕೆ ಸ್ಪಷ್ಟವಾದ ಮಾರ್ಗಸೂಚಿ ಇಲ್ಲ ಎಂದು ಅವರು ಹೇಳಿದರು. ಡಬಲ್–ಎಂಜಿನ್ ಸರ್ಕಾರದ ಅಗತ್ಯವನ್ನು ಒತ್ತಿ ಹೇಳಿದ ಮೋದಿ, ರಾಜ್ಯ ಮತ್ತು ಕೇಂದ್ರ ಸರ್ಕಾರ ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ತ್ವರಿತ ಅಭಿವೃದ್ಧಿ ಸಾಧ್ಯ ಎಂದು ವಾದಿಸಿದರು. ಆಡಳಿತ ಪಕ್ಷವನ್ನು ಗುರಿಯಾಗಿಸಿಕೊಂಡು, ಟಿಎಂಸಿಯ ಸಿಂಡಿಕೇಟ್ ವ್ಯವಸ್ಥೆಯನ್ನು ಕೆಡವಬೇಕು ಎಂದು ಹೇಳಿದರು. ಪಕ್ಷವು ರಚನಾತ್ಮಕ ಆಡಳಿತಕ್ಕಿಂತ ಹೆಚ್ಚಾಗಿ ಬೆದರಿಕೆ ಮತ್ತು ನಿಂದನಾತ್ಮಕ ರಾಜಕೀಯವನ್ನು ಅವಲಂಬಿಸಿದೆ ಎಂದು ಅವರು ಆರೋಪಿಸಿದರು.

ಮಹಿಳೆಯರಿಗೆ ರಾಜ್ಯ ಅಸುರಕ್ಷಿತ: ಮತ ಚಲಾಯಿಸುವಾಗ ಪಕ್ಷವು ತಮ್ಮ ನಂಬಿಕೆಗೆ ತಕ್ಕಂತೆ ಬದುಕಲು ವಿಫಲವಾಗಿದೆ ಎಂದು ಆರೋಪಿಸಿ, ಪ್ರಧಾನಿ ಮೋದಿ ಮಹಿಳಾ ಮತದಾರರಿಗೆ ಮನವಿ ಮಾಡಿದರು. ಟಿಎಂಸಿ ರಾಜ್ಯವನ್ನು ಮಹಿಳೆಯರಿಗೆ ಅಸುರಕ್ಷಿತವಾಗಿಸಿದೆ ಮತ್ತು ಜನರು ನೀಡಿದ ಜನಾದೇಶವನ್ನು ಗೌರವಿಸಿಲ್ಲ ಎಂದು ಅವರು ಹೇಳಿದರು. ಟಿಎಂಸಿ ಹೆಸರಿನಲ್ಲಿ ನಡೆದಿರುವ ತಪ್ಪುಗಳು ಮತ್ತು ಬೆದರಿಕೆಯ ಘಟನೆಗಳನ್ನು ನೆನಪಿಸಿಕೊಳ್ಳುವಂತೆ ಅವರು ಮತದಾರರನ್ನು ಕೇಳಿದರು.

ಹಿಂದಿನ ಭರವಸೆಗಳನ್ನು ಉಲ್ಲೇಖಿಸುತ್ತಾ, ಟಿಎಂಸಿ ಲಂಡನ್ ಮಾದರಿಯಲ್ಲಿ ಕೋಲ್ಕತ್ತಾವನ್ನು ಅಭಿವೃದ್ಧಿಪಡಿಸುವುದಾಗಿ ಭರವಸೆ ನೀಡಿತ್ತು. ಆದರೆ ಕಳೆದ 15 ವರ್ಷಗಳಲ್ಲಿ ನಗರದ ಗುರುತು ನಕಾರಾತ್ಮಕವಾಗಿ ಬದಲಾಗಿದೆ ಎಂದು ಅವರು ಹೇಳಿದರು. ಅಕ್ರಮ ವಲಸಿಗರಿಗೆ ನಗರದಲ್ಲಿ ನೆಲೆಸಲು ಅವಕಾಶ ನೀಡಲಾಗಿದೆ. ನಗರದ ಮೂಲ ಗುರುತನ್ನು ರಕ್ಷಿಸಲು ಕೋಲ್ಕತ್ತಾ ನಿವಾಸಿಗಳು ಒಟ್ಟಾಗಿ ಕೆಲಸ ಮಾಡುವಂತೆ ಅವರು ಮನವಿ ಮಾಡಿದರು.

ಮತದಾರರಿಗೆ ಕಮಲದ ಚಿಹ್ನೆಯನ್ನು ಆಯ್ಕೆ ಮಾಡುವಂತೆ ಒತ್ತಾಯಿಸಿದರು. ಇದು ಉತ್ತಮ ಕಾನೂನು ಮತ್ತು ಸುವ್ಯವಸ್ಥೆಯನ್ನು ಖಚಿತಪಡಿಸುತ್ತದೆ. ಮಹಿಳೆಯರು ರಾತ್ರಿಯೂ ಸಹ ಮುಕ್ತವಾಗಿ ಮತ್ತು ಸುರಕ್ಷಿತವಾಗಿ ಚಲಿಸಲು ಅನುವು ಮಾಡಿಕೊಡುತ್ತದೆ ಮತ್ತು ಅನ್ಯಾಯಕ್ಕೊಳಗಾದ ಮಹಿಳೆಯರಿಗೆ ನ್ಯಾಯ ಒದಗಿಸುತ್ತದೆ ಎಂದು ಹೇಳಿದರು.

53 ಜನ ಸಾವನ್ನಪ್ಪಿದ್ದ ದೆಹಲಿ ಗಲಭೆ ಪ್ರಮುಖ ಆರೋಪಿ ಉಮರ್ ಖಾಲಿದ್ ಬೆಂಬಲಿಸಿ ಕಾರ್ಯಕ್ರಮ!

ಬಿಜೆಪಿಯಿಂದ ಆಯುಕ್ತರಿಗೆ ದೂರು



ಬೆಂಗಳೂರು: ಉಮರ್ ಖಾಲಿದ್ ಅವರನ್ನು ಬೆಂಬಲಿಸುವ ಕಾರ್ಯ ಕ್ರಮವನ್ನು ರದ್ದುಗೊಳಿಸುವಂತೆ ಬಿಜೆಪಿ ಬೆಂಗಳೂರು ಪೊಲೀಸ್ ಆಯುಕ್ತರಿಗೆ ಒತ್ತಾಯಿಸಿದೆ. ಬೆಂಗಳೂರು ನಗರದಲ್ಲಿ ನಡೆಸಲು ಉದ್ದೇಶಿಸಲಾಗಿರುವ ಉಮರ್ ಖಾಲಿದ್ ಅವರನ್ನು ಬೆಂಬಲಿಸುವ ಕಾರ್ಯಕ್ರಮವನ್ನು ರದ್ದುಗೊಳಿಸುವಂತೆ ಕರ್ನಾಟಕ ಬಿಜೆಪಿ ಸೋಮವಾರ ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರಿಗೆ ಮನವಿ ಮಾಡಿದೆ.

ಬೆಂಗಳೂರು ಕೇಂದ್ರ ಸಂಸದ ಪಿ ಸಿ ಮೋಹನ್ ನೇತೃತ್ವದ ಬಿಜೆಪಿ ನಾಯಕರ ನಿಯೋಗವು ಆಯುಕ್ತರನ್ನು ಭೇಟಿ ಮಾಡಿ ಈ ನಿಟ್ಟಿನಲ್ಲಿ ಜ್ಞಾಪಕ ಪತ್ರವನ್ನು ಸಲ್ಲಿಸಿದೆ. ಮೂಲಗಳ ಪ್ರಕಾರ, ಉಮರ್ ಖಾಲಿದ್ ಮತ್ತು ಅವರ ಪ್ರಪಂಚ ಪುಸ್ತಕದ ಸಂಪಾದಕರು ಏಪ್ರಿಲ್ 28 ರಂದು ಬೆಂಗಳೂರಿನಲ್ಲಿ ಪುಸ್ತಕದ ಆಯ್ದ ಭಾಗಗಳನ್ನು ಓದಲಿದ್ದಾರೆ, ನಂತರ ಕೆಲವು ಇತಿಹಾಸಕಾರರು ಮತ್ತು ಬುದ್ಧಿಜೀವಿಗಳು ಭಾಗವಹಿಸುವ ಸಾಧ್ಯತೆಯಿರುವ ಚರ್ಚೆ ನಡೆಯಲಿದೆ.

2020ರ ದೆಹಲಿ ಗಲಭೆಯ ಹಿಂದಿನ ಪಿತೂರಿ ಆರೋಪಕ್ಕೆ ಸಂಬಂಧಿಸಿದಂತೆ ಖಾಲಿದ್ ಜೈಲಿನಲ್ಲಿದ್ದಾರೆ. ಬೆಂಗಳೂರು ನಗರದಲ್ಲಿ, ಭಯೋತ್ಪಾದನಾ ವಿರೋಧಿ ಕಾನೂನುಗಳ ಅಡಿಯಲ್ಲಿ ಪ್ರಸ್ತುತ ಬಂಧನದಲ್ಲಿರುವ ಖಾಲಿದ್‌ಗೆ ಬೆಂಬಲ ವ್ಯಕ್ತಪಡಿಸಲು ಉಮರ್ ಖಾಲಿದ್ ಪ್ರಪಂಚ ವೇದಿಕೆಯಡಿಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಬಿಜೆಪಿ ತನ್ನ ಜ್ಞಾಪಕ ಪತ್ರದಲ್ಲಿ ತಿಳಿಸಿದೆ.

ಅಂತಹ ವ್ಯಕ್ತಿಯನ್ನು ವೈಭವೀಕರಿಸುವುದು ಕ್ರಿಮಿನಲ್ ಅಂಶಗಳನ್ನು ಪ್ರೋತ್ಸಾಹಿಸಿದಂತೆ. ನಮ್ಮ ನಗರದಲ್ಲಿ ಇಂತಹ ಕಾರ್ಯಕ್ರಮ ನಡೆಯುತ್ತಿರುವುದು ಆಘಾತಕಾರಿ. ಉಮರ್ ಖಾಲಿದ್ ಪರ ಘೋಷಣೆಗಳು ಮತ್ತು ಗೋಡೆ ಬರಹಗಳು ಈಗಾಗಲೇ ನಗರದಾದ್ಯಂತ ಕಾಣಿಸಿಕೊಂಡಿರುವುದು ಗಂಭೀರ ಕಳವಳಕಾರಿ ವಿಷಯವಾಗಿದೆ, ಇದು ಅಂತಹ ಜಾಲಗಳ ಹರಡುವಿಕೆಯನ್ನು ಸೂಚಿಸುತ್ತದೆ ಎಂದು ಅದು ಹೇಳಿದೆ.

ನಗರದಲ್ಲಿ ಶಾಂತಿ ಕಾಪಾಡುವ ಹಿತದೃಷ್ಟಿಯಿಂದ, ಈ ಕಾರ್ಯಕ್ರಮಕ್ಕೆ ನೀಡಲಾದ ಅನುಮತಿಯನ್ನು ಹಿಂಪಡೆಯಬೇಕೆಂದು ನಾವು ವಿನಂತಿಸುತ್ತೇವೆ. ಕಾರ್ಯಕ್ರಮ ಮುಂದುವರಿದರೆ ಮತ್ತು ಯಾವುದೇ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಉದ್ಭವಿಸಿದರೆ, ಬಿಜೆಪಿ ಅದಕ್ಕೆ ಜವಾಬ್ದಾರನಾಗಿರುವುದಿಲ್ಲ. ನಗರದ ಹಿತದೃಷ್ಟಿಯಿಂದ ನಮ್ಮ ವಿನಂತಿಯನ್ನು ಪರಿಗಣಿಸಿ ಕಾರ್ಯಕ್ರಮವನ್ನು ರದ್ದುಗೊಳಿಸುವಂತೆ ನಾವು ನಿಮ್ಮನ್ನು ಒತ್ತಾಯಿಸುತ್ತೇವೆ ಎಂದು ಅದು ಹೇಳಿದೆ.

ಏಪ್ರಿಲ್ 20 ರಂದು ಸುಪ್ರೀಂಕೋರ್ಟ್, 2020ರ ದೆಹಲಿ ಗಲಭೆಯ ಹಿಂದಿನ ಪಿತೂರಿಯೊಂದಿಗೆ ಸಂಬಂಧ ಹೊಂದಿರುವ ಆರೋಪಗಳನ್ನು ನಂಬಲು ಸಮಂಜಸವಾದ ಆಧಾರಗಳಿವೆ ಎಂದು ಗಮನಿಸುತ್ತಾ, ಕಾರ್ಯಕರ್ತ ಖಾಲಿದ್ ಅವರು ಜಾಮೀನು ನಿರಾಕರಿಸಿದ ತೀರ್ಪನ್ನು ಪರಿಶೀಲಿಸುವಂತೆ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿತು.

ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ (ಯುಎಪಿಎ) ಅಡಿಯಲ್ಲಿ ಖಾಲಿದ್ ಮತ್ತು ಶಾರ್ಜೀಲ್ ಇಮಾಮ್ (ಇನ್ನೊಬ್ಬ ಆರೋಪಿ) ವಿರುದ್ಧ ಪ್ರಾಥಮಿಕವಾಗಿ ಮೇಲ್ನೋಟಕ್ಕೆ ಪ್ರಕರಣವಿತ್ತು ಎಂದು ಸುಪ್ರೀಂ ಕೋರ್ಟ್ ಈ ಹಿಂದೆ ಹೇಳಿತ್ತು, ಗಲಭೆಯ ಯೋಜನೆ, ಸಜ್ಜುಗೊಳಿಸುವಿಕೆ ಮತ್ತು ಕಾರ್ಯತಂತ್ರದ ನಿರ್ದೇಶನದಲ್ಲಿ ಅವರು ಭಾಗಿಯಾಗಿದ್ದಾರೆಂದು ಪ್ರಾಸಿಕ್ಯೂಷನ್ ದಾಖಲೆಗಳು ಸೂಚಿಸುತ್ತವೆ ಎಂದು ಅದು ಹೇಳಿತ್ತು

ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ನಾಗರಿಕರ ನೋಂದಣಿ (ಎನ್‌ಆರ್‌ಸಿ) ವಿರುದ್ಧದ ಪ್ರತಿಭಟನೆಗಳ ಸಂದರ್ಭದಲ್ಲಿ ಈಶಾನ್ಯ ದೆಹಲಿಯಲ್ಲಿ ಫೆಬ್ರವರಿ 2020ರ ಗಲಭೆಗಳು ಭುಗಿಲೆದ್ದವು, 53 ಜನರು ಸಾವನ್ನಪ್ಪಿದರು ಮತ್ತು 700ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡನಿಗೆ ಹುಡುಗಿ ನೋಡಲು ಹುಡುಗಿ ಮನೆಗೆ ಹೋಗ್ತಾರೆ
ಗುಂಡನ ತಂದೆ : ಹುಡುಗಿ ನಮಗೆ ಹಿಡಿಸಿದ್ದಾಳೆ. ಮದುವೆಗೆ ಏನೇನು ಹಾಕ್ತೀರ!
ಹುಡುಗಿ ತಂದೆ : ತಲೆ ಕೂದಲಿಗೆ ಡೈ ಅಥವಾ ವಿಗ್, ಹೊಸ ಹಲ್ಲಿನ ಸೆಟ್, ದಪ್ಪನೆಯ ಮೇಕಪ್, ಕಣ್ಣಿಗೆ ಕಪ್ಪು, ಕೈಗಳಿಗೆ ಮೇಹಂದಿ ಹಾಕ್ತೀವಿ.

ಮೈಸೂರು ಮಿತ್ರ
ಮಂಗಳವಾರ, ಏಪ್ರಿಲ್ 28, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕಣ್ಣಿನ ತುಂಬಾ ನೀರಿದ್ದರೂ ಜಾರಿಸಲು ಆಗುತ್ತಿಲ್ಲ. ಮನಸ್ಸಿನ ತುಂಬಾ ನೋವಿದ್ದರೂ ಯಾರ ಬಳಿಯೂ ಹೇಳಲಾಗುತ್ತಿಲ್ಲ. ಎಲ್ಲರೂ ಜೊತೆಯಲ್ಲಿ ಇದ್ದರೂ ಯಾರೂ ನನ್ನವರಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಎಚ್ಚರ ತಪ್ಪಿ ಮಾತನಾಡಬಾರದು, ಹುಚ್ಚನಂತೆ ವರ್ತಿಸಬಾರದು.

ನಿಮ್ಮ ಪತ್ರಗಳು

ಶಾಲೆಗಳಲ್ಲಿ ಪತ್ರಿಕೆ ಓದು:ಉತ್ತಮ ನಿರ್ಧಾರ

ಮಾನ್ಯರೆ,

ಶಾಲೆಗಳಲ್ಲಿ ಪ್ರತಿ ದಿನ ಹತ್ತು ನಿಮಿಷ ಕನ್ನಡ ಪತ್ರಿಕೆ ಓದುವುದನ್ನು ಕಡ್ಡಾಯಗೊಳಿಸಲು ಶಾಲಾ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್ ಅವರು ಸೂಚಿಸಿರುವುದು ಉತ್ತಮ ನಿರ್ಧಾರ. ಅದು 1978–79 ನಾನು ನಂಜನಗೂಡು ತಾಲೂಕು ಕಳಲೆ ಗ್ರಾಮದ ಸಾರ್ವಜನಿಕ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಆರ್.ಭಾರತಿ ಶಂಕರ್ ಎನ್ನುವವರು ಮುಖ್ಯೋಪಾಧ್ಯಾಯರಾಗಿದ್ದರು. ಅವರು ಬೆ.10.20ಕ್ಕೆ ಪ್ರಾರ್ಥನೆ ಆದ ಕೂಡಲೇ ಪತ್ರಿಕೆಯ ಮುಖ್ಯ ಅಂಶಗಳನ್ನು ವಿದ್ಯಾರ್ಥಿಗಳಿಂದ ಓದಿಸುತ್ತಿದ್ದರು. ಇದು ನಮಗೆ ಪತ್ರಿಕೆ ಓದಲು ಪ್ರೇರಣೆಯಾಗಿತ್ತು.

ಶಿಕ್ಷಣ ಇಲಾಖೆ ಎಲ್ಲಾ ಶಾಲೆಗಳಲ್ಲಿ ಕನಿಷ್ಠ ಎರಡು ರಾಜ್ಯ ಮಟ್ಟದ ಹಾಗೂ ಸ್ಥಳೀಯ ದಿನ ಪತ್ರಿಕೆಗಳು ಲಭ್ಯವಿರುವಂತೆ ಮಾಡಿ ವಿದ್ಯಾರ್ಥಿಗಳಿಂದ ಓದಿಸುವಂತೆ ಸೂಚನೆ ನೀಡಲಿ. ಇದು ಅವರ ಸಾಮಾನ್ಯ ಜ್ಞಾನಾರ್ಜನೆಗೂ ಸಹಾಯವಾಗುತ್ತದೆ. ಪತ್ರಿಕೆಗಳ ಬೆಳವಣಿಗೆಗೂ ಸಹಕಾರಿಯಾಗುತ್ತದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಹೂಟಗಳ್ಳಿ ಎನ್‌ಹೆಚ್‌ಬಿ ಬಡಾವಣೆಯಲ್ಲಿ ಗಲೀಜು ನೀರು ಹರಿಯುವುದನ್ನು ತಡೆಯಿರಿ



ಮಾನ್ಯರೇ,

ಮೈಸೂರಿನ ಹೂಟಗಳ್ಳಿ ಎನ್‌ಹೆಚ್‌ಬಿ ಬಡಾವಣೆಯಲ್ಲಿ ಅಕ್ಕ ಪಕ್ಕದ ಬಡಾವಣೆಯ ಗಲೀಜು ಮಳೆ ನೀರು ಮೋರಿಯಲ್ಲಿ ಹರಿಯುತ್ತಿದೆ. ಇದರಿಂದ ದುರ್ವಾಸನೆ, ಸೊಳ್ಳೆಗಳ ವಾಸ ಸ್ಥಾನವಾಗಿದೆ. ಇಲ್ಲಿನ ನಿವಾಸಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಬಡಾವಣೆಗೆ ಸೂಕ್ತ ಯುಜಿಡಿ ವ್ಯವಸ್ಥೆ ಕಲ್ಪಿಸಿ ಮಳೆ ನೀರು ಮೋರಿ ಗಳನ್ನು ಸ್ವಚ್ಛವಾಗಿರಿಸಲು ನಗರ ಸಭೆ ವ್ಯವಸ್ಥೆ ಮಾಡಬೇಕೆಂದು ಈ ಮೂಲಕ ಮನವಿ.

–ಅಶೋಕ್. ಎಲ್.ಜಿ., ಹೂಟಗಳ್ಳಿ, ಮೈಸೂರು.

ರೈತರಿಗೆ ವಂಚನೆ: ವಿಮಾ ಕಂಪನಿಗಳ ಅಟ್ಟಹಾಸ

ಮಾನ್ಯರೆ,

ವಿಮಾ ಕಂಪನಿಗಳು ರೈತರ ಬೆಳೆನಷ್ಟ ಪರಿಹಾರದಲ್ಲಿ ನಡೆಸುತ್ತಿರುವ ವ್ಯವಸ್ಥಿತ ವಂಚನೆ ಅಮಾನವೀಯ. ಶೇ.80ರಷ್ಟು ರೈತರು ವಿಮೆಯ ಪ್ರೀಮಿಯಂ ಪಾವತಿಸಿದರೂ, ಕೇವಲ ಶೇ.15ರಷ್ಟು ರೈತರಿಗೆ ಮಾತ್ರ ಅಲ್ಪ ಮೊತ್ತ ಸಿಗುತ್ತಿರುವುದು ವಿಪರ್ಯಾಸ. ಕಂಪನಿಗಳು ಸರ್ಕಾರದ ಅನುದಾನವನ್ನು ಲೂಟಿ ಮಾಡುತ್ತಿವೆಯೇ ಹೊರತು, ಸಂಕಷ್ಟದಲ್ಲಿರುವ ಕೃಷಿಕನ ಕೈಹಿಡಿಯುತ್ತಿಲ್ಲ. ಹಣ್ಣು, ತರಕಾರಿ, ಜೋಳ, ರಾಗಿ, ಸೂರ್ಯಕಾಂತಿ ಹಾಗೂ ತೆಂಗು ಬೆಳೆಗಾರರು ತತ್ತರಿಸುತ್ತಿರುವುದು ಆತಂಕಕಾರಿ. ಅಧಿಕಾರಿಗಳು ಕೇವಲ ಸಮೀಕ್ಷೆಯ ನಾಟಕ ವಾಡದೆ, ಅಂಕಿ–ಅಂಶಗಳ ಆಧಾರದ ಮೇಲೆ ತಕ್ಷಣವೇ ನ್ಯಾಯ ಒದಗಿಸಬೇಕು. ಸರ್ಕಾರ ಈ ಕಂಪನಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದರೆ ರೈತರ ಆತ್ಮಹತ್ಯೆ ಸರಣಿ ನಿಲ್ಲದು.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ಮೌಲ್ಯಾಧಾರಿತ ರಾಜಕಾರಣ ಎಂಬುದೇ ನಶಿಸಿ ಹೋಗಿದೆ

ಮಾನ್ಯರೆ,

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ನಡೆದ 'ಚುನಾವಣಾ ರಾಜಕಾರಣ' ಸಂವಾದದಲ್ಲಿ, ಶಾಸಕ ಜಿ.ಟಿ.ದೇವೇಗೌಡ ಅತ್ಯಂತ ಮಹತ್ವದ, ಆದರೂ ಆತಂಕಕಾರಿ ವಿಷಯವೊಂದನ್ನು ಬಿಚ್ಚಿಟ್ಟಿದ್ದಾರೆ.

ಇಂದು, ಹಣ ಬಲ, ಜಾತಿ ಬಲ ಇದ್ದವರಿಗೆ ಮಾತ್ರ 'ರಾಜಕಾರಣ' ಮಾಡಲು ಸಾಧ್ಯ ಮೌಲ್ಯಾಧಾರಿತ ರಾಜಕಾರಣ ಎಂಬುದೇ ನಶಿಸಿ ಹೋಗಿದೆ. 'ಮೌಲ್ಯಯುತ' ಪದದ ಪರಿಭಾಷೆಯೇ ಬದಲಾಗುತ್ತಿದೆ. ಚುನಾವಣೆಗೆ ಸ್ಪರ್ಧಿಸುವಾಗಲೂ, ಮತ ಗಿಟ್ಟಿಸಿಕೊಳ್ಳುವಾಗಲೂ ಮೌಲ್ಯವೇ ಮುಖ್ಯ ಹೊರತು, ಮೌಲ್ಯಾಧಾರಿತ ರಾಜಕಾರಣಿಗಳಿಗೆ ಬೆಲೆಯೇ ಇಲ್ಲ ಎಂಬುದನ್ನು ಅಪ್ಪಟ ಪ್ರಾಮಾಣಿಕ ರಾಜಕಾರಣಿ ನಿಜಲಿಂಗಪ್ಪ ಅವರನ್ನೇ ಸೋಲಿಸಿದ ಉದಾಹರಣೆ ಕೊಟ್ಟಿದ್ದಾರೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಮಹತ್ವದ ಅಂಶವೆಂದರೆ ನಮ್ಮ ಜನರೇ ಅವರನ್ನು ಸೋಲಿಸಿದ್ದರು ಎಂಬುದು! ಹಾಗಿದ್ದರೆ, ನಮ್ಮ ಮತದಾರರಿಗೆ ಏನು ಬೇಕಿತ್ತು, ಯಾರಿಗೆ ಮತ ಹಾಕಿದರೆ ಅದು ದಕ್ಕೀತು ಎಂಬುದೂ ಮುಖ್ಯ ಎಂದಂತಾಯಿತು. ವಿಧಾನ ಪರಿಷತ್‌ನಂತಹ ಬುದ್ಧಿವಂತರ ಕೂಟದಲ್ಲೂ, ವಿಷಯ ತಜ್ಞರ ಆಯ್ಕೆ ಆಗುತ್ತಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ಮೌಲ್ಯಯುತ ರಾಜಕಾರಣವೇ ಗೌಣ ಎಂಬುದನ್ನೂ ಅಷ್ಟು ಹಗುರವಾಗಿ ಪರಿಗಣಿಸಬಾರದು. ಜಿ.ಟಿ.ದೇವೇಗೌಡ, ಅತ್ಯಂತ ಹಿರಿಯ ರಾಜಕಾರಣಿ ಆಗಿದ್ದು, ಈ ಕ್ಷೇತ್ರದ ಬದ ಲಾವಣೆಗಳನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತ ಬಂದವರು. ಇಂಥವರ ಬಾಯಿಂದ ಬಂದ ಮಾತು ಸತ್ಯಕ್ಕೆ ದೂರವಾಗಲೂ ಸಾಧ್ಯವಿಲ್ಲ. ಆದರೇನು, ಈ ಪದ್ಧತಿಯನ್ನು ಸುಧಾರಿಸುವವರಾರು ? ಮತ್ತಾರು ? ನಾವು ಮತದಾರರೇ. ನಾವೆಂದು ಜಾಗೃತರಾಗುತ್ತೇವೋ ತಿಳಿಯದು. ಅಲ್ಲಿಯ ತನಕ ಇವೆಲ್ಲ ನಡೆಯುತ್ತಲೇ ಇರುತ್ತವೆ ಎಂಬುದು ಮಾತ್ರ ನಿಜ.

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು

ಗುಡಿಯನ್ನು ದುರಸ್ತಿಗೊಳಿಸಿ

ಮಾನ್ಯರೇ,

ಮೈಸೂರಿನ ಚಾಮುಂಡಿಪುರಂ ವೃತ್ತದ ಆಟೋ ನಿಲ್ದಾಣದ ಬಳಿಯಿರುವ ಮರದ ಕೆಳಗಿನ ಪುಟ್ಟ ದೇವರ ಗುಡಿಯು ಪೀಠದಿಂದ ಬೇರ್ಪಟ್ಟು ಅಪಾಯಕಾರಿಯಾಗಿ ವಾಲಿದೆ. ಯಾವ ಕ್ಷಣದಲ್ಲಾದರೂ ಇದು ರಸ್ತೆಗೆ ಉರುಳುವಂತಿದ್ದರೂ, ಯಾರೂ ಗಮನಹರಿಸದಿರುವುದು ವಿಷಾದನೀಯ. ಇಂದಿಗೂ ಅಲ್ಲಿ ದೀಪ ಉರಿಯುತ್ತಿರುವುದು ಭಕ್ತರ ಶ್ರದ್ಧೆಗೆ ಸಾಕ್ಷಿಯಾಗಿದೆ. ಸಂಬಂಧಪಟ್ಟವರು ಕೂಡಲೇ ಎಚ್ಚೆತ್ತು ಈ ಗುಡಿಯನ್ನು ದುರಸ್ತಿಗೊಳಿಸಬೇಕು. ಆ ಮೂಲಕ ಅನಾಹುತವನ್ನು ತಪ್ಪಿಸಿ, ಸಾರ್ವಜನಿಕರ ಧಾರ್ಮಿಕ ಭಾವನೆಯನ್ನು ಗೌರವಿಸಬೇಕೆಂದು ಈ ಮೂಲಕ ಕೋರುತ್ತೇನೆ.

–ಬಿ.ಗಣೇಶ ಕೆ.ಜಿ.ಕೊಪ್ಪಲು, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ನಾಗರಿಕತೆಯ ನಾಗಾಲೋಟ...

ಬದುಕು ಕಟ್ಟಿಕೊಳ್ಳಲಿಕ್ಕಾಗಿ ನೌಕರಿ, ಬೇಸಾಯ, ವ್ಯಾಪಾರ ಕೂಲಿನಾಲಿ ಇತ್ಯಾದಿ ಸಂಪಾದನೆಗಳನ್ನು ಮಾಡಿಕೊಂಡು ಜೀವನರಥ ಎಳೆಯುವ ನಾವು ನಮ್ಮ ನಮ್ಮ ಕೆಲಸಗಳಲ್ಲಿ ಪ್ರತೀ ದಿನ ಇದ್ದಂತೆಯೇ ಇದ್ದು ಬಿಡುವ ಕಾಲ ಮುಗೀತು!

ಯಾಕೆಂದರೆ ಈಗ ಕಾಲ ಬದಲಾಗಿದೆ. ಬದಲಾವಣೆ ಜಗದ ನಿಯಮ. ಕಾಲ ಬದಲಾಯಿತು ಎನ್ನುವ ಮಾತು ನಮಗೆ ಇಂದು ನಿನ್ನೆಯದಲ್ಲ. ಪ್ರತೀ ಶತಮಾನಗಳ ಹರಿಯುವಿಕೆ ಮತ್ತು ಯುಗಾಂತ್ಯದ ಕೊನೆವರೆಗೆ ಈ ಮಾತು ಚಾಲ್ತಿಯಲ್ಲಿರುತ್ತದೆ. ತ್ರೇತಾಯುಗದಲ್ಲಿ, ಕೃತಯುಗದಲ್ಲಿ, ದ್ವಾಪರದಲ್ಲಿ, ಕಲಿಯುಗದಲ್ಲಿ, ಯಾವುದೆಲ್ಲಾ ಹೇಗಿತ್ತು ಈಗ ಹೇಗಾಯ್ತು ಎಂಬ ವಿಚಾರಗಳನ್ನು ನೈತಿಕತೆ ಮತ್ತು ಧಾರ್ಮಿಕತೆಯ ವಿಷಯಗಳ ಆಧಾರದ ಮೇಲೆ ಉಲ್ಲೇಖಿಸಿದ ಹತ್ತಾರು ವಿವರಗಳು ನಮಗೆ ಗೊತ್ತು. ಆದರೆ ಕೃಷಿ, ಕೈಗಾರಿಕೆ, ವಾಣಿಜ್ಯ, ವಹಿವಾಟು, ನೌಕರಿ, ಉತ್ಪಾದನೆ ಹೀಗೆ ಹತ್ತಾರು ವೃತ್ತಿಗಳಲ್ಲಿ ತೊಡಗಿ ಜೀವನ ನಿರ್ವಹಣೆ ಮಾಡುತ್ತಾ ಬಂದ ಮನುಷ್ಯಲೋಕ ಪ್ರತೀ ಕಾಲಕ್ಕೂ ನಾಗರೀಕತೆಯ ನಾಗಾಲೋಟಕ್ಕೆ ಸ್ಪಂದಿಸಿ ಹೆಜ್ಜೆ ಹಾಕಿದೆ. ಬದಲಾದ ಕಾಲಮಾನಕ್ಕೆ ತಕ್ಕಂತೆ ಮನೋಮಾನ ಬದಲಾಯಿತು. ಆದರೆ ಕೌಶಲ್ಯಾಧಾರಿತ ವೃತ್ತಿಪರಿಣತಿ ಎಂಬ ಹೊಸ ಜಾಗೀರ್‌ದಾರು ಬಂದು ಹೊಸ ಹುಡುಗರ ಪಡೆಯನ್ನು ಹೇಗೆ ಕಂಗೆಡಿಸಿದೆ ಎಂದರೆ ಅದೇ ಒಂದು ವಿಸ್ಮಯ!

ಐಟಿ–ಬಿಟಿ ಕ್ಷೇತ್ರಗಳು ಬೆಳೆದು ಅತೀ ಹೆಚ್ಚು ಸಂಬಳದ ರುಚಿ ತೋರಿಸಿ ಯುವಕ ಸಮುದಾಯವನ್ನು ಆಕರ್ಷಿಸಿದ ಕಾಲಮಾನ ವಿದು. ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು, ಮುಗಿಲೆತ್ತರಕ್ಕೆ ತಲೆಎತ್ತಿ ಜಗತ್ತನ್ನೇ ಒಂದು ಮುಷ್ಟಿಯೊಳಗೆ ತಂತ್ರಜ್ಞಾನದ ಮಾಂತ್ರಿಕತೆಯೊಂದಿಗೆ ಪಳಗಿಸಿದ ಬದಲಾವಣೆಯನ್ನು ಕಣ್ಣಾರೆ ಕಂಡವರು ನಾವು. ಅಮೆರಿಕನ್ ಟೈಮ್ಸ್ ಪತ್ರಿಕೆಯನ್ನು ಅದು ಪ್ರಿಂಟಾದ ಕೂಡಲೇ ವಿಶ್ವದ ಯಾವ ಮೂಲೆಯಲ್ಲಿದ್ದರೂ ಅಂಗೈಯಲ್ಲಿ ಸ್ಕ್ರಾಲ್ ಮಾಡುತ್ತಾ ಓದಿದವರು ನಾವು, ಭಾರತದಲ್ಲಿ ಬೆಳೆದ ಗುಲಾಬಿ ಫ್ಲೋರಿಡಾದ ಹೂಕುಂಡಗಳಲ್ಲಿ ಬೆಳಗಾಗುವುದರಲ್ಲಿ ಅರಳಿ ನಗುವುದನ್ನು ಕಂಡವರು ನಾವು, ಡೆನ್ಮಾರ್ಕಿನ ಹಾಲು ಆಸ್ಟ್ರೇಲಿಯಾದ ಟೀ ಕೆಟಲುಗಳಲ್ಲಿ ಕುದಿಯುವ ಪರಿ ನೋಡಿದವರು ನಾವು, ವಿಶ್ವದ ಭೂಪಟವೇ ಹೀಗೆ ಚಿಕ್ಕದಾಗಲು ಕಾರಣ ವಿಜ್ಞಾನದ ತಾಂತ್ರಿಕ ಲೋಕ ಅನಾವರಣಗೊಂಡ ಪರಿಣಾಮ.

ಇಂಥ ಕಾಲಘಟ್ಟದಲ್ಲಿ ತಾಂತ್ರಿಕ ಶಿಕ್ಷಣ, ವಿಜ್ಞಾನದ ಪದವೀಧರರು, ಎಂಜಿನಿಯರಿಂಗ್ ಗ್ರ್ಯಾಜುಯೇಟುಗಳು, ಐಟಿ–ಬಿಟಿ ಕ್ಷೇತ್ರ ಗಳಲ್ಲಿ ಉದ್ಯೋಗ ಅರಸಿ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಉದ್ಯೋಗ ಗಿಟ್ಟಿಸಿಕೊಂಡು ಅಲ್ಲೇ ನೆಲೆಯೂರಿ ಬದುಕು ಕಟ್ಟಿ ಕೊಂಡರು. ಅಧಿಕ ಸಂಬಳ ಬರುವ ಕಾರಣ ತರುಣ ತಲೆಮಾರಿನ ಆರ್ಥಿಕ ಸ್ಥಿತಿ ಜೀವನ ಶೈಲಿ ಎಲ್ಲವೂ ಸುಧಾರಿಸಿತು. ಒಂದು ಐಷಾರಾಮಿ ವೈಭವದ ಜೀವನಕ್ಕೆ ಅವರು, ಅದರ ಕುಟುಂಬ ಒಗ್ಗಿ ಹೋಯಿತು. ಕಾರ್ಪೊರೇಟ್ ಸೆಕ್ಟರ್‌ನಲ್ಲಿ ನಮ್ಮ ಮನೆಯ ಹುಡುಗನೊಬ್ಬ ಡಾಲರ್ ಲೆಕ್ಕದಲ್ಲಿ ದುಡಿಯುತ್ತಾನೆ ಎಂಬ ಉದ್ಯೋಗ ಖಾತ್ರಿಯೇ ಆ ಕುಟುಂಬಕ್ಕೊಂದು ಸಾಮಾಜಿಕ ಸ್ಥಾನಮಾನ ಕಲ್ಪಿಸಿದಂತೆ! ಇತ್ತು ಈಗಲೂ ಇದೆ. ಯಾವಾಗ ಈ ಐಟಿಬಿಟಿ ಕ್ಷೇತ್ರ ಗರಿಗೆದರಿ ಮೂಟೆಗಟ್ಟಲೆ ಸಂಬಳದ ಲೆಕ್ಕದಲ್ಲಿ ದುಡ್ಡು ಕೊಟ್ಟಿತೋ ಸಾಮಾನ್ಯ ಪದವೀಧರರ, ಸರಕಾರಿ ನೌಕರರ ಉದ್ಯೋಗ ಸಂಬಳಗಳು ಐಟಿಬಿಟಿ ಸೆಕ್ಟರಿನ ಸಂಬಳ ಮತ್ತು ಚರಿಷ್ಮಾದ ಮುಂದೆ ಡಲ್ಲು ಹೊಡಯತೊಡಗಿದವು. ಆದರೆ ಈ ಎರಡೂ ವೃತ್ತಿಗಳ ನಡುವೆ ಕೂದಲೆಳೆಯ ಅಂತರದಲ್ಲಿ ವ್ಯತ್ಯಾಸವೊಂದಿತ್ತು. ಖಾಸಗಿ ಕಂಪನಿಗಳ ಈ ಅಧಿಕ ಸಂಬಳ ಮತ್ತು ಚರಿಷ್ಮಾಗಳು ಬೇಗ ಬೇಗ ದುಪ್ಪಟ್ಟಾಗುತ್ತಿತ್ತು. ಸಾಮಾನ್ಯ ಪದವೀಧರರ ಸಂಬಳ ಸಾರಿಗೆಗಳು ಆಮೆ ವೇಗದಲ್ಲಿ ಏರುತ್ತಿದ್ದವು. ಆರ್ಥಿಕತೆ ಹಿಗ್ಗುವಿಕೆ ಸಮಾನಾಂತರ ವಾಗಿಲ್ಲದಿರುವುದಕ್ಕೆ ಅವರು ಕೊಡುತ್ತಿದ್ದ ಕಾರಣಗಳೇನು ಗೊತ್ತ ಕೌಶಲ್ಯಾಧಾರಿತ ವೃತ್ತಿ ಪರಿಣತಿ ಎಂಬುದು.

ಅಂದರೆ ಕಂಪ್ಯೂಟರಿನ ಮುಂದೆ ಕುಳಿತು ಕೆಲಸ ಮಾಡುವವರ ಸ್ಪೀಡು ಗಂಟೆಗಳ ಲೆಕ್ಕವೇ ಇಲ್ಲದೆ ದುಡಿವ ಅವಿರತ ದುಡಿಮೆ, ಹಗಲು ರಾತ್ರಿಗಳ ಪರಿವೆಯೇ ಇಲ್ಲದೆ ಕೆಲಸದಲ್ಲಿ ತೊಡಗಿಸಿ ಕೊಂಡವರ ಶ್ರಮ. ಇವಿಷ್ಟನ್ನೂ ಸಾಮಾನ್ಯ ನೌಕರ ವರ್ಗದಲ್ಲಿ ಕಾಣಲಾಗುವುದಿಲ್ಲ. ಆ ಕಾರಣಕ್ಕೇ ಕಾರ್ಪೊರೇಟ್ ವಲಯ ತನ್ನ ನೌಕರರ ಹಿತ ಕಾಯುತ್ತಿದೆ ಎಂಬ ವರ್ತಮಾನ ಜಾರಿಯಲ್ಲಿತ್ತು. ಇಷ್ಟಾಗಿಯೂ ಕಾಲ ಬದಲಾದಂತೆಲ್ಲಾ ಈ ತಾಂತ್ರಿಕತೆಯ ಮಾಂತ್ರಿಕತೆಯೂ ಕೂಡ ಕಾಲಕ್ಕೆ ತಕ್ಕಂತೆ ಅಪ್‌ಡೇಷನ್ ಕೇಳುತ್ತಿದೆ. ಇಲ್ಲಿಯೂ ಕಾಲ ಬದಲಾಗಿದೆ.

ಈ ಹಿಂದಿನ ಹತ್ತು ವರ್ಷಗಳಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ಕೆಲಸಕ್ಕೆ ಸೇರಿ ಸೀನಿಯರ್ ಎನಿಸಿಕೊಂಡ ಅನೇಕರಿಗೆ ಈ ದಿನಗಳಲ್ಲಿ ಕೆಲಸ ಹೋಗಿದೆ. ಹಿಂದೆ ಬರುತ್ತಿದ್ದ ಅಧಿಕ ಸಂಬಳ ಸವಲತ್ತುಗಳು ಕಡಿಮೆಯಾಗಿವೆ. ಈ ಹೆಚ್ಚು ಕಡಿಮೆಗಳು ತೀರಾ ಸಾಮಾನ್ಯವೆನ್ನಬಹುದಾದ ವಿಷಯಗಳು. ಆದರೆ ಈಗ ಶುರುವಾಗಿರುವ ಹೊಸ ಟ್ರೆಂಡ್ ಏನೆಂದರೆ ಒಬ್ಬ ಸೀನಿಯರ್‌ಗೆ ಕೊಡುವ ಸಂಬಳದ ದರಕ್ಕೆ ಮೂರ ಜನ ಹೊಸ ಪ್ರತಿಭೆಗಳು ಆ ಹಿರಿಯ ನೌಕರನ



> “ ಹೊಸತನದ ಪ್ರತಿಯೊಂದಕ್ಕೂ ಅಪ್‌ಡೇಟೆಡ್ ಆಗುವ ಅನಿವಾರ್ಯತೆ ಬಂದೊದಗಿದೆ. ಅದಕ್ಕೆ ವಯಸ್ಸಿನ ಅಂತರವಿಲ್ಲ. ಆಸಕ್ತಿ, ಅನಾಸಕ್ತಿಗಳ ಗೊಂದಲವಿಲ್ಲ. ಪ್ರತಿದಿನದ ಹೊಂದಾಣಿಕೆಗೆ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವ ಉತ್ಸಾಹಕ್ಕೆ ಮನಸ್ಸನನ್ನು ಅಣಿ ಮಾಡಿ ಹೊಸ ಹೆಜ್ಜೆ ಇಡಲು ಮನಸ್ಸಿಗೆ ಕನ್ವಿನ್ಸ್ ಮಾಡಬೇಕು. ಮನಸ್ಸು ಮೇಲು ದನಿಯ ಮಾತು ಕೇಳಿದಷ್ಟು ಗದರಿಕೆಥಿ ಮಾತನ್ನು ಕೇಳುವುದಿಲ್ಲ. ಮುಂದೆ ಮತ್ತಿನ್ನೇನು ಹೊಸ ಅಪ್‌ಡೇಟ್‌ಗಳು ಬರುತ್ತವೋ ಗೊತಿಲ್ಲ! ಕೌಶಲ್ಯ, ವೃತ್ತಿಪರತೆ, ಹಣಕಾಸು, ಆಯ–ವ್ಯಯಗಳನ್ನೂ ಕೌಶಲ್ಯಾಧಾರಿತ ಪರಿಣತಿಯಂತೆಯೇ ನಮ್ಮ ಜೀವನಕ್ಕೂ ಡಿಸೈನ್ ಮಾಡಿಕೊಂಡು ಮುಂದಿನ ದಿನಗಳಲ್ಲಿ ಒಪ್ಪಿಸಿಕೊಳ್ಳಬೇಕಿದೆ.

ಸ್ಥಾನ ತುಂಬುತ್ತವೆ ಎಂಬುದು ಅದರಲ್ಲೂ ಎಂಥ ಸ್ಪರ್ಧೆ ಎಂದರೆ ಈ ಹಿಂದಿನ ಹಿರಿಯ ನೌಕರನಿಗಿಂತ ಹೊಸದಾಗಿ ಸೇರ್ಪಡೆಯಾಗುವ ಉತ್ಸಾಹಿ ಯುವ ಪ್ರತಿಭೆ ತಾಂತ್ರಿಕವಾಗಿ ತುಂಬಾ ಸ್ಟ್ರಾಂಗು. ಕೆಲಸ ಮಾಡುವ ಎನರ್ಜಿ, ಆಸಕ್ತಿ, ಕಲಿತ ವಿದ್ಯೆ ಮಾಡುವ ಉದ್ಯೋಗ ಎಲ್ಲಕ್ಕೂ ನೂತನ ಮಾದರಿ. ಬಹುರಾಷ್ಟ್ರೀಯ ಕಂಪನಿಗಳ ಮೆಷಿನರಿ ಮನಸ್ಸುಗಳಿಗೆ ಆ ಹಿರಿಯ ನೌಕರನ ಕ್ಷೇಮ ಮತ್ತು ಆತನ ಕುಟುಂಬ ಮತ್ತು ಆತ ನಡೆಸಿದ ಜೀವನ ಶೈಲಿ ಯಾವುದರ ಬಗ್ಗೆಯೂ ಚಿಂತೆ ಇದ್ದಂತೆ ಕಾಣುತ್ತಿಲ್ಲ. ಮಾರುಕಟ್ಟೆಯಂತೆಯೇ ಮನುಷ್ಯ ಮತ್ತು ಆತನ ಜೀವನಶೈಲಿ ಕೂಡ ದರಪಟ್ಟಿಯಂತೆಯೇ ಕಾಲಾನುಕಾಲಕ್ಕೆ ಬದಲಾಗುತ್ತಿರುತ್ತದೆ. ಅವರ ಆದ್ಯತೆಗಳೇನಿದ್ದರೂ ಕಂಪನಿಯ ಹಿತಾಸಕ್ತಿ ಆ ಹಿರಿಯ ನೌಕರ ಕೂಡ ಬಂದ ಹೊಸದರಲ್ಲಿ ಈ ತರುಣ ನೌಕರನಂತೆಯೇ ಇದ್ದ. ಕಾಲಕ್ರಮೇಣ ಈ ತರುಣ ನೌಕರ ಕೂಡ ಆ ಹಿರಿಯ ನೌಕರನ ಸ್ಥಿತಿಗೆ ಸರಿದು ಹೋಗುವ ಕಾಲ ಬಂದೇ ಬರುತ್ತದೆ. ಆದರೆ ವ್ಯಾಪಾರಿ ಮನೋವೃತ್ತಿಯ ಕಂಪನಿ ಮನಸ್ಥಿತಿಗಳ ಮುಂದೆ ಅತಿ ದೊಡ್ಡ ಮಾನವ ಸಂಪನ್ಮೂಲ ಕೌಶಲ್ಯಾಧಾರಿತ ಪರಿಣತಿಯೊಂದಿಗೆ ಪರೇಡ್ ಮಾಡುತ್ತಿದೆ. ಕಣ್ಣಿಗೆ ಕಾಣದ ಆರ್ಥಿಕ ಹೊಡೆತವೊಂದು ಪರಿಣತಿ ಮತ್ತು ಅಪ್‌ಡೇಷನ್ನಿನ ಹೆಸರಿನಲ್ಲಿ ಆಟವಾಡುತ್ತಿದೆ. ಅಷ್ಟಕ್ಕೂ ಸರಕಾರಿ ನೌಕರನ ನಿವೃತ್ತಿಯ ವಯಸ್ಸು ಅರವತ್ತಾದರೆ ಬಹುರಾಷ್ಟ್ರೀಯ ಕಂಪನಿಗಳ ಸ್ವಾಮ್ಯದಲ್ಲಿ ಮೂವತ್ತರ ಆಸುಪಾಸಿಗೇನೆ ಕಣ್ಣು, ಬೆನ್ನು, ಮನಸ್ಸು, ವಿಶ್ರಾಂತಿ ಕೇಳುತ್ತದೆ. ಚಲನಶೀಲತೆ ಬೇಕೆಂದರೆ ಅಪ್‌ಡೇಷನ್ ಕೇಳುತ್ತದೆ. ಮನುಷ್ಯನ ದೇಹ ಕೂಡ ಮೆಷಿನ್ ಟೂಲ್ಸ್‌ನಂತೆ ನವೀಕೃತಗೊಂಡು ಅಲಂಕೃತಗೊಂಡು ಆಸೀನವಾಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಖಾಸಗಿ ವಲಯದ ಉದ್ಯೋಗದಲ್ಲಿ ಶೇಕಡಾವಾರು ಖೋತಾ ಆಗಿದೆ. ಕೇಂದ್ರ ಸರ್ಕಾರದ ಅಸಹಾಯಕ ನೌಕರರನ್ನು ತೆಗೆಯುವ ನಿರ್ಧಾರ ಇತ್ತೀಚೆಗಷ್ಟೆ ಸದ್ದು ಮಾಡಿತ್ತು. ಒಟ್ಟಾರೆ ಮನುಷ್ಯ ನಿರಂತರವಾಗಿ ಕಲಿಯುವ ವಿದ್ಯಾರ್ಥಿ ಎಂಬುದೇನೋ ಸರಿ! ಆದರೆ ವಯಸ್ಸು, ಉತ್ಸಾಹ, ಅನುಭವಗಳಿಗೆ ಸರಕಾರಿ ಸ್ವಾಮ್ಯದಲ್ಲಿ ಇರುವಂತೆಯೇ ಖಾಸಗಿ ಸ್ವಾಮ್ಯದಲ್ಲೂ ಪ್ರಾಧಾನ್ಯತೆ ಕೊಡಬೇಕು. ಆದರೆ ಇಂದು ಏನಾಗಿದೆ ಮೈಸೂರ್ ಪಾಕ್ ಮಾಡಲು ಬರುವ ಬಾಣಸಿಗ ಬೇಕು ಬನ್ನಿ ಎಂದು ಒಂದು ಸಂಬಳ ಫಿಕ್ಸ್ ಮಾಡಿ ಕರೆದರೆ ಮೈಸೂರ್‌ಪಾಕಿನ ಜೊತೆ ಬಾದಾಮಿ ಹಲ್ವಾ ಕೂಡ ನನಗೆ ಮಾಡಲು ಬರುತ್ತದೆ ಅಷ್ಟೇ ಸಂಬಳಕ್ಕೆ ಎನ್ನುವ ಅಪ್‌ಡೇಟೆಡ್ ಮಾಡೆಲಿನ ಬಾಣಸಿಗರ ಮುಂದೆ ಬೂಂದಿ ಬತಾಸು ಮಾಡಲಷ್ಟೇ ಕಲಿತಿರುವವರ ಪಾಡೇನು ತಾಂತ್ರಿಕ ಶಿಕ್ಷಣದ ರೀತಿರಿವಾಜುಗಳು ವಾಯುವೇಗದಲ್ಲಿ ಚಲಿಸುತ್ತಿವೆ. ಮಾಹಿತಿ ತಂತ್ರಜ್ಞಾನ ಜೈವಿಕತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಎಂಬ ಹೊಸತರದ ಮಾದರಿಗಳು ನಮ್ಮ ಉದ್ಯೋಗಳ ಮೇಲೆ ಪರಿಣಾಮ ಬೀರುವುದನ್ನೆ ಸವಾಲಾಗಿ ಸ್ವೀಕರಿಸಬೇಕಾದ ಇಂದಿನ ಅನಿವಾರ್ಯತೆಗಳ ನಡುವೆ ದಿಢೀರ್ ಪ್ರತ್ಯಕ್ಷವಾಗಿದ್ದು ಕೃತಕ ಬುದ್ಧಿಮತ್ತೆ (AI)–ಈ AI ತಂತ್ರಜ್ಞಾನ ನಮ್ಮ ಉದ್ಯೋಗಳನ್ನು ಅಪ್ಡೇಟ್ ಮಾಡುವುದಿರಲಿ ನಮ್ಮ ಉದ್ಯೋಗಾವಕಾಶಗಳನ್ನೆ ಕಡಿಮೆ ಮಾಡುವ ಆತಂಕ ಹುಟ್ಟಿಸಿದೆ. ಆ ಚಲಿಸುವ ಮೋಡಗಳ ಮೇಲೆ ಸವಾರಿ ಮಾಡಲು ಪ್ರತಿದಿನವೂ ಹೊಸ ಹುರುಪಿನಲ್ಲಿ ನಾವು ಅಣಿಯಾಗಬೇಕು. ಸರಕಾರಿ ಸ್ವಾಮ್ಯದ ಅಧಿಕಾರ ವಲಯವೂ ಪ್ರಸಕ್ತ ದಿನಮಾನಗಳಲ್ಲಿ ತಾಂತ್ರಿಕ ಚಲನೆಯೊಂದಿಗೆ ಸಜ್ಜಾಗಿ ಸೇವೆಗೆ ನಿಂತಿದೆ. ಆನ್‌ಲೈನ್ ಶಿಕ್ಷಣ, ಆನ್‌ಲೈನ್ ಸೇವೆ, ಆನ್‌ಲೈನ್ ಪಾಠ, ಆನ್‌ಲೈನ್ ಪರೀಕ್ಷೆ, ಆನ್‌ಲೈನ್ ಮೀಟಿಂಗು ಎಲ್ಲವೂ ಅಸ್ತಿತ್ವಕ್ಕೆ ಬಂದ ಈ ಹೊತ್ತಿನಲ್ಲಿ ಕೌಶಲ್ಯಾಧಾರಿತ ವೃತ್ತಿಪರಿಣತಿಯ ಯುವಕರೊಂದಿಗೆ ಹೆಜ್ಜೆ ಹಾಕಲು ಕಲಿಯಬೇಕು. ನಮ್ಮ ಕಾಲು ನಮ್ಮದೇ ಹಾಸಿಗೆಯಿಂದ ಹೊರಚಾಚಬೇಕಾದ ಕಾಲ ಬಂದಿದೆ. ಕಾಲು ಮಡಚಿಕೊಂಡು ಮಲಗಬೇಕು ಇಲ್ಲ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ಅಪ್‌ಡೇಟ್ ಆಗಲೇಬೇಕಾದ ಈ ಅನಿವಾರ್ಯತೆಯ ಆಲೋಚನೆಗಳ ಬಗೆಗೆ ಬರೆಯಲು ಕುಳ್ಳಿರಿಸಿದ ಪ್ರೇರಣೆಯಾದರೂ ಏನು ಗೊತ್ತೆ?

ನನ್ನ ಪರಿಚಯದವರ ಮಗನೊಬ್ಬ ದುಬೈನಲ್ಲಿ ಒಳ್ಳೆಯ ಕೆಲಸದಲ್ಲಿದ್ದ. ಸಂಸಾರ ಮೈಸೂರಿನಲ್ಲಿತ್ತು. ಹುಡುಗ ದುಬೈ ಬಿಟ್ಟು ಊರಿಗೆ ಬಂದ. ಇಲ್ಲಿ ಆತನಿಗೆ ಕಡಿಮೆ ಸಂಬಳದ ಕೆಲಸ ಹಿಡಿಸಲಿಲ್ಲ. ಊರಲ್ಲಿ ಜಮೀನಿತ್ತು. ಆಧುನಿಕ ಕೃಷಿ ಮಾಡಿ ಬದುಕುವ ಯೋಜನೆ ಹಾಕಿಕೊಂಡ. ಹೆಂಡತಿ ಒಪ್ಪಲಿಲ್ಲ. ಐಷಾರಾಮಿ ಬದುಕಿಗೆ ಒಗ್ಗಿಹೋಗಿದ್ದ ಮನಸ್ಸು ಮತ್ತೆ ಅದೇ ಹಳ್ಳಿ, ಅದೇ ಮಣ್ಣು ಅದೇ ಕೃಷಿ ಚಟುವಟಿಕೆಗಳನ್ನು ಒಲ್ಲೆ ಎನ್ನುತ್ತಿತ್ತು. ಹುಡುಗ ಕಾರ್ಪೊರೇಟ್ ವಲಯ ಬಿಟ್ಟು ಅಭಿಮಾನದಿಂದ ಮಣ್ಣಿನೆಡೆಗೆ ಹೊರಟಿದ್ದ. ಹೇಗಾದರೂ ಮಾಡಿ ಆತನ ನಿರ್ಧಾರ ಬದಲಿಸಲೇಬೇಕೆಂದು ಹಠ ತೊಟ್ಟ ಆತನ ಪತ್ನಿ ಗಂಡನನ್ನು ಹೆದರಿಸುವ ಸಲುವಾಗಿ ಇಲಿ ಪಾಷಾಣ ತೆಗೆದುಕೊಂಡಂತೆ ಮಾಡಿದ್ದಾಳೆ. ದುರಾದೃಷ್ಟವೆಂದರೆ ತೆಗೆದುಕೊಳ್ಳುವಾಗ ತೆಗೆದುಕೊಳ್ಳುವ ಡೋಸೇಜು ಆಕೆಗೆ ಗೊತ್ತಾಗಿಲ್ಲ. ತನ್ನನ್ನೂ ಕರೆದುಕೊಂಡು ಊರಿನೆಡೆಗೆ ತೆರಳಲು ಹೊರಟಿರುವ ಗಂಡನನ್ನು ಹೇಗಾದರೂ ಮಾಡಿ ಮತ್ತೆ ಕಾರ್ಪೊರೇಟ್ ವಲಯದಲ್ಲೇ ನೌಕರಿ ಹುಡುಕಿಕೊಳ್ಳುವ ಮಾರ್ಗಕ್ಕೆ ತರಬೇಕೆಂದು ಹಠ ತೊಟ್ಟಿದ್ದಾಳೆ. ಇಲಿ ಪಾಷಾಣದ ಡೋಸೇಜು ಜಾಸ್ತಿಯಾಗಿ ಸಾವು ಬದುಕಿನ ಜೊತೆ ಹೋರಾಡಿದ್ದಾಳೆ. ಕಡೆಗೆ ನನ್ನನ್ನು ಬದುಕಿಸಿ ಎಂದು ಅವಲತ್ತುಕೊಂಡಿದ್ದಾಳೆ. ನೊಂದಿದ್ದಾಳೆ, ಚೀರಿದ್ದಾಳೆ. ಕಡೆಗೆ ಚಿಕಿತ್ಸೆ ಫಲಕಾರಿಯಾಗದೆ ತಾನೇ ಮಣ್ಣಿನ ಮಾರ್ಗವಾಗಿ ನಡೆದು ಹೋಗಿದ್ದಾಳೆ.

ಮನುಷ್ಯನ ನಿತ್ಯದ ಚಟುವಟಿಕೆಗಳು ವಿಸ್ತರಣೆಯ ಮಾರ್ಗದಲ್ಲಿ ಚಲಿಸುತ್ತವೆ. ಅಭಿವೃದ್ಧಿ ಅದರ ಮಂತ್ರ. ಇಂಥ ಹೊತ್ತಿನಲ್ಲಿ ಹಠಕ್ಕೆ ಬಿದ್ದ ಮನಸ್ಸು ಹದವರಿತು ನಡೆದರೆ ಪ್ರತಿ ಉತ್ಸಾಹ ನೂರ್ಮಡಿಸುತ್ತದೆ. ಚಲನಶೀಲತೆ ಜೊತೆಗೂಡುತ್ತದೆ. ಸೋಲೆಂಬುದು ಮುಕ್ಕಾಲು ಹಾದಿ ನಮ್ಮಿಂದ ಪೇರಿ ಕಿತ್ತಿರುತ್ತದೆ. ದೇಹವನ್ನು ಯಂತ್ರದಂತೆ ದುಡಿಸಬಹುದು. ಆದರೆ ಮನಸ್ಸು ಯಂತ್ರದಂತೆ ನಡೆಯಲಾರದು. ಮನಸ್ಸಿಗೆ ಅದರದ್ದೇ ಆಯಾಸವಿದೆ. ದೇಹವನ್ನೇ ಸೂಪರ್‌ಸ್ಪೀಡ್ ಮಾಡುವಷ್ಟು ಅದು ಟ್ಯೂನ್ ಆಗಿರುತ್ತದೆ. ಅದಕ್ಕಾಗಿ ಮನಸ್ಸನ್ನು ವೃತ್ತಿಗೆ ಪ್ರವೃತ್ತಿಗೆ ಹೊಂದಿಸುವಂತೆ ಅಣಿ ಮಾಡಿ ಆಗ ನೋಡಿ ಸೋಲು ಮತ್ತು ಸಾವುಗಳು ನಮ್ಮನ್ನಾಗಲಿ ನಮ್ಮ ವೃತ್ತಿ–ಪ್ರವೃತ್ತಿಗಳ ಏಳುಬೀಳಿನ ಬೆಂಕಿಯಲ್ಲಾಗಲಿ ಮೈಕಾಯಿಸಿಕೊಂಡು ಬೆಚ್ಚಗಾಗಲು ಬರುವುದಿಲ್ಲ. ಡಿ.ವಿ.ಜಿ.ಯವರ ಕಗ್ಗವೊಂದಿದೆ.

ಹೊಸತನವೆ ಬಾಳು ಹಳಸಿಕೆಯೆಲ್ಲ ಸಾವುಬಿಡು
ರಸವು ನವನವತೆಯಿಂದನುದಿನವು ಹೊಮ್ಮಿ
ಹಸನೊಂದು ನಡೆಯಲ್ಲಿ ನುಡಿಯಲ್ಲಿ ನೋಟದಲ್ಲಿ
ಒಸರುತಿರೆ ಬಾಳ್ಚೆಲುವೋ ಮಂಕುತಿಮ್ಮ!

ಹೊಸತನದ ಪ್ರತಿಯೊಂದಕ್ಕೂ ಅಪ್‌ಡೇಟೆಡ್ ಆಗುವ ಅನಿವಾರ್ಯತೆ ಬಂದೊದಗಿದೆ. ಅದಕ್ಕೆ ವಯಸ್ಸಿನ ಅಂತರವಿಲ್ಲ. ಆಸಕ್ತಿ, ಅನಾಸಕ್ತಿಗಳ ಗೊಂದಲವಿಲ್ಲ. ಪ್ರತಿದಿನದ ಹೊಂದಾಣಿಕೆಗೆ ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳುವ ಉತ್ಸಾಹಕ್ಕೆ ಮನಸ್ಸನ್ನು ಅಣಿ ಮಾಡಿ ಹೊಸಹೆಜ್ಜೆ ಇಡಲು ಮನಸ್ಸಿಗೆ ಕನ್ವಿನ್ಸ್ ಮಾಡಬೇಕು. ಮನಸ್ಸು ಮೇಲುದನಿಯ ಮಾತು ಕೇಳಿದಷ್ಟು ಗದರಿಕೆಯ ಮಾತನ್ನು ಕೇಳುವುದಿಲ್ಲ. ಮುಂದೆ ಮತ್ತಿನ್ನೇನು ಹೊಸ ಅಪ್‌ಡೇಟ್‌ಗಳು ಬರುತ್ತವೋ ಗೊತ್ತಿಲ್ಲ! ಕೌಶಲ್ಯ, ವೃತ್ತಿಪರತೆ, ಹಣಕಾಸು, ಆಯ–ವ್ಯಯಗಳನ್ನೂ ಕೌಶಲ್ಯಾಧಾರಿತ ಪರಿಣತಿಯಂತೆಯೇ ನಮ್ಮ ಜೀವನಕ್ಕೂ ಡಿಸೈನ್ ಮಾಡಿಕೊಂಡು ಮುಂದಿನ ದಿನಗಳಲ್ಲಿ ಒಪ್ಪಿಸಿಕೊಳ್ಳಬೇಕಿದೆ. ಏನಂತೀರಿ.

ವೈಟ್ ಟಾಪಿಂಗ್‌ಗೆ ಮುನ್ನವೇ ಪಿಡಬ್ಲ್ಯೂಡಿ, ಪಾಲಿಕೆ, ಚೆಸ್ಕಾಂ ಅಧಿಕಾರಿಗಳು ಖುದ್ದು ಪರಿಶೀಲನೆ

● ಜಿಲ್ಲಾಧಿಕಾರಿಗಳ ಸೂಚನೆ ● ರಸ್ತೆ ಕಾಮಗಾರಿ ನಂತರ ಅಗೆಯುವ ಕೆಲಸ ಸಲ್ಲದು

ಮೈಸೂರು, ಏ.27(ಎಂಕೆ)– ಮೈಸೂರಿನ ಮಾನಂದವಾಡಿ ರಸ್ತೆ (1 ಕಿಲೋ ಮೀಟರ್)ಯಲ್ಲಿ ವೈಟ್ ಟಾಪಿಂಗ್ (white topping) ಕಾಮಗಾರಿ ಪ್ರಾರಂಭವಾಗಿದ್ದು, ಕಾಮಗಾರಿ ವೇಳೆ ನಗರಪಾಲಿಕೆ ಮತ್ತು ಚೆಸ್ಕಾಂ ಅಧಿಕಾರಿಗಳು ಸಹಕಾರ ನೀಡುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಸೂಚಿಸಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ತಮ್ಮ ಕಚೇರಿ ಸಭಾಂಗಣದಲ್ಲಿ ಸೋಮವಾರ ನಗರಪಾಲಿಕೆ, ಚೆಸ್ಕಾಂ, ಲೋಕೋಪಯೋಗಿ ಸೇರಿದಂತೆ ಇನ್ನಿತರೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಾಮಗಾರಿ ಸಂದರ್ಭದಲ್ಲಿ ವಾಹನ ಸಂಚಾರ, ವಿದ್ಯುತ್ ಮತ್ತು ಕುಡಿಯುವ ನೀರಿನ ಪೂರೈಕೆ ಹಾಗೂ ಒಳಚರಂಡಿ ವ್ಯವಸ್ಥೆಯಲ್ಲಿ ಸಮಸ್ಯೆಯಾಗದಂತೆ ನಿರ್ವಹಿಸುವಂತೆ ತಿಳಿಸಿದರು.

ಮೈಸೂರು ನಗರದ 12 ರಸ್ತೆಗಳಿಗೆ ವೈಟ್ ಟಾಪಿಂಗ್ ಕಾಮಗಾರಿ ಅನುಮೋದನೆಯಾಗಿದ್ದು, ಅವುಗಳಲ್ಲಿ ಮಾನಂದವಾಡಿ ರಸ್ತೆ, ಬೋಗಾದಿ ರಸ್ತೆ ಹಾಗೂ ವಿಶ್ವಮಾನವ ಜೋಡಿ ರಸ್ತೆಗಳಲ್ಲಿ ಮೊದಲ ಹಂತದಲ್ಲಿ ಕಾಮಗಾರಿ ಪ್ರಾರಂಭವಾಗುತ್ತಿದೆ ಎಂದರು.



ಜಿ.ಲಕ್ಷ್ಮೀಕಾಂತ್ ರೆಡ್ಡಿ

ನಗರ ಪಾಲಿಕೆ ಅಧಿಕಾರಿಗಳು ಕುಡಿಯುವ ನೀರು ಸರಬರಾಜು, ಒಳಚರಂಡಿ ಹಾಗೂ ಚೆಸ್ಕಾಂ ಅಧಿಕಾರಿಗಳು ಯುಜಿ (ಭೂಗತ) ವಿದ್ಯುತ್ ಕೇಬಲ್ ಬಗ್ಗೆ ಕಾಮಗಾರಿ ಪ್ರಾರಂಭಕ್ಕೂ ಮುನ್ನ ಮಾಹಿತಿ ನೀಡಿ ತೊಂದರೆಯಾಗದಂತೆ ನೋಡಿ ಕೊಂಡು ವರದಿ ನೀಡಬೇಕು. ನಂತರ ರಸ್ತೆ ಕಾಂಕ್ರೀಟ್ ಕೆಲಸ ಪ್ರಾರಂಭಿಸಬೇಕು. ಕಾಮಗಾರಿ ಮುಗಿದ ಬಳಿಕ ರಸ್ತೆ ಅಗೆಯುವುದು ಕಂಡು ಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪರಿಶೀಲನೆ: ಬೋಗಾದಿ ಮುಖ್ಯ ರಸ್ತೆಗೆ ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭಕ್ಕೂ ಮುನ್ನ ಲೋಕೋಪಯೋಗಿ ಹಾಗೂ ನಗರಪಾಲಿಕೆ ಅಧಿಕಾರಿಗಳು ಜಂಟಿ ಪರಿಶೀಲನೆ ನಡೆಸಿ ಎರಡು ದಿನದೊಳಗಾಗಿ ವರದಿ ನೀಡಿದ ನಂತರ ಕಾಮಗಾರಿ ಪ್ರಾರಂಭಿಸುವಂತೆ ಸೂಚಿಸಿದರು.

ಸಾರ್ವಜನಿಕರಿಗೆ ತೊಂದರೆಯಾಗಬಾರದು: ಚೆಸ್ಕಾಂ ವತಿಯಿಂದ ಮೈಸೂರು ನಗರದಲ್ಲಿ 400 ಕಿ.ಮೀ ವ್ಯಾಪ್ತಿಯ ಭೂಗತ ಕೇಬಲ್ ಕೆಲಸ ನಡೆಯುತ್ತಿದ್ದು, ವೈಟ್ ಟಾಪಿಂಗ್ ಸಂದರ್ಭದಲ್ಲಿ ಒಳಚರಂಡಿ, ಕುಡಿಯುವ ನೀರಿನ ಪೈಪ್‌ಲೈನ್‌ಗೆ ಹಾನಿಯಾದಲ್ಲಿ ಒಂದು ದಿನದೊಳಗಾಗಿ ಸರಿಪಡಿಸಿ, ನಂತರ ಕಾಮಗಾರಿ ಮುಂದುವರೆಸಬೇಕು. ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರಿಕೆ ವಹಿಸಿ ಎಂದು ಡಿಸಿ ಲಕ್ಷ್ಮೀಕಾಂತರೆಡ್ಡಿ ಹೇಳಿದರು.

15 ದಿನ ಸ್ಥಗಿತಗೊಳಿಸಿ: ವೈಟ್ ಟಾಪಿಂಗ್ ಕಾಮಗಾರಿ ನಡೆಸುವ ಸಂದರ್ಭದಲ್ಲಿ ಒಳಚರಂಡಿ ಹಾಗೂ ಕುಡಿಯುವ ನೀರಿನ ಪೈಪ್‌ಲೈನ್‌ಗೆ ಹಾನಿಯಾಗಿರುವುದಾಗಿ ತಿಳಿದು ಬಂದಿದ್ದು, 15 ದಿನ ಕಾಮಗಾರಿ ಸ್ಥಗಿತಗೊಳಿಸಿ, ಸಮಸ್ಯೆ ಬಗೆಹರಿಸಿರುವ ಕುರಿತು ಚೆಸ್ಕಾಂ ಹಾಗೂ ಪಾಲಿಕೆ ಅಧಿಕಾರಿಗಳು ವರದಿ ನೀಡಬೇಕು ಎಂದರು. ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಕಾರ್ಯಪಾಲಕ ಅಭಿಯಂತರ ಮಂಜು, ಚೆಸ್ಕಾಂ ಅಧೀಕ್ಷಕ ಇಂಜಿನಿಯರ್ ಸುನೀಲ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಅತಿಥಿ ಉಪನ್ಯಾಸಕರ ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) 2026–27ನೇ ಶೈಕ್ಷಣಿಕ ಸಾಲಿಗೆ ವಿವಿಧ ವಿಷಯಗಳಲ್ಲಿ ಬೋಧನೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅತಿಥಿ ಉಪನ್ಯಾಸಕರು ಹಾಗೂ ಸಂಪನ್ಮೂಲ ವ್ಯಕ್ತಿಗಳ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆದೇಶದನ್ವಯ (ಸಂಖ್ಯೆ: ಕಸಂವಾ 183 ಕಸಧ 2022, ದಿನಾಂಕ: 09.10.2024), ನಿಗದಿಪಡಿಸಿರುವ ಗೌರವ ಸಂಭಾವನೆ ಹಾಗೂ ಷರತ್ತುಗಳ ಆಧಾರದ ಮೇಲೆ ಈ ನೇಮಕಾತಿ ನಡೆಯಲಿದೆ.

ವಿಷಯಗಳು: ಅನ್ವಯ ಕಲೆ, ಚಿತ್ರಕಲೆ, ಶಿಲ್ಪಕಲೆ, ಅಚ್ಚುಕಲೆ (ಗ್ರಾಫಿಕ್ಸ್), ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ, ಕಲಾ ಇತಿಹಾಸ, ಕನ್ನಡ, ಇಂಗ್ಲಿಷ್, ಹಿಂದಿ, ಭಾರತ ಮತ್ತು ಭಾರತೀಯ ಸಂವಿಧಾನ ಹಾಗೂ ಸಂವಿಧಾನದ ಮೌಲ್ಯಗಳು, ಪರಿಸರ ಅಧ್ಯಯನ ವಿಷಯಗಳಾಗಿವೆ.

ಮೇ 15 ರ ಸಂಜೆ 5.30 ಗಂಟೆಯೊಳಗೆ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ. ಮೇ 19ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನವಿದೆ. ಹೆಚ್ಚಿನ ಮಾಹಿತಿಗೆ www.mysore.nic.in ದೂ.ಸಂ. 0821–2438931 ಸಂಪರ್ಕಿಸಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಮಗೆ ಅಲ್ಲಮನ ತಾತ್ವಿಕತೆ, ಬಸವಣ್ಣನ ಕ್ರಿಯಾಶೀಲತೆ, ಅಂಬಿಗರ ಚೌಡಯ್ಯನ ಆಕ್ರೋಶ ಅಗತ್ಯವಿದೆ

● ಶರಣರ ತತ್ವಾದರ್ಶದ ಅಗತ್ಯ ಸ್ಮರಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ● ತಮಗೆ ಬಸವಶ್ರೀ ಪ್ರಶಸ್ತಿ ಘೋಷಿಸಿದ ಬಸವ ವೇದಿಕೆಗೆ ಕೃತಜ್ಞತೆ ಸಲ್ಲಿಸಿ ಪತ್ರ

ಬೆಂಗಳೂರು, ಏ.27– ಇಂದು ನಮಗೆ ಅಲ್ಲಮನ ತಾತ್ವಿಕತೆ, ಬಸವಣ್ಣನ ಕ್ರಿಯಾಶೀಲತೆ, ಅಂಬಿಗರ ಚೌಡಯ್ಯನ ಆಕ್ರೋಶ ಬೇಕಾಗಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಪ್ರತಿಪಾದಿಸಿದ್ದಾರೆ.

ಬಸವ ವೇದಿಕೆ ವತಿಯಿಂದ ತಮಗೆ 'ಬಸವಶ್ರೀ' ಪ್ರಶಸ್ತಿ ಘೋಷಣೆ ಮಾಡಿರುವುದಕ್ಕೆ ವೇದಿಕೆಗೆ ಪತ್ರ ಬರೆದು ಧನ್ಯವಾದ ತಿಳಿಸಿರುವ ಅವರು, ಸದ್ಯದ ಸಂದರ್ಭದಲ್ಲಿ ವಚನಕಾರರ ಮಹತ್ವ ಹಾಗೂ ಪ್ರಾಮುಖ್ಯತೆ ಬಗ್ಗೆ ಒತ್ತಿ ಹೇಳಿದ್ದಾರೆ. ಇಂದು ಎಲ್ಲ ಕ್ಷೇತ್ರಗಳಲ್ಲೂ ಅಧಃಪತನವನ್ನು ಕಾಣುತ್ತಿದ್ದೇವೆ. ವ್ಯವಸ್ಥೆಯ ಕೆಡುಕಿನ ಬಗ್ಗೆ ವಿವೇಕಶಾಲಿಗಳು ಸಿನಿಕರಾಗುತ್ತಿದ್ದಾರೆ. ಜನಪರ ಚಳುವಳಿಗಳು ಕ್ಷೀಣವಾಗುತ್ತಿವೆ. ಈ ಸಂದರ್ಭದಲ್ಲಿ ನಮಗೆ ಅಲ್ಲಮ, ಬಸವ, ಅಂಬಿಗರ ಚೌಡಯ್ಯರ ತತ್ವಾದರ್ಶಗಳು ಬೇಕಿವೆ ಎಂದಿದ್ದಾರೆ. ಶ್ರೀಮಂತ ಬಡವ, ಹೆಣ್ಣು ಗಂಡು, ಮೇಲು ಕೀಳು, ಉಚ್ಚ ನೀಚ ತಾರತಮ್ಯಗಳನ್ನು ತೊಲಗಿಸುವ ದಿವ್ಯಮಂತ್ರವಾಗಿ ಬಸವಣ್ಣನವರು ಸಾರಿದ್ದು ಏಕದೇವೋಪಾಸನೆ ಮತ್ತು ಕಾಯಕ ಮಹತ್ವ. ಅವರು ಜನರಿಂದ, ಜನರಿಗಾಗಿ ಜನರ 'ಮಹಾಮನೆ'ಯನ್ನು ಕಟ್ಟಿ ಬಿಜ್ಜಳನ ಅರಮನೆಯನ್ನು ತೃಣವಾಗಿ ಭಾವಿಸಿದವರು. ಹಾಗೆ ನಡೆದ ಕಲ್ಯಾಣ ಕ್ರಾಂತಿಯಲ್ಲಿ ಸಾವಿರಾರು ಶರಣ–ಶರಣೆಯರನ್ನು ತಮ್ಮ ತಮ್ಮ ಅನುಭವ, ಅನುಭಾವದಿಂದ ರಚಿಸಿದ ವಚನಗಳು ಕನ್ನಡದ ಸಾಹಿತ್ಯ ಲೋಕವನ್ನು ವಿಸ್ತರಿಸಿ ಸಂಸ್ಕೃತ



ಮತ್ತು ಸಂಸ್ಕಾರವನ್ನು ಪ್ರಚುರಗೊಳಿಸಿದ ವಿಶಿಷ್ಟ ಸಾಹಿತ್ಯವಾಗಿದೆ ಎಂದು ಹೆಚ್.ಡಿ. ದೇವೇಗೌಡರು ಬಣ್ಣಿಸಿದ್ದಾರೆ.

ಬಸವೇಶ್ವರರು 12ನೇ ಶತಮಾನದಲ್ಲಿ ನಡೆಸಿದ್ದು ಒಂದು ದೊಡ್ಡ ಜನಾಂದೋಲನ. ಅದೊಂದು ಅದ್ಭುತ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕತೆಯ ಕ್ರಾಂತಿ, ಕಾಯಕ ಮತ್ತು ದಾಸೋಹ ಎಂಬ ಪರಿಕಲ್ಪನೆಗಳು ಇಂದಿಗೂ ಪ್ರಸ್ತುತವಾಗಿರುವ ತತ್ವಾದರ್ಶಗಳು ಆಗಿವೆ ಎಂದಿದ್ದಾರೆ.

ಬಸವ ವೇದಿಕೆ ಮಿತ್ರರು ಬಸವ ಜಯಂತಿ ಅಂಗವಾಗಿ ಏರ್ಪಡಿಸಿರುವ ವಿಶಿಷ್ಟ ಕಾರ್ಯಕ್ರಮ ನಿಜಕ್ಕೂ ಅಭಿನಂದನೀಯ. ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿರುವ ಪೂಜ್ಯ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಯವರಿಗೆ ಭಕ್ತಿಪೂರ್ವಕ ಪ್ರಣಾಮ ಅರ್ಪಿಸುತ್ತೇನೆ. ಬಸವ ವೇದಿಕೆ ಗೆಳೆಯರು ನನ್ನ ಮೇಲಿನ ಅಭಿಮಾನದಿಂದಲೋ ಅಥವಾ ನನ್ನ ಹಿರಿತನದ ವಯಸ್ಸಿನ ಕಾರಣದಿಂದಲೋ ನನಗೆ 'ಬಸವಶ್ರೀ' ಪ್ರಶಸ್ತಿ ಪ್ರದಾನ ಮಾಡಲು ನಿರ್ಧರಿಸಿ, ಕಾರ್ಯ ಕ್ರಮ ಆಯೋಜಿಸಿದ್ದಾರೆ. ಖಂಡಿತವಾಗಿ ಈ ಪ್ರಶಸ್ತಿಗೆ ನಾನು ಅರ್ಹನಲ್ಲ. ಹಾಗಾಗಿ ಅತ್ಯಂತ ಮುಜುಗರ ಮತ್ತು ಸಂಕೋಚದಿಂದ ನಿಮ್ಮ ಅಭಿಮಾನಕ್ಕೆ ತಲೆ ಬಾಗುವವನಿದ್ದೇನೆ.
–ಹೆಚ್.ಡಿ.ದೇವೇಗೌಡರು, ಮಾಜಿ ಪ್ರಧಾನ ಮಂತ್ರಿ

ಬಸವ ವೇದಿಕೆಯ ಮಿತ್ರರು ಬಸವ ಜಯಂತಿ ಅಂಗವಾಗಿ ಏರ್ಪಡಿಸಿರುವ ವಿಶಿಷ್ಟ ಕಾರ್ಯಕ್ರಮದಲ್ಲಿ ಗುರುರಾಜ ಕರ್ಜಗಿಯವರೂ ಸೇರಿದಂತೆ ಅನೇಕ ಶರಣರ ನುಡಿಗಳನ್ನು ಕೇಳಲಾದರೂ ನಾನು ಬರಬೇಕೆಂದಿದ್ದೆ. ಆದರೆ ನನ್ನ ಆರೋಗ್ಯ ವ್ಯತ್ಯಯದಿಂದಾಗಿ ಬರಲಾಗುತ್ತಿಲ್ಲ. ಆದುದರಿಂದ ಪೂಜ್ಯ ಸ್ವಾಮೀಜಿಯವರಲ್ಲಿ, ಸಂಘಟಕರಲ್ಲಿ, ಗೌರವಾನ್ವಿತ ಅತಿಥಿ ಮಹನೀಯರಲ್ಲಿ, ಶರಣ ಸಮೂಹದಲ್ಲಿ ಕ್ಷಮೆ ಕೋರುತ್ತೇನೆ. ಕಾರ್ಯಕ್ರಮ ಯಶಸ್ವಿಯಾಗಿ ಇದರ ಸಂದೇಶ ಎಲ್ಲೆಡೆ ಪ್ರಚುರಗೊಳ್ಳಲಿ ಎಂದು ಹಾರೈಸುತ್ತೇನೆ ಎಂದು ಮಾಜಿ ಪ್ರಧಾನಿಗಳು ತಿಳಿಸಿದ್ದಾರೆ.

ಮೈಸೂರು ಜಿಲ್ಲಾಡಳಿತ ವತಿಯಿಂದ ಮೇ 6ರಂದು ಕಾಯಕಯೋಗಿ ಸಿದ್ದರಾಮೇಶ್ವರ ಜಯಂತಿ



ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಸೋಮವಾರ ಕಾಯಕಯೋಗಿ ಸಿದ್ದರಾಮೇಶ್ವರ ಜಯಂತಿಯ ಪೂರ್ವಭಾವಿ ಸಭೆ ನಡೆಸಿದರು.

ಮೈಸೂರು,ಏ.27(ಎಂಟಿವೈ)– ಮೈಸೂರಲ್ಲಿ ಮೇ 6ರಂದು ಜಿಲ್ಲಾಡಳಿತದ ವತಿಯಿಂದ ರಾಜ್ಯ ಮಟ್ಟದ ಕಾಯಕಯೋಗಿ ಸಿದ್ದರಾಮೇಶ್ವರ ಜಯಂತಿಯನ್ನು ಆಯೋಜಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ತಿಳಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕಾಯಕಯೋಗಿ ಸಿದ್ದರಾಮೇಶ್ವರ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ಆಯೋಜಿಸಿರುವುದು ರಾಜ್ಯ ಮಟ್ಟದ ಕಾರ್ಯಕ್ರಮವಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ವಿವಿಧ ರಾಜ್ಯಮಟ್ಟದ ನಾಯಕರು, ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಜನ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು.

ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಕಾಯಕಯೋಗಿ ಸಿದ್ದರಾಮೇಶ್ವರ ಜಯಂತಿ ಮೆರವಣಿಗೆ ಆಯೋಜಿಸಲಾಗಿದೆ. ಮೆರವಣಿಗೆಯಲ್ಲಿ ವೀರಗಾಸೆ, ಡೊಳ್ಳು ಕುಣಿತ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಳ್ಳಲಿವೆ. ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಲಿದೆ. ಬಳಿಕ ಮಧ್ಯಾಹ್ನ 12 ಗಂಟೆಗೆ ಕಲಾಮಂದಿರದಲ್ಲಿ ಸಭಾ ಕಾರ್ಯಕ್ರಮ ಜರುಗಲಿದೆ. ಶಿಷ್ಟಾಚಾರದಂತೆ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುತ್ತಿದೆ ಎಂದರು.

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಮಾತನಾಡಿ, ಮೆರವಣಿಗೆಯಲ್ಲಿ ಭಾಗವಹಿಸುವ ಕಲಾತಂಡ ಹಾಗೂ ಕಲಾವಿದರಿಗೆ ಉಪಹಾರ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.

ಮೆರವಣಿಗೆ ಸಾಗುವ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲು ಮೈಸೂರು ಮಹಾನಗರಪಾಲಿಕೆ ವತಿಯಿಂದ ವ್ಯವಸ್ಥೆ ಮಾಡಬೇಕು. ಚಿತ್ರದುರ್ಗದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿಜಿ ಕಾರ್ಯಕ್ರಮದ ಸಾನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮ ಪ್ರಾರಂಭವಾಗುವ ಮೊದಲು ವೇದಿಕೆಯಲ್ಲಿ ವಚನ ಗಾಯನ ಕಾರ್ಯಕ್ರಮ ಆಯೋಜಿಸುವಂತೆ ಮನವಿ ಮಾಡಿದರು.

ಎಡಿಸಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ

ಕಾರ್ಯಕ್ರಮದ ಯಶಸ್ವಿಗೆ ಭೋವಿ ಸಮುದಾಯದ ಮುಖಂಡರುಗಳನ್ನೊಳಗೊಂಡ ವಿವಿಧ ಸಮಿತಿ ರಚಿಸಿ ರಾಜ್ಯದ ಎಲ್ಲಾ ಭಾಗಗಳಲ್ಲಿ ಪ್ರಚಾರ ಮಾಡಬೇಕು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡಬೇಕು ಎಂದರು.

ಕರ್ನಾಟಕ ಭೋವಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ.ಸೀತಾರಾಮು ಮಾತನಾಡಿ, ಮೆರವಣಿಗೆಯಲ್ಲಿ ಕಳಸ ಹೊತ್ತ ಮಹಿಳೆಯರು ಭಾಗವಹಿಸಿದರೆ ಕಾರ್ಯಕ್ರಮ ಉತ್ತಮವಾಗಿ ಮೂಡಿ ಬರಲಿದೆ. ಇದಕ್ಕೆ ವ್ಯವಸ್ಥೆ ಮಾಡಿಕೊಡುವಂತೆ ಮನವಿ ಮಾಡಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಬೋವಿ ಸಮುದಾಯದ ಮುಖಂಡರಾದ ವಿಜಯಕುಮಾರ್, ಟಿ.ಕೃಷ್ಣ, ದೇವರಾಜು, ಜಿ ನಾಗರಾಜು, ಪಿ. ಎಲ್ ಚಿನ್ನಸ್ವಾಮಿ, ಬಿ.ವಿ ಶ್ರೀನಿವಾಸ್, ಮೋಹನ್ ಜಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮಾದಕ ವಸ್ತು ಬಳಕೆ, ಮಾರಾಟಕ್ಕೆ ಕಡಿವಾಣ ಅಭಿಯಾನ; ಮೈಸೂರಲ್ಲಿ ಉತ್ತಮ ಪ್ರತಿಕ್ರಿಯೆ

ಮೈಸೂರು, ಏ.27(ಎಂಕೆ)– ಮೈಸೂರಲ್ಲಿ ಮಾದಕ ವಸ್ತುಗಳ ಬಳಕೆ ಮತ್ತು ಮಾರಾಟಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ 'ವಿಮುಕ್ತಿ ಅಭಿಯಾನ' ಮತ್ತು ಸ್ಟೂಡೆಂಟ್ಸ್ ಸೇಫ್ಟಿ ಇನಿಷಿಯೇಟಿವ್ ಕಾರ್ಯಕ್ರಮಕ್ಕೆ



ಸೀಮಾ ಲಾಟ್ಕರ್

ಸಾರ್ವಜನಿಕರು ಮತ್ತು ಶಾಲಾ–ಕಾಲೇಜುಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ವಿಮುಕ್ತಿ ಅಭಿಯಾನದ ಪೋಸ್ಟರ್ ಅನ್ನು ಶಾಲಾ–ಕಾಲೇಜುಗಳ ನೋಟಿಸ್ ಬೋರ್ಡ್ ಹಾಗೂ ನಗರದ ಜನದಟ್ಟಣಿ ಸ್ಥಳಗಳಲ್ಲಿ ಅಂಟಿಸುವ ಮೂಲಕ ಇಲಾಖೆ ವಾಟ್ಸ್‌ಅಪ್ ನಂಬರ್‌ಗೆ ಮಾದಕ ವಸ್ತುಗಳ ಬಳಕೆ ಮತ್ತು ಮಾರಾಟ ಮಾಡುವ ಸ್ಥಳಗಳು ಹಾಗೂ ಅನುಮಾನಾಸ್ಪದ ವ್ಯಕ್ತಿಗಳ ಮಾಹಿತಿಯನ್ನು ನೀಡುವಂತೆ ಮನವಿ ಮಾಡಲಾಗಿತ್ತು. ಅದರಂತೆ ಈಗಾಗಲೇ ಸಾಕಷ್ಟು ವಾಟ್ಸ್‌ಅಪ್ ಸಂದೇಶಗಳು ಬಂದಿದ್ದು, ನೈಜ ಮಾಹಿತಿಯನ್ನಾಧರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರತಿನಿತ್ಯ 3 ರಿಂದ 4 ಕರೆ

'ವಿಮುಕ್ತಿ ಅಭಿಯಾನ' ಹಾಗೂ 'ಸ್ಟೂಡೆಂಟ್ಸ್ ಸೇಫ್ಟಿ ಇನಿಷಿಯೇಟಿವ್' ಕಾರ್ಯ ಕ್ರಮದಡಿ ಪ್ರತಿನಿತ್ಯ ಮೂರರಿಂದ ನಾಲ್ಕು ಕರೆ ಮತ್ತು ಸಂದೇಶಗಳು ಬರಲಿದ್ದು, ಅವುಗಳಲ್ಲಿ ನೈಜ ಮಾಹಿತಿ ಇದ್ದಲ್ಲಿ ಕೂಡಲೇ ಕಾರ್ಯಪ್ರವೃತ್ತರಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಆದ್ದರಿಂದ ಮೈಸೂರಿನಲ್ಲಿ ಡ್ರಗ್ಸ್ ಪೆಡ್ಲರ್‌ಗಳಿಗೆ ಕಡಿವಾಣ ಹಾಕಲಾಗುತ್ತಿದೆ. ಪ್ರತಿನಿತ್ಯ ಸಂಜೆ ವೇಳೆ ಕಾರ್ಯಾಚರಣೆಗಳನ್ನು ನಡೆಸಲಾಗುತ್ತಿದೆ. –ಸೀಮಾಲಾಟ್ಕರ್

ಹಾಗೆಯೇ ವಿದ್ಯಾರ್ಥಿಗಳ ಸುರಕ್ಷತೆಗಾಗಿ 'ಸ್ಟೂಡೆಂಟ್ಸ್ ಸೇಫ್ಟಿ ಇನಿಷಿಯೇಟಿವ್' ಕಾರ್ಯಕ್ರಮದಡಿ ಕ್ಯೂ ಆರ್ ಕೋಡ್ ಬಳಸಿ ಆನ್‌ಲೈನ್ ಮೂಲಕ ನಿರ್ಭೀತಿಯಿಂದ ಮಾದಕ ವಸ್ತುಗಳ ದುರ್ಬಳಕೆ ಬಗ್ಗೆ ಅನಾಮಧೇಯ ದೂರು ನೀಡುವ ಕಾರ್ಯಕ್ರಮಕ್ಕೆ ಮೈಸೂರು ನಗರದ ಎಲ್ಲಾ ಪದವಿ, ಇಂಜಿನಿಯರಿಂಗ್, ವೈದ್ಯಕೀಯ ಕಾಲೇಜು ಹಾಗೂ ಶೈಕ್ಷಣಿಕ ವಿದ್ಯಾಸಂಸ್ಥೆಗಳಿಂದ ಉತ್ತಮ ಸ್ಪಂದನೆ ದೊರೆತಿದೆ ಎಂದರು.

ವಿದ್ಯಾರ್ಥಿಗಳು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿದ 30 ಸೆಕೆಂಡುಗಳಲ್ಲಿ ಅನಾಮಧೇಯವಾಗಿ ಮಾಹಿತಿ ನೀಡಬಹುದು. ವಿದ್ಯಾರ್ಥಿಗಳು ತಮ್ಮ ಹೆಸರು, ಫೋನ್ ನಂಬರ್ ಇನ್ನಿತರ ಯಾವುದೇ ವೈಯಕ್ತಿಕ ಮಾಹಿತಿ ನೀಡಬೇಕಿಲ್ಲ. ಅಲ್ಲದೆ ಅವರ ಮೊಬೈಲ್ ಅನ್ನು ಟ್ರ್ಯಾಕ್ ಮಾಡುವುದಿಲ್ಲ. ದೂರು ನೀಡುವ ವಿದ್ಯಾರ್ಥಿಯ ಸಂಪೂರ್ಣ ಮಾಹಿತಿಯನ್ನು ಗೌಪ್ಯವಾಗಿಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕ್ಯೂ ಆರ್ ಕೋಡ್ ಜೊತೆಗೆ ಸಹಾಯವಾಣಿ ಸಂ–8277948080 ಕರೆ ಮಾಡಿ ಮಾದಕ ವಸ್ತು ಮಾರಾಟ, ಸಾಗಾಟ ಹಾಗೂ ಸೇವನೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡಬಹುದಾಗಿದೆ. ಮೈಸೂರು ನಗರದ ಸುಮಾರು 75ಕ್ಕೂ ಹೆಚ್ಚು ಕಾಲೇಜುಗಳ ಹಾಗೂ ಶೈಕ್ಷಣಿಕ ಸಂಸ್ಥೆಗಳ ಪ್ರತಿನಿಧಿಗಳು ಈ ಕಾರ್ಯಕ್ರಮಕ್ಕೆ ಸಹಮತವನ್ನು ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಪಲ್ಲಕ್ಕಿ, ನಂದಿಧ್ವಜ ಕಲಾ ತಂಡದ ಮೆರವಣಿಗೆಗೆ ಚಾಲನೆ



ಮೈಸೂರಿನ ಶ್ರೀ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಜರುಗಿದ ಶ್ರೀ ಸಿದ್ದಲಿಂಗೇಶ್ವರ ಸ್ವಾಮಿಯ 23ನೇ ವಾರ್ಷಿಕೋತ್ಸವದಲ್ಲಿ ಹಮ್ಮಿಕೊಂಡಿದ್ದ ಪಲ್ಲಕ್ಕಿ ಉತ್ಸವ, ನಂದೀಧ್ವಜ ಹಾಗೂ ಕಲಾತಂಡಗಳ ಭವ್ಯ ಮೆರವಣಿಗೆಗೆ ಶ್ರೀ ಸಿದ್ದಗಂಗಾ ಮಠದ ಪೂಜ್ಯ ಶ್ರೀ ಶ್ರೀ ಸಿದ್ದಲಿಂಗ ಮಹಾ ಸ್ವಾಮೀಜಿ ರವರ ದಿವ್ಯ ಸಾನ್ನಿಧ್ಯದಲ್ಲಿ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಚಾಲನೆ ನೀಡಿದರು. ಈ ವೇಳೆ ಗೌರವಾಧ್ಯಕ್ಷ ಎಸ್.ಸಿ.ಅಶೋಕ್, ವೀರೇಶ್, ಸಂಗಪ್ಪಶೆಟ್ಟಿ, ವಿರೂಪಾಕ್ಷ, ವೀರಣ್ಣ, ಆರ್.ಡಿ.ವಿಶ್ವನಾಥ್, ಚಂದ್ರಶೇಖರ್, ವಿಜಯ್‌ಕುಮಾರ್, ಸದಾಶಿವು, ದಿನೇಶ್, ಶಿವಕುಮಾರಸ್ವಾಮಿ, ಇಂದ್ರಮ್ಮ, ಆರ್.ಸ್ವಾಮಿ, ಪ್ರವೀಣ್, ಕಾಂತರಾಜು, ಶ್ರೀಧರ್, ಅರುಣ್, ದೀಪು, ಗಿರೀಶ್, ಸೋಮು ಸರಗೂರು ಇತರರಿದ್ದರು.

ಕೈಗಾರಿಕಾ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ಯಾದವಗಿರಿ ಕೈಗಾರಿಕಾ ಪ್ರದೇಶದಲ್ಲಿರುವ ಎನ್‌ಎಬಿ ಅಂಧ ಮತ್ತು ಕಿವುಡರ ಕೈಗಾರಿಕಾ ತರಬೇತಿ ಕೇಂದ್ರದಿಂದ ದೃಷ್ಟಿದೋಷ ಹಾಗೂ ಶ್ರವಣ ದೋಷವುಳ್ಳ ಯುವಕ–ಯುವತಿಯರಿಂದ 2026–27ನೇ ಸಾಲಿಗೆ 1 ವರ್ಷದ ಉಚಿತ ಕೈಗಾರಿಕಾ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. ತರಬೇತಿಗೆ 16ರಿಂದ 25 ವರ್ಷದೊಳಗಿನ ಎಸ್‌ಎಸ್‌ಎಲ್‌ಸಿವರೆಗೆ ವಿದ್ಯಾಭ್ಯಾಸ ಮಾಡಿರುವ ದೃಷ್ಟಿದೋಷ ಹಾಗೂ ಶ್ರವಣ ದೋಷವುಳ್ಳ ಯುವಕ–ಯುವತಿಯರು ಸೇರಬಹುದು. ತರಬೇತಿಯು ಉಚಿತವಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರತಿ ತಿಂಗಳು 250 ರೂ. ಪ್ರಶಿಕ್ಷಣಾರ್ಥಿ ವೇತನ ನೀಡಲಾಗುತ್ತದೆ. 1 ವರ್ಷದ ಅವಧಿಯಲ್ಲಿ ಲೈಟ್ ಇಂಜಿನಿಯರಿಂಗ್, ಪ್ಲಾಸ್ಟಿಕ್ ಇಂಜೆಕ್ಷನ್ ಮೌಲ್ಡಿಂಗ್, ಬೇಸಿಕ್ ಎಲೆಕ್ಟ್ರಿಕಲ್, ನಾರಿನಿಂದ ಹಗ್ಗ ಮತ್ತು ಫುಟ್‌ರಗ್ ಮಾಡುವುದು, ರೀಕೇನಿಂಗ್ ಹಾಗೂ ಬೇಸಿಕ್ ಕಂಪ್ಯೂಟರ್ ವಿಷಯದಲ್ಲಿ ತರಬೇತಿ ನೀಡಲಾಗುತ್ತದೆ. ಅರ್ಜಿಗಳನ್ನು ಸಂಸ್ಥೆಯ ಕಚೇರಿಯಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ದೂ. 0821–2514431, 9449263784, 9980353445 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯದಲ್ಲಿ ಏನೂ ಬದಲಾಗುವುದಿಲ್ಲ, ಸಿದ್ದರಾಮಯ್ಯನವರೆ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆಂಬ ವಿಶ್ವಾಸವಿದೆ

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಸ್ಪಷ್ಟನೆ

ಮೈಸೂರು, ಏ.27(ಜಿಎ)–ನನ್ನ ಮಾಹಿತಿ ಪ್ರಕಾರ ಬದಲಾವಣೆ ಏನೂ ಆಗುವುದಿಲ್ಲ. ಸಿಎಂ ಸಿದ್ದರಾಮಯ್ಯನವರೆ ಮುಂದುವರಿಯುತ್ತಾರೆಂಬ ವಿಶ್ವಾಸವಿದೆ. ಇದೆಲ್ಲವೂ ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ತಿಳಿಸಿದರು.

ಮೈಸೂರಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಇಂತಹ ಸಂದರ್ಭದಲ್ಲೂ ಸಿದ್ದರಾಮಯ್ಯ ಸುಭದ್ರ ಸರ್ಕಾರ ನಡೆಸುತ್ತಿದ್ದಾರೆ. ಐದು ಗ್ಯಾರಂಟಿಗಳನ್ನು ನೀಡುವ ಮೂಲಕ ಸರ್ಕಾರ ನಡೆಸುತ್ತಿದ್ದು, ಇದು ಸುಲಭದ ಮಾತಲ್ಲ. ಘೋಷಣೆ ಮಾಡಿದಾಗ ಬಿಜೆಪಿ ಮಾತ್ರವಲ್ಲದೆ, ಪ್ರಧಾನಿಯವರು ಟೀಕೆ ಮಾಡಿ ಇದನ್ನು ಕೊಡಲಾಗುವುದಿಲ್ಲ ಎಂದಿದ್ದರು. ಇಂತಹ ಕೊಡುಗೆಗಳನ್ನು ನೀಡಿರುವುದರಿಂದ ಮುಖ್ಯಮಂತ್ರಿ ಆಗಿ ಸಿದ್ದರಾಮಯ್ಯ ಮುಂದುವರೆದರೆ ಒಳ್ಳೆಯದು ಎಂಬುದು ನನ್ನ ಅಭಿಪ್ರಾಯವಾಗಿದೆ ಎಂದರು.

ಒಳಮೀಸಲಾತಿ ವಿಚಾರದಲ್ಲಿ ಸುಮಾರು 35 ವರ್ಷಗಳ ನಿರಂತರ ಹೋರಾಟಕ್ಕೆ ಸಿಕ್ಕ ಫಲವಾಗಿದೆ. ಶೈಕ್ಷಣಿಕ, ರಾಜಕೀಯವಾಗಿ ಪರಿಶಿಷ್ಟ ಜಾತಿಗಳಲ್ಲಿ ಬಲಗೈ ಸಮುದಾಯ ಪ್ರಾಬಲ್ಯವಾಗಿತ್ತು. ಎಡಗೈ ಸಮುದಾಯ ಹಿಂದುಳಿದಿತ್ತು. ರಾಜ್ಯದಲ್ಲಿ ಎಡಗೈ ಸಮುದಾಯ



ಡಾ.ಡಿ.ತಿಮ್ಮಯ್ಯ

ಸೇರಿದಂತೆ ಉಳಿದ ಜಾತಿಗಳಿಗೂ ಒಳಮೀಸಲಾತಿ ಜಾರಿಯಾಗಬೇಕು ಎಂದು 90ರ ದಶಕದಿಂದ ಹೋರಾಟ ನಡೆಯುತ್ತಲೇ ಬಂದಿದೆ. ಈ ನಡುವೆ ನಮ್ಮನ್ನಾಳಿದ ಸರ್ಕಾರಗಳು ಬರಿ ಭರವಸೆ ಕೊಟ್ಟುಕೊಂಡೆ ಬಂದಿದ್ದವು. ಆದರೆ, ಸಿದ್ದರಾಮಯ್ಯ ಒಳಮೀಸಲಾತಿ ಜಾರಿ ಮಾಡುವುದನ್ನು ತಮ್ಮ ಚುನಾವಣಾ ಪೂರ್ವ ಪ್ರನಾಳಿಕೆಯಲ್ಲಿ ಹೊರಡಿಸಿದ್ದರು. ಅವರು ಕೊಟ್ಟ ಮಾತಿನಂತೆ ಈಗ ಒಳಮೀಸಲಾತಿ ಗೊಂದಲಕ್ಕೆ ಒಂದು ತಾರ್ಕಿಕ ಅಂತ್ಯ ಹಾಡಿದ್ದಾರೆ ಎಂದರು.

ಈ ಮೂಲಕ ಸರ್ವರಿಗೂ ಸಮಪಾಲು ಸಮಬಾಳು ಎನ್ನುವ ಹಾಗೆ ಎಡಗೈ ಸಮುದಾಯಕ್ಕೆ ಶೇ.5.25, ಬಲಗೈ ಸಮುದಾಯಕ್ಕೆ ಶೇ.5.25 ಹಾಗೂ ಇತರೆ ಉಳಿದ ಸಮುದಾಯಗಳಿಗೆ ಶೇ.4.50 ಕೊಟ್ಟಿರುವುದು ಸ್ವಾಗತಾರ್ಹ. ಬಿಜೆಪಿಯವರು ಇದನ್ನು ಟೀಕೆ ಮಾಡುತ್ತಾರೆ. ಅವರು ಇರೋದೆ ಟೀಕೆ ಮಾಡುವುದಕ್ಕೆ. ಸದ್ಯಕ್ಕೆ ಶೈಕ್ಷಣಿಕ, ಔದ್ಯೋಗಿಕ ಪ್ರಾತಿನಿಧ್ಯವಾಗಿ ಶೇ.5.25 ಎರಡೂ ಸಮುದಾಯಕ್ಕೆ ಸಮನಾಗಿ ಹಂಚಿಕೆ ಮಾಡಿರುವುದು ಸಮಾಧಾನ ತಂದಿದೆ ಎಂದರು.

ವಕೀಲ ಅರುಣ್‌ಕುಮಾರ್ ಅವರು ಇದನ್ನು ವಿರೋಧಿಸಿ ಕಾನೂನು ಹೋರಾಟ ಮಾಡುತ್ತೇವೆ, ಕೋರ್ಟ್‌ನಲ್ಲಿ ಸ್ಟೇ ತರುತ್ತೇವೆ ಎನ್ನುವುದು ಸರಿಯಲ್ಲ. ಹಾಗೇನಾದರೂ ಮಾಡಿದರೆ ಮಾದಿಗ ಸಮುದಾಯ ಅರುಣ್ ಕುಮಾರ್ ಮೇಲೆ ತಿರುಗಿ ಬೀಳುತ್ತದೆ. ಈಗ ಹಸಿದವರಿಗೆ ಅನ್ನ ಕೊಟ್ಟಂತಾಗಿದೆ ಮುಂದೆ ರಾಜಕೀಯವಾಗಿಯೂ ಸ್ಥಾನಮಾನ ಸಿಗುವಂತೆ ಮುಂದಿನ ದಿನಗಳಲ್ಲಿ ಸರ್ಕಾರದ ಮುಂದೆ ನಾವು ಆಗ್ರಹಿಸೋಣ ಈಗ ಸಮುದಾಯದ ಪರವಾಗಿ ಸರ್ಕಾರಕ್ಕೆ, ಸಿದ್ದರಾಮಯ್ಯರಿಗೆ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ ಎಂದು ಹೇಳಿದರು.

ರಾಜ್ಯ ಮಟ್ಟದ ವಾಲಿಬಾಲ್ (ಪ್ರೇಮ್ ಕಪ್) ಪಂದ್ಯಾವಳಿಗೆ ಚಾಲನೆ...



ಮೈಸೂರು ತಾಲೂಕಿನ ಡಿ.ಸಾಲುಂಡಿ ಗ್ರಾಮದ ಸ್ನೇಹಜೀವಿ ಪ್ರೇಮ್ ಆತ್ಮೀಯರ ಬಳಗದ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ವಾಲಿಬಾಲ್ (ಪ್ರೇಮ್ ಕಪ್) ಪಂದ್ಯಾವಳಿಗೆ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ಚಾಲನೆ ನೀಡಿದರು. ಈ ವೇಳೆ ಯುವಕರ ಬಳಗದವರು ಹಾಗೂ ನೆರೆಯ ಗ್ರಾಮಸ್ಥರು ಉಪಸ್ಥಿತರಿದ್ದರು.

ದೇಶ ಫ್ಯಾಸಿಸ್ಟ್ ಆಡಳಿತಕ್ಕೆ ಹೊಂದಿಕೊಳ್ಳುತ್ತಿದೆ; ಇದು ಸಂವಿಧಾನದ ಆಶಯಕ್ಕೆ ವಿರುದ್ಧ

● ಪ್ರಗತಿಪರ ಚಿಂತಕ ಶಿವಸುಂದರ್ ಅಭಿಮತ ● 30–40 ವರ್ಷಗಳಿಂದ ಹಿಂದುತ್ವ, ಬ್ರಾಹ್ಮಣತ್ವ ಆಳುತ್ತಿದೆ

ಮೈಸೂರು,ಏ.27(ಎಸ್‌ಪಿಎನ್)– ಬ್ರಾಹ್ಮಣವಾದ ಮತ್ತು ಬಂಡವಾಳಶಾಹಿ ಆಲೋಚನೆ ಈ ದೇಶದಲ್ಲಿ ನಾಶವಾದರೆ ಮಾತ್ರ ಹೊಸ ನಾಗರಿಕತೆ ಕಟ್ಟಲು ಸಾಧ್ಯ ಎಂದು ಅಂಬೇಡ್ಕರ್ ಹೇಳುತ್ತಿದ್ದರು ಎಂದು ಪ್ರಗತಿಪರ ಚಿಂತಕ ಶಿವಸುಂದರ್ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಮೈಸೂರು ವಿವಿ, ಕೆಎಸ್‌ಓಯು ರಾಜ್ಯಶಾಸ್ತ್ರ ಮತ್ತು ಸಂಶೋಧನಾ ವಿಭಾಗ, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ 21ನೇ ಮಹಾ ಸಮ್ಮೇಳನ ಮತ್ತು ರಜತ ಮಹೋತ್ಸವ ಅಂಗವಾಗಿ 'ರಾಜ್ಯಶಾಸ್ತ್ರದ ಪರಿಶೀಲನೆ: ರಾಜ್ಯ, ಸಮಾಜ, ಮಾರುಕಟ್ಟೆ ಮತ್ತು ವ್ಯಕ್ತಿ' ಶೀರ್ಷಿಕೆ ವಿಚಾರ ಸಂಕಿರಣದ ಸಮಾರೋಪದಲ್ಲಿ ಭಾಗವಹಿಸಿ, ಮಾತನಾಡಿದರು.

ದೇಶ ಫ್ಯಾಸಿಸ್ಟ್ ಆಡಳಿತಕ್ಕೆ ಹೊಂದಿಕೊಳ್ಳುತ್ತಿದೆ. ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾದುದು. ಆದರೆ, ಶೋಷಿತ ಸಮುದಾಯ ಬ್ರಾಹ್ಮಣಶಾಹಿ ಬೆಂಬಲಿಸುವ ಪಕ್ಷಗಳನ್ನು ನಮ್ಮ ಬಂಧುಗಳೆಂದೇ ಭಾವಿಸಿದ ಹಿನ್ನೆಲೆಯಲ್ಲಿ ಜಾತೀಯತೆ, ಅಸಮಾನತೆ ಇತ್ತೀಚಿನ ದಿನಗಳಲ್ಲಿ ಇನ್ನೂ ಹೆಚ್ಚಾಗುತ್ತಿದೆ ಕಳೆದ 30–40 ವರ್ಷಗಳಿಂದ ಹಿಂದುತ್ವ ಮತ್ತು ಬಾಹ್ಮಣತ್ವ ನಮ್ಮನ್ನು ಆಳುತ್ತಿದೆ. ಇದನ್ನು ಅರ್ಥೈಸಿಕೊಳ್ಳುವ ಸಾಮಾನ್ಯ ಪ್ರಯತ್ನ ರಾಜ್ಯದ ಎಲ್ಲಾ ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗದ ಅಧ್ಯಾಪಕರಿಂದ ಆಗಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಚುನಾವಣಾ ಆಯೋಗ ಎಸ್‌ಐಆರ್ ಮೂಲಕ ಶೋಷಿತರು, ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಕೆಲಸ



ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ 21ನೇ ಮಹಾಸಮ್ಮೇಳನ, ರಜತ ಮಹೋತ್ಸವ ಅಂಗವಾಗಿ 'ರಾಜ್ಯ ಶಾಸ್ತ್ರದ ಪರಿಶೀಲನೆ: ರಾಜ್ಯ, ಸಮಾಜ, ಮಾರುಕಟ್ಟೆ ಮತ್ತು ವ್ಯಕ್ತಿ' ಶೀರ್ಷಿಕೆಯ ವಿಚಾರ ಸಂಕಿರಣದ ಸಮಾರೋಪದಲ್ಲಿ ಪ್ರಗತಿಪರ ಚಿಂತಕ ಶಿವಸುಂದರ್ ಮಾತನಾಡಿದರು.

ಮಾಡುತ್ತಿದೆ. ಮತದಾನ ಗುರುತಿನ ಚೀಟಿ ಪರಿಶೀಲಿಸುವ ನೆಪದಲ್ಲಿ ಯಾರು ಭಾರತೀಯ ನಾಗರಿಕನಾಗಿರಬೇಕು ಎಂಬುದನ್ನು ತೀರ್ಮಾನಿಸುತ್ತಿದೆ. ಎಸ್‌ಐಆರ್ ನಡೆದಿರುವ ರಾಜ್ಯಗಳಲ್ಲಿ ಆರೂವರೆ ಕೋಟಿ ಮತದಾರರು, ಮತದಾನದ ಹಕ್ಕಿನಿಂದ ವಂಚಿತರಾಗಿದ್ದಾರೆ. ಇದರ ಬಗ್ಗೆ ರಾಜ್ಯಶಾಸ್ತ್ರ ಅಧ್ಯಾಪಕರು ಮುಂಚೂಣಿಯಲ್ಲಿ ನಿಂತು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಮನವಿ ಮಾಡಿದರು.

ಎಸ್‌ಐಆರ್ ಸರ್ವೆ ನಮ್ಮ ರಾಜ್ಯದಲ್ಲೂ ಆರಂಭವಾಗಿದೆ. ನಾನು ಈ ದೇಶದ ನಾಗರಿಕ ಎಂದು ಪರಿಚಯಿಸಿಕೊಂಡು ನಂತರ ಮತದಾನದ ಹಕ್ಕು ಪಡೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. 30–40 ವರ್ಷಗಳ ದಾಖಲಾತಿ ತೋರಿಸದಿದ್ದರೆ, ನನಗೆ ಸಂವಿಧಾನದತ್ತವಾಗಿ ಲಭಿಸಿರುವ ಮತದಾನ ಲಭ್ಯವಿರುವುದಿಲ್ಲ. ಇಂತಹ ಸೂಕ್ಷ್ಮತೆಯನ್ನು ತಿಳಿಸುವ ಶೈಕ್ಷಣಿಕ ಶಿಸ್ತು ರಾಜ್ಯಶಾಸ್ತ್ರದ ಅಧ್ಯಾಪಕರಿಗೆ ಇರಬೇಕು ಎಂದು ಅಭಿಪ್ರಾಯಪಟ್ಟರು.

ಕಳೆದ ನಾಲ್ಕೈದು ವರ್ಷಗಳಿಂದ ಪ್ರಪಂಚದ ನಾನಾ ಭಾಗದಲ್ಲಿ ಬೇರೆಬೇರೆ ಕಾರಣಗಳಿಗಾಗಿ ಯುದ್ಧ ನಡೆಯುತ್ತಿದೆ. ಇಸ್ರೇಲ್–ಇರಾನ್ ಯುದ್ಧ ಆರಂಭವಾಗಿದೆ. ಇದು ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಇದು ರಕ್ತಪಾತದ ಯುದ್ಧವಾದರೆ, 2025ರ ಬಳಿಕ ಎಸ್‌ಐಆರ್ ಆರಂಭಿಸಿ ಪ್ರಧಾನಿ ಮೋದಿ ರಕ್ತಪಾತವಿಲ್ಲದ ಯುದ್ಧವನ್ನು ದೇಶದಲ್ಲಿ ಆರಂಭಿಸಿದ್ದು, ಇದು ಸಂವಿಧಾನ ಆಶಯವನ್ನು ದೊಡ್ಡಮಟ್ಟದಲ್ಲಿ ಘಾಸಿಗೊಳಿಸುವ ಪ್ರಕ್ರಿಯೆ ಆಗಿದೆ ಎಂದು ಆತಂಕ ವ್ಯಕ್ತಪಡಿಸಿದರಲ್ಲದೆ, ಈ ದೇಶದಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿಗೂ ನಾಗರಿಕತೆಯ ಹಕ್ಕು ನಮ್ಮ ಸಂವಿಧಾನ ನೀಡಿದೆ. ಆದರೆ, ಕೇಂದ್ರ ಸರ್ಕಾರ ನಮ್ಮ ನಾಗರೀಕತ್ವ ಪರಿಶೀಲನೆ ನಡೆಸಿ, ಅವರಿಗೆ ಬೇಕಾದ 11 ದಾಖಲೆಗಳಲ್ಲಿ ಯಾವುದಾದರೊಂದು ದಾಖಲೆ ಇಲ್ಲದಿದ್ದರೆ ನಮ್ಮನ್ನು ಈ ದೇಶದ ನಾಗರಿಕರಲ್ಲ ಎಂದು ಸಾಧಿಸಲು ಹೊರಟಿದೆ ಎಂದರು.

ಸಂವಿಧಾನ ಪೀಠಿಕೆಯಲ್ಲಿ ತಿಳಿಸಿರುವ ವ್ಯಕ್ತಿತ್ವದ ಘನತೆ ಮತ್ತು ರಾಷ್ಟ್ರದ ಸಮಗ್ರತೆಗೆ ಬಂಧುತ್ವವನ್ನು ಪ್ರೇರೇಪಿಸಬೇಕೆಂಬ ಮಾತು ಅವುಗಳ ನಡುವೆ ಆರೋಗ್ಯಕರ ಸಂಬಂಧ ಮೂಡಿಸುತ್ತಿತ್ತು. ಆದರೆ, ಬಂಧುತ್ವದ ಮೇಲೆ ದಾಳಿ ನಡೆಯುತ್ತಿರುವುದು ವಿಪರ್ಯಾಸ ಎಂದರು.

ಈ ವೇಳೆ ಡಾ.ಅಂಬೇಡ್ಕರ್ ಸಂಶೋಧನ–ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರ ಕುಮಾರ್, ರಾಜ್ಯ ರಾಜ್ಯಶಾಸ್ತ್ರ ಅಧ್ಯಾಪಕರ ಸಂಘದ ಸಂಸ್ಥಾಪಕ ಅಧ್ಯಕ್ಷ ಪ್ರೊ.ಆರ್.ಎಲ್.ಎಂ.ಪಾಟೀಲ್, ಸಂಸ್ಥಾಪಕ ಕಾರ್ಯದರ್ಶಿ ಪ್ರೊ.ಜಯಪ್ರಕಾಶ್ ಮಾವಿನಕುಳಿ ಇದ್ದರು.

ವಿದ್ಯಾಭ್ಯಾಸಕ್ಕೆ ನೆರವಾದವರ ಎಂದಿಗೂ ಮರೆಯದಿರಿ

ವಿದ್ಯಾರ್ಥಿಗಳಿಗೆ ಡಾ.ಹೆಚ್.ಬಸವನಗೌಡಪ್ಪ ಕಿವಿಮಾತು



ಮೈಸೂರಿನ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಬೆಟ್‌ಕೆರೂರ್ ದತ್ತಿ ಸಂಸ್ಥೆಯಿಂದ ವಿದ್ಯಾರ್ಥಿವೇತನ ವಿತರಣೆ ಮಾಡಲಾಯಿತು.

ಮೈಸೂರು, ಏ. 27– ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿದರೆ ಮಾತ್ರ ನೀಡಿರುವ ವಿದ್ಯಾರ್ಥಿವೇತನಕ್ಕೆ ನಿಜವಾದ ಗೌರವ ಮತ್ತು ಅರ್ಥ ಬರುತ್ತದೆ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ. ಹೆಚ್.ಬಸವನಗೌಡಪ್ಪ ಹೇಳಿದರು.

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ನಡೆದ ಅಮೆರಿಕದ ಓಹಿಯೋದಲ್ಲಿ ನೆಲಸಿರುವ ಡಾ. ವಂಸತ ಬೆಟ್‌ಕೆರೂರ್ ಮತ್ತು ಡಾ.ಮಂಗಳ ಬೆಟ್ ಕೆರೂರ್ ರವರು ಸ್ಥಾಪಿಸಿರುವ ದತ್ತಿನಿಧಿಯ 2026ನೇ ಸಾಲಿನ ವಿದ್ಯಾರ್ಥಿವೇತನ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿವರ್ಷ ಡಾ.ವಸಂತ ಬೆಟ್‌ಕೆರೂರ್ ಮತ್ತು ಡಾ.ಮಂಗಳ ಬೆಟ್‌ಕೆರೂರ್ ದತ್ತಿ ಸಂಸ್ಥೆಯಿಂದ 24 ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಿ ಅವರ ವಿದ್ಯಾಭ್ಯಾಸ ಮುಗಿಯುವವರೆಗೂ ಆರ್ಥಿಕವಾಗಿ ಸಹಾಯ ಮಾಡುತ್ತಿರುವುದು ಶ್ಲಾಘನೀಯ. ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳು ಶ್ರಮ ವಹಿಸಿ ಶೈಕ್ಷಣಿಕವಾಗಿ ಸಾಧನೆ ಮಾಡಿ ಉನ್ನತ ನೌಕರಿ ಪಡೆದು ತಮ್ಮ ತಂದೆ ತಾಯಿ ಮತ್ತು ಕುಟುಂಬವನ್ನು ನೋಡಿಕೊಳ್ಳುವ ಜವಾಬ್ದಾರಿ ತೆಗೆದುಕೊಳ್ಳಬೇಕು. ವಿದ್ಯಾಭ್ಯಾಸ ನೀಡಿದ ಗುರುಗಳನ್ನು ಹಾಗೂ ಸಹಾಯ ಮಾಡಿದವರನ್ನು ಎಂದಿಗೂ ಮರೆಯಬಾರದು ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಶಿವಕುಮಾರಸ್ವಾಮಿಯವರು ಬೆಟ್‌ಕೆರೂರ್ ದತ್ತಿ ಸಂಸ್ಥೆಯಿಂದ ವಿದ್ಯಾರ್ಥಿವೇತನ ವಿತರಣೆ ಮಾಡುತ್ತಿರುವುದು ಇತರರಿಗೆ ಮಾದರಿ ಹಾಗೂ ಪ್ರೇರಣೆಯಾಗಿದೆ. ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳು ಶ್ರಮ ವಹಿಸಿ ಶೈಕ್ಷಣಿಕವಾಗಿ ಶಿಕ್ಷಣದಲ್ಲಿ ಸಾಧನೆ ಮಾಡಿ, ಮುಂದೆ ಇತರೆ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಂತ ಶಕ್ತಿ ಒದಗಿ ಬರಲಿ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್ ಸ್ವಾಗತಿಸಿದರು. ಡಾ. ಅಕ್ಕಮಹಾದೇವಿ, ಡಾ. ಸುನೀತಾ ಬೆಟ್ ಕೆರೂರ್, ಶ್ರೀಮತಿ ಉಮಾ ಬೆಟ್ ಕೆರೂರ್, ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿ ಹಾಗೂ ವಿದ್ಯಾರ್ಥಿಗಳು ಮತ್ತು ಪೋಷಕರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 28 ಏಪ್ರಿಲ್ 2026

ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಮದ್ದೂರು ಚೆಸ್ಕಾಂಗೆ ಮುತ್ತಿಗೆ

ಮದ್ದೂರು: ಸಮರ್ಪಕವಾದ ವಿದ್ಯುತ್ ಪೂರೈಕೆ ಮಾಡುವಂತೆ ಒತ್ತಾಯಿಸಿ ವಿವಿಧ ಗ್ರಾಮಗಳ ಗ್ರಾಮಸ್ಥರು ನಗರದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಚೇರಿಗೆ ಸೋಮವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.


ಸಮರ್ಪಕ ವಿದ್ಯುತ್ ಸರಬರಾಜುಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವುದು.

ಚೆಸ್ಕಾಂ ಕಚೇರಿ ಮುಂದೆ ಸೋಮವಾರ ಜಮಾಯಿಸಿದ ಮಾಲಗಾರನಹಳ್ಳಿ, ಅಜ್ಜಹಳ್ಳಿ, ನಗರಕೆರೆ ಸೇರಿದಂತೆ ಇನ್ನಿತರರ ಗ್ರಾಮಗಳ ಗ್ರಾಮಸ್ಥರು ಸಮರ್ಪಕ ವಿದ್ಯುತ್ ಪೂರೈಕೆ ಮಾಡದ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರಗತಿಪರ ಚಿಂತಕ ನ.ಲಿ.ಕೃಷ್ಣ ಮಾತನಾಡಿ, ಬಿರು ಬಿಸಿಲ ಬೇಗೆಗೆ ಬೆಳೆಗಳನ್ನು ಉಳಿಸಿಕೊಳ್ಳಲು ಹರಸಾಹಸ ಮಾಡುತ್ತಿರುವ ರೈತರು ಹಾಗೂ ಬೋರ್‌ವೆಲ್ ಮಾಲೀಕರು ಒಂದು ವಾರದಿಂದ ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ಬೇಸತ್ತು ಚೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಇಲಾಖೆ ನಿರ್ಲಕ್ಷ್ಯ ಖಂಡಿಸಿ ಪ್ರತಿಭಟನೆ ಮಾಡುತ್ತಿದ್ದಾರೆ ಎಂದರು.

ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುವ ಸಮಯ ನಿಗಧಿಪಡಿಸಿ ಅದರಂತೆ ಅಡಚಣೆ ಇಲ್ಲದಂತೆ ಗುಣಮಟ್ಟದ ವಿದ್ಯುತ್ ಕೊಡಬೇಕು. ವಿದ್ಯುತ್ ಸರಬರಾಜು ಸಮಯದಲ್ಲಿ ಬದಲಾವಣೆ ಆದಾಗ ರೈತರಿಗೆ ವ್ಯತ್ಯಯದ ಮಾಹಿತಿ ನೀಡಬೇಕು. ರಿಪೇರಿ ಹಾಗೂ ಲೋಡ್ ಶೆಡ್ಡಿಂಗ್ ಕಾರಣದಿಂದ ಕಡಿತಗೊಳಿಸುವ ವಿದ್ಯುತ್ ಅನ್ನು ನಿಗಧಿಪಡಿಸಿದ ಸಮಯ ದಷ್ಟು ಕಾಲ ವಿದ್ಯುತ್ ಭರ್ತಿಯಾಗಿ ನೀಡಬೇಕು ಎಂದು ಆಗ್ರಹಿಸಿದರು.

ಕ್ಯಾತಘಟ್ಟ, ಅಜ್ಜಹಳ್ಳಿ ವಿದ್ಯುತ್ ಪೀಡರ್ ಕೆಲಸ ಶೀಘ್ರ ಮುಗಿಸಿ ವಿದ್ಯುತ್ ಸಮಯ ಹೆಚ್ಚಳ ಮಾಡಬೇಕು. ರೈತರು ಹಾಗೂ ಗ್ರಾಹಕರ ಜತೆ ಅಧಿಕಾರಿಗಳು, ನೌಕರರು ಸೌಜನ್ಯಯುತವಾಗಿ ವರ್ತಿಸಿ ಸರಿಯಾದ ಮಾಹಿತಿ ನೀಡಬೇಕು ಎಂದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕಾರ್ಯನಿರ್ವಾಹಕ ಅಭಿಯಂತರ ಶಿವಕುಮಾರ್ ಪ್ರತಿಭಟನಕಾರರ ಮನವಿ ಆಲಿಸಿ ಮಾತನಾಡಿ, ರಾಜ್ಯಮಟ್ಟದಲ್ಲಿ ವಿದ್ಯುತ್ ಪೂರೈಕೆ ಹಾಗೂ ವಿತರಣಾ ಕ್ರಮದಲ್ಲಿ ಉಂಟಾದ ವ್ಯತ್ಯಯದಿಂದ ಸರಬರಾಜಿನಲ್ಲಿ ಕಳೆದವಾರ ತೊಂದರೆಯಾಗಿದ್ದು, ಇದೀಗ ಈ ಕೊರತೆ ನೀಗಿಸಲು ಸುಧಾರಣೆ ಕ್ರಮಗಳು ರಾಜ್ಯಮಟ್ಟದಲ್ಲಿ ಆಗುತ್ತಿದ್ದು ಶೀಘ್ರವಾಗಿ ಪರಿಸ್ಥಿತಿ ಸುಧಾರಣೆ ಆಗಲಿದ್ದು ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಲಾಗುವುದು ಹಾಗೂ ನಿಮ್ಮ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ನಾರಿಶಕ್ತಿ ವಂದನಾ ಮಹಿಳಾ ಮೀಸಲಾತಿ ಬಿಲ್‌ಗೆ ಸೋಲು

ಪಾಂಡವಪುರ: ಬಿಜೆಪಿ ಮಹಿಳಾ ಘಟಕದಿಂದ ಪ್ರತಿಭಟನೆ

ಪಾಂಡವಪುರ: ಕೇಂದ್ರ ಸರಕಾರದ ನಾರಿಶಕ್ತಿ ವಂದನಾ ಮಹಿಳಾ ಮೀಸಲಾತಿ ಬಿಲ್ ಅನ್ನು ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ಸಂಸತ್‌ನಲ್ಲಿ ಸೋಲಿಸಿದ್ದನ್ನು ಖಂಡಿಸಿ ಪಟ್ಟಣದಲ್ಲಿ ಬಿಜೆಪಿ ಮಹಿಳಾ ಜಿಲ್ಲಾಧ್ಯಕ್ಷ ಮಂಗಳ ನವೀನ್‌ಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.


ಪಾಂಡವಪುರ ಪಟ್ಟಣದ ಐದುದೀಪದ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತೆಯರು ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ವಿರುದ್ಧ ಪ್ರತಿಭಟನೆ ನಡೆಸಿದರು.

ಪಟ್ಟಣದ ಐದು ದೀಪದ ವೃತ್ತದಲ್ಲಿ ಮಂಗಳ ನವೀನ್‌ಕುಮಾರ್ ನೇತೃತ್ವದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ವಿರುದ್ಧ ಘೋಷಣೆಕೂಗಿ ಆಕ್ರೋಶ ಹೊರಹಾಕಿದರು.

ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಮಂಗಳ ನವೀನ್ ಮಾತನಾಡಿ, ಮಹಿಳೆಯರಿಗೆ ರಾಜಕೀಯವಾಗಿ ಶಕ್ತಿ ತುಂಬುವ ಉದ್ದೇಶದಿಂದ ಪ್ರಧಾನಿ ನರೇಂದ್ರಮೋದಿ ಅವರ ಸರಕಾರ ತರಲು ಹೊರಟಿದ್ದ ನಾರಿಶಕ್ತಿ ವಂದನಾ ಮಹಿಳಾ ಮೀಸಲಾತಿ ಬಿಲ್‌ಅನ್ನು ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ಸಂಸತ್‌ನಲ್ಲಿ ವಿರೋಧಿಸಿ ತಿರಸ್ಕರಿಸುವ ಮೂಲಕ ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿಕೊಂಡಿದೆ ಎಂದು ಕಿಡಿಕಾರಿದರು.


ಕಾಂಗ್ರೆಸ್ ಪಕ್ಷ ಮೊದಲಿಂದಲೂ ಮಹಿಳೆಯರನ್ನು ಕೇವಲ ಓಟ್ ಬ್ಯಾಂಕ್ ಆಗಿ ಬಳಸಿಕೊಂಡಿದೆ. ಮಹಿಳೆಯರಿಗೆ ರಾಜಕೀಯವಾಗಿ ಶಕ್ತಿ ತುಂಬುವ ಕೆಲಸ ಮಾಡಿಲ್ಲ. ಕಾಂಗ್ರೆಸ್ ಪಕ್ಷದವರು ಮಸೂದೆಯನ್ನು ಸೋಲಿಸಿ ಸಂಭ್ರಮಿಸಿದ್ದಾರೆ. ನಾರಿ ಶಕ್ತಿ ಮಸೂದೆಯನ್ನು ಸೋಲಿಸಿ ಅವಮಾನ ಮಾಡಿದ್ದಾರೆ. ಇದು ಮಸೂದೆಯ ಸೋಲಲ್ಲ ಇದು ದೇಶದ ಮಹಿಳೆಯರ ಸೋಲಾಗಿದೆ. ಮುಂದಿನ ದಿನಗಳಲ್ಲಿ ದೇಶದ ಮಹಿಳೆಯರು ಕಾಂಗ್ರೆಸ್ ಪಕ್ಷಕ್ಕೆ ತಕ್ಕಪಾಠಕಲಿಸಲಿದ್ದಾರೆ ಎಂದು ಆಕ್ರೋಶ ಹೊರಹಾಕಿದರು.

ತಾಲೂಕು ಅಧ್ಯಕ್ಷ ಧನಂಜಯ್ ಮಾತನಾಡಿ, ದೇಶದ ಮಹಿಳೆಯರ ಮೀಸಲಾತಿಯನ್ನು ಕೊಡಬೇಕು ಎಂಬ ದಶಕಗಳ ಬೇಡಿಕೆಗೆ ಸ್ಪಂಧಿಸಿದ ಪ್ರಧಾನಿ ನರೇಂದ್ರಮೋದಿ ಅವರ ಸರಕಾರ ಸಂಸತ್‌ನಲ್ಲಿ ಮಹಿಳಾ ಬಿಲ್‌ನ್ನು ಮಂಡಿಸಿದಾಗ, ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ರಾಜಕೀಯ ದೊಂಬರಾಟಕ್ಕೆ ಬಿಲ್ ಅನ್ನು ವಿರೋಧಿಸುವ ಮೂಲಕ ದೇಶದ ಮಹಿಳೆಯರಿಗೆ ಅವಮಾನ ಮಾಡಿ ದ್ದಾರೆ. ಹಾಗಾಗಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ದೇಶದ ಮಹಿಳೆಯರ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮೈಶುಗರ್ ಮಾಜಿ ಅಧ್ಯಕ್ಷ ಜೆ.ಶಿವಲಿಂಗೇಗೌಡ, ನಗರ ಘಟಕದ ಅಧ್ಯಕ್ಷ ಸೋಮಶೇಖರ್, ಮೇಲುಕೋಟೆ ಮಂಡಲ ಅಧ್ಯಕ್ಷಎಸ್.ಎನ್.ಟಿಸೋಮಶೇಖರ್, ಪುರಸಭೆ ಮಾಜಿ ಸದಸ್ಯ ಅಶೋಕ್, ರಾಮು, ರಾಮಚಂದ್ರು, ಚನ್ನೇಗೌಡ, ಚಲುವರಾಜು, ನಿರ್ಮಲಾ ಆನಂದ, ಶೋಭಾ ಪಿ.ಗೌಡ, ಪುರುಷೊತ್ತಮ್, ಮಹದೇವಸ್ವಾಮಿ, ಸಿ.ಕೆ.ರಮೇಶ್, ಮಂಜಾಚಾರಿ ಸೇರಿದಂತೆ ಹಲವರು ಇದ್ದರು.

ನಾಲ್ವಡಿ ಜಯಂತಿ: ಅಕ್ಷರ ಜಾತ್ರೆಗೆ ಕವನಗಳು, ಪ್ರಶಸ್ತಿಗೆ ಹೆಸರುಗಳ ಆಹ್ವಾನ

ಮಂಡ್ಯ: ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣ



ರಾಜ ಒಡೆಯರ್ ಅವರ ಜಯಂತಿ ಅಂಗವಾಗಿ ಜೂನ್ 7ರಂದು ಭಾನುವಾರ ಮಂಡ್ಯ ನಗರದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ 17ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರಜಾತ್ರೆ ಆಯೋಜಿಸಿದ್ದು, ಆಸಕ್ತ ಕವಿಗಳಿಂದ ಕವನಗಳನ್ನು ಹಾಗೂ ವಿವಿಧ ಪ್ರಶಸ್ತಿಗೆ ಸಾಧಕರಿಂದ ಹೆಸರನ್ನು ಆಹ್ವಾನಿಸಲಾಗಿದೆ.

ಆಸಕ್ತರು 25 ಸಾಲಿನ ಎರಡು ಕವನಗಳು, ಕಿರು ಪರಿಚಯ, ಪೋಟೋ, ಮೊಬೈಲ್ ಸಂಖ್ಯೆ, ವಿಳಾಸವನ್ನು ಮತ್ತು ಸಾಧಕರು ಸಾಧನೆಯ ವಿವರಗಳನ್ನು ಮೇ 15ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು, ಸಾಧನೆಯ ವಿವರಗಳನ್ನು ಕಳುಹಿಸಬೇಕು. ಕವನ ಯಾವುದಾದರೂ ವಿಷಯವನ್ನು ಒಳಗೊಂಡಿರಬಹುದು. ಆಯ್ಕೆಯಾದ ಕವಿತೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗುವುದು. ಐವತ್ತು ಮಂದಿ ಕವಿಗಳಿಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. ಉತ್ತಮ ಸಾಧಕರನ್ನು ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು. ಕವಿಗೋಷ್ಠಿಯಲ್ಲಿ ಭಾಗವಹಿಸುವವರಿಗೆ ಕವನ ವಾಚನಕ್ಕೆ ಅವಕಾಶ, ಪ್ರಮಾಣ ಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು.

ಹತ್ತು ಉತ್ತಮ ಕವನಗಳಿಗೆ ಕಾವ್ಯಶ್ರೀ ಹಾಗೂ ತಲಾ ಹತ್ತು ಮಂದಿ ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್, ಕನ್ನಡರತ್ನ, ಸಮಾಜ ಸೇವಾ ರತ್ನ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುವುದು. ಕವಿಗಳು, ಕವನಗಳು, ಸಾಧಕರು ಪರಿಚಯವನ್ನು ವಿಳಾಸ: ಎಸ್.ಕೃಷ್ಣಸ್ವರ್ಣಸಂದ್ರ, ಕವಿಮಿತ್ರ, ನಂ-767, ಸ್ವರ್ಣಸಂದ್ರ, ಮಂಡ್ಯ-2 ಕಳುಹಿಸಬೇಕು. ವ್ಯಾಟ್ಸಾಪ್ ಮೂಲಕವೂ ನಂ-9448424380ಗೆ ಕಳುಹಿಸಬೇಕಾಗಿ ಡಾ.ಜೀಶಂಪ ಸಾಹಿತ್ಯ ವೇದಿಕೆ ಮನವಿ ಮಾಡಿದೆ.

ರಾಜ್ಯದಲ್ಲಿ ಒಳ ಮೀಸಲಾತಿ ಸಮನಾಗಿ ಹಂಚಿಕೆ

ಕೆ.ಆರ್.ಪೇಟೆಯಲ್ಲಿ ಸಿಹಿಹಂಚಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ

ಕೆ.ಆರ್.ಪೇಟೆ: ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿಯನ್ನು ಸಮನಾಗಿ ಹಂಚಿದ ಹಿನ್ನೆಲೆಯಲ್ಲಿ ಕೆ.ಆರ್.ಪೇಟೆ ತಾಲೂಕಿನ ಮಾದಿಗ ಸಮುದಾಯದ ಮುಖಂಡರು ಕೆ.ಆರ್.ಪೇಟೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಾಚರಣೆ ಮಾಡಲಾಯಿತು.


ಮಾದಿಗ ಸಮುದಾಯದ ಮುಖಂಡರಿಂದ ಸಂಭ್ರಮಾಚರಣೆ ಮಾಡಲಾಯಿತು.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ಜಾರಿಗೆ ಸಂಬಂಧಿಸಿದಂತೆ ಮಹತ್ವದ ನಿರ್ಧಾರ ಕೈಗೊಂಡಿದೆ. ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಸಮಿತಿಯ ಶಿಫಾರಸುಗಳನ್ನು ಆಧರಿಸಿ ಸರ್ಕಾರ ಗ್ರೂಪ್ ಎ ಗೆ 5.25, ಗ್ರೂಪ್ ಬಿ ಗೆ 5.25 ಮತ್ತು ಗ್ರೂಪ್ ಸಿ ಗೆ 4.5 ಪ್ರಮಾಣದಲ್ಲಿ ಒಳಮೀಸಲಾತಿ ಅನುಷ್ಠಾನಕ್ಕೆ ತೀರ್ಮಾನಿಸಿದೆ.

ಇದು ರಾಜ್ಯದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಬೇಕಾದ ದಿನವಾಗಿದೆ. ಸುಮಾರು 35ರಿಂದ 40 ವರ್ಷಗಳ ನಮ್ಮ ಮಾದಿಗ ಸಮುದಾಯದ ತ್ಯಾಗ, ಬಲಿದಾನದ ಹೋರಾಟಕ್ಕೆ ಇಂದು ನ್ಯಾಯ ಸಿಕ್ಕಿದಂತಾಗಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರಾದ ಕುಮಾರ್. ತಾಲೂಕು ಬಾಬು ಜಗಜೀವನ್ ರಾಮ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಹೆಚ್.ಎಂ. ಪುಟ್ಟರಾಜು, ತಾಲ್ಲೂಕು ಮಾದಾರ ಮಹಾಸಭಾದ ಅಧ್ಯಕ್ಷ ರಾಯ ಸಮುದ್ರ ಆರ್.ಟಿ.ಉಮೇಶ್, ಕಾರ್ಯದರ್ಶಿ ಆರ್.ಕೆ. ಧನಂಜಯ್, ಉಪಾಧ್ಯಕ್ಷ ಪ್ರಸನ್ನ. ಖಜಾಂಜಿ ಕಾಂತರಾಜು. ಮಾದಿಗ ಮಾತಂಗಿ ಸಮಾಜ ಪರಿವರ್ತನಾ ವೇದಿಕೆಯ ಜಿಲ್ಲಾಧ್ಯಕ್ಷ. ಹೊಸಹೊಳಲು ಕುಮಾರ್, ಹೊಸಹೊಳಲು ಸೊಸೈಟಿ ಉಪಾಧ್ಯಕ್ಷ ಚಂದ್ರಶೇಖರ್ ಹೆಚ್.ಬಿ.ನಾಗೋನಹಳ್ಳಿ ಸುಧಾಕರ್, ಸುರೇಶ್ ಹರಿಜನ, ಮಂನಾಗರಾಜು, ಹರೀಶ್, ರವಿ, ಶಿವುಕುಮಾರ ಡಿ, ಶಿವು, ಭಾಸ್ಕರ್, ಸುಧಾಕರ್, ಶಶಿಕುಮಾರ್, ನಾಗರಾಜು ನೀಲಯ್ಯ, ಮಂಜು, ಪಟೇಲ್ ಎಸ್.ಮಂಜು, ಗೋಪಿನಾಥ್, ಸುಕುಮಾರ, ನಾಗೇಶ್, ಅರ್ಜುನ್, ಹೆಚ್.ಆರ್.ಕಾಂತರಾಜು, ಸಾಯಿಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಘಟಕ ಸ್ಥಾಪನೆಗೆ ಮಂಡ್ಯದಲ್ಲಿ ಜಾಗ ಲಭ್ಯವಿದೆ

ಮಂಡ್ಯ: ಅಮೆರಿಕ ಮೂಲಕ ಸ್ಯಾನ್ಸನ್ ಸಂಸ್ಥೆಯಿಂದ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಘಟಕ ಸ್ಥಾಪನೆಗೆ ಜಿಲ್ಲೆಯಲ್ಲಿ ನೂರು ಎಕರೆಗೂ ಹೆಚ್ಚಿನ ಸರಕಾರಿ ಭೂಮಿ ಲಭ್ಯವಿದೆ ಎಂದು ಸಾಮಾಜಿಕ ಕಾರ್ಯಕರ್ತ ಕೆ.ಆರ್.ರವೀಂದ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ತಾಲೂಕಿನ ಕೊತ್ತತ್ತಿ ಹೋಬಳಿಯ ರಾಗಿಮುದ್ದನಹಳ್ಳಿ ಗ್ರಾಮದ ಸರ್ವೆ ನಂ. 81ರಲ್ಲಿ 118 ಎಕರೆ 31 ಗುಂಟೆ ಇದ್ದಕ್ಕೆ ಹೊಂದಿಕೊಂಡಂತೆ ಶ್ರೀರಂಗಪಟ್ಟಣ ತಾಲೂಕಿನ ಕೆ.ಶೆಟ್ಟಹಳ್ಳಿ 2ರ ಹೋಬಳಿಯ ಸಿದ್ದಾಪುರ ಗ್ರಾಮದ ಸರ್ವೆ ನಂ.93ರಲ್ಲಿ 33 ಎಕರೆ 28 ಗುಂಟೆ ಸರಕಾರಿ ಗೋಮಾದ ಜಮೀನಿದೆ ಎಂದರು. ಇದರಲ್ಲಿ ಸೆಮಿ ಕಂಡಕ್ಟರ್ ಫ್ಯಾಬ್ರಿಕೇಷನ್ ಘಟಕ ಸ್ಥಾಪನೆಗೆ ಬೇಕಾದ 100 ಎಕರೆಗೂ ಹೆಚ್ಚಿನ ಭೂಮಿ ದೊರೆಯಲಿದೆ. ಆದರೆ ಬಸರಾಳಿನಲ್ಲಿ ಎಆರ್‌ಎಐ ಸಂಸ್ಥೆಯ ಕಾರ್ಖಾನೆ ಸ್ಥಾಪನೆಗೆ ಕೈಗಾರಿಕಾ ವಲಯದ ಜಾಗ ಇದೆ ಎಂದು ಸರಕಾರ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದು, ಅಲ್ಲಿ ಅಗತ್ಯಕ್ಕೆ ತಕ್ಕಂತ ಭೂಮಿ ಲಭ್ಯವಿಲ್ಲ ಎಂದು ಹೇಳಿದರು.

ಜಿಲ್ಲೆಯ ಪಾಂಡವಪುರ, ಕೆ.ಆರ್.ಪೇಟೆ, ಶ್ರೀರಂಗಪಟ್ಟಣ ಮಳವಳ್ಳಿ, ನಾಗಮಂಗಲ ತಾಲೂಕುಗಳಲ್ಲಿ ಸಾವಿರಾರು ಎಕರೆಯ ಖಾಲಿ ಭೂಮಿ ಇದೆ. ಜಿಲ್ಲೆಯಲ್ಲಿ ಒಟ್ಟು 90 ಸಾವಿರ ಎಕರೆಗೂ ಹೆಚ್ಚು ಗೋಮಾಳದ ಭೂಮಿಯಿದೆ. ಆದರೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಕಚ್ಚಾಟದಿಂದಾಗಿ ಮಂಡ್ಯ ಜಿಲ್ಲೆ ಕೈಗಾರಿಕೆಯಿಂದ ವಂಚಿತವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಎಸ್‌ಎಸ್‌ಎಲ್‌ಸಿ: ಆಂಜನೇಯಸ್ವಾಮಿ ಪ್ರೌಢಶಾಲೆಗೆ ಶೇ.100 ಫಲಿತಾಂಶ

ಮಂಡ್ಯ: ಎಸ್‌ಎಸ್‌ಎಲ್‌ಸಿ. ಪರೀಕ್ಷೆಯಲ್ಲಿ ತಾಲೂಕಿನ ಯಲಿಯೂರು ಗ್ರಾಮದ ಶ್ರೀ ಆಂಜನೇಯಸ್ವಾಮಿ ಪ್ರೌಢಶಾಲೆಗೆ ಶೇ 100ರಷ್ಟು ಫಲಿತಾಂಶ ಬಂದಿದೆ. ಒಟ್ಟು 46 ಮಕ್ಕಳು ಪರೀಕ್ಷೆ ಬರೆದಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. ಏಳು ವಿದ್ಯಾರ್ಥಿಗಳು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾದರೆ, 28 ಮಕ್ಕಳು ಪ್ರಥಮ ದರ್ಜೆಯಲ್ಲಿ, 7 ಮಂದಿ ದ್ವಿತೀಯ ಹಾಗೂ 4 ಮಂದಿ ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಒಂದನೇ ಪುಟದಿಂದ

ಮೇ 3ರವರೆಗೆ ಪ್ರವೇಶ ನಿಷಿದ್ಧ


ಪ್ರವಾಸಿಗರ ವಾಹನಗಳನ್ನು ವಾಪಸ್ ಕಳುಹಿಸುತ್ತಿರುವುದು.

ಕಾಡಾನೆಯೊಂದು ದಾಳಿ ಮಾಡಿದ ಪರಿಣಾಮ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ನೀರು ಅರಸಿ ಕಾಡಾನೆಗಳು ಬಂದಾಗ ಪ್ರವಾಸಿಗರ ಮೇಲೆ ಆಕಸ್ಮಿಕ ದಾಳಿ ನಡೆಸಬಹುದೆಂಬ ಮುನ್ನೆಚ್ಚರಿಕೆಯಿಂದ ಇದೀಗ ಅರಣ್ಯ ಇಲಾಖೆ ಮೇ 3ರವರೆಗೆ ಕಾವೇರಿ ವನ್ಯಧಾಮದ ಸಂಗಮ ಹಾಗೂ ಮೇಕೆದಾಟು ಪ್ರವಾಸಿ ತಾಣಕ್ಕೆ ಪ್ರವಾಸಿಗರು ಪ್ರವೇಶ ನಿರ್ಬಂಧಿಸಿದೆ.

ಆ ಮಹಿಳೆ ಮೇಲೆ ಅದು ದಾಳಿ ನಡೆಸಲಿಲ್ಲ. ಆದರೆ, ಆನೆ ಕಾಲು ತಾಕಿದ್ದರಿಂದ ಮಹಿಳೆ ಕಾಲಿಗೆ ಗಾಯವಾಗಿತ್ತು. ನೀರಿನಲ್ಲಿ ಬಿದ್ದಿದ್ದ ಮಹಿಳೆಯನ್ನು ಅರಣ್ಯ ಸಿಬ್ಬಂದಿ ರಕ್ಷಣೆ ಮಾಡಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದರು.ಅವರು ಪ್ರಾಣಾಪಾಯದಿಂದ ಪಾರಾಗಿದ್ದು, ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಶನಿವಾರ ಕಾವೇರಿ ವನ್ಯಧಾಮ ಸಂಗಮ ವಲಯದಲ್ಲಿಯೇ

ಈ ಸಂಬಂಧ ಸಂಗಮ ವಲಯದ ಆರ್‌ಎಫ್‌ಓ ಅನಿಲ್ ಕುಮಾರ್ ಅವರು ಆದೇಶಿಸಿದ್ದು, ಸಂಗಮ ಕ್ಷೇತ್ರದ ರಸ್ತೆಯಲ್ಲಿಯೇ ಬ್ಯಾರಿಕೇಡ್ ಅಳವಡಿಸಿ, ಪ್ರವಾಸಿಗರನ್ನು ವಾಪಸ್ ಕಳುಹಿಸಲು ಸಿಬ್ಬಂದಿ ನಿಯೋಜಿಸಲಾಗಿದೆ.

ಹುಲಿರಾಯ; ಪ್ರವಾಸಿಗರಿಗೆ ಕಣ್ಣಿಗೆ ಹಬ್ಬ!

ಬೇಸಿಗೆ ರಜೆ ಹಿನ್ನೆಲೆಯಲ್ಲಿ ನಾಗರ ಹೊಳೆ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಸಫಾರಿಗೆ ವಿವಿಧೆಡೆಯಿಂದ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, ಹುಲಿ, ಆನೆ, ಚಿರತೆ ಸೇರಿದಂತೆ ವಿವಿಧ ಪ್ರಾಣಿಗಳು ಪ್ರವಾಸಿಗರಿಗೆ ದರ್ಶನ ನೀಡುತ್ತಿವೆ. ಇಂದು ಮಧ್ಯಾಹ್ನ ನಾಗರಹೊಳೆ ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರದಿಂದ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಕೆರೆಯಲ್ಲಿ ಹುಲಿ ದರ್ಶನ ನೀಡಿದೆ. ಬಿಸಿಲಿನ ಬೇಗೆಗೆ ತತ್ತರಿಸಿ, ಹುಲಿ ರಾಯ ಅರ್ಧ ಗಂಟೆಗೂ ಹೆಚ್ಚು ಕಾಲ ನೀರಿನಲ್ಲೇ ಟಿಕಾಣಿ ಹೂಡಿತ್ತು. ಸಫಾರಿಗೆ ಬಂದಿದ್ದ ಪ್ರವಾಸಿಗರು ನೀರಿನಲ್ಲಿ ಮಿಂದೆದ್ದ ಹುಲಿಯನ್ನು ನೋಡಿ ಸಂಭ್ರಮಿಸಿದರು.

ಜಿಪಂ ಕ್ಷೇತ್ರದ ಗಡಿ ಮರುವಿಂಗಡಣೆ

ಅಲ್ಲದೆ, ಪ್ರತಿ ಜಿಪಂ ಕ್ಷೇತ್ರದ ವ್ಯಾಪ್ತಿಗೆ ಯಾವೆಲ್ಲಾ ಗ್ರಾಮಗಳು ಬರುತ್ತವೆ ಎಂಬ ಸಂಪೂರ್ಣ ಪಟ್ಟಿಯನ್ನು ಸಹ ಅಧಿಸೂಚನೆಯಲ್ಲಿ ನೀಡಲಾಗಿದೆ. ಪಂಚಾಯಿತಿ ಗಳ ಗಡಿ ನಿಗದಿ ಆಯೋಗದ ಶಿಫಾರಸು ಆಧರಿಸಿ ಈ ಅಧಿಸೂಚನೆ ಹೊರಡಿಸಲಾಗಿದೆ

ಇದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ ಅಲ್ಲದೆ ಮೇ ಐದರಂದು ಉನ್ನತ ಮಟ್ಟದ ಸಭೆ ಕರೆದಿದ್ದು ಅಲ್ಲಿ ಈ ಕುರಿತಂತೆ ಅಹವಾಲು ಸಲ್ಲಿಸಲು ಅವಕಾಶ ನೀಡಲಾಗಿದೆ.

ಮೇ 5ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 1:30ರವರೆಗೆ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಧಾರವಾಡ, ಬೆಳಗಾವಿ, ಬಾಗಲಕೋಟೆ, ಗದಗ, ವಿಜಯಪುರ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆಗಳಿಗೆ ಸಂಬಂಧಿಸಿದ ಅಹವಾಲುಗಳ ಪರಿಶೀಲನೆ. ಮಧ್ಯಾಹ್ನ 2:30 ರಿಂದ ಸಂಜೆ 5:00ರವರೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ, ಕೋಲಾರ, ಚಿತ್ರದುರ್ಗ, ಶಿವಮೊಗ್ಗ, ಕೊಡಗು, ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಉಡುಪಿ ಜಿಲ್ಲೆಗಳಿಗೆ ಸಂಬಂಧಿಸಿದ ಅಹವಾಲುಗಳ ಪರಿಶೀಲನೆ ನಡೆಯಲಿದೆ.

ಶಾರಿಕ್‌ಗೆ 10 ವರ್ಷ ಕಠಿಣ ಜೈಲು ಶಿಕ್ಷೆ

ಆರೋಪಿಗೆ ಜೀವಾವಧಿ ಶಿಕ್ಷೆ ನೀಡಿದ್ರೇನೇ ಒಳ್ಳೆಯದು ಎಂದು ಆಟೋ ಚಾಲಕ ಹೇಳಿದರು. ಮಂಗಳೂರಿನ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಉಗ್ರ ಶಾರಿಕ್‌ಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿ ಎನ್‌ಐಎ ಸ್ಪೆಷಲ್ ಕೋರ್ಟ್ ಆದೇಶ ಹೊರಡಿಸಿದೆ. ಸೆಕ್ಷನ್ 121 ಎ, ಸೆಕ್ಷನ್ 122, ಸೆಕ್ಷನ್ 326 ಹಾಗೂ ಯುಎಪಿಎ ಸೇರಿದಂತೆ ಹಲವು ಸೆಕ್ಷನ್‌ಗಳ ಅಡಿಯಲ್ಲಿ ಕೋರ್ಟ್ 10 ವರ್ಷ ಕಠಿಣ ಶಿಕ್ಷೆ, 10 ಸಾವಿರ ದಂಡ ವಿಧಿಸಿದೆ.

ಹಂತಕ್ಕೆ ಕಾಂಗ್ರೆಸ್ 'ಪವರ್' ಪಾಲಿಟಿಕ್ಸ್

ಸೂಚನೆ ನೀಡುವಂತೆ ವರಿಷ್ಠರಿಗೆ ಮನವಿ ಸಲ್ಲಿಸಲು ತೀರ್ಮಾನಿಸಿದ್ದಾರೆ.

ಕಳೆದ ವಾರ ದೆಹಲಿಯಲ್ಲಿ ಬೀಡು ಬಿಟ್ಟು ಹಲವು ನಾಯಕರನ್ನು ಭೇಟಿ ಮಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸರ್ಕಾರಕ್ಕೆ ಮೂರು ವರ್ಷ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರ ಹಸ್ತಾಂತರ ಆಗಬೇಕು ಎಂದು ಮನವಿ ಮಾಡಿದ್ದಾರೆ. ಅದರಲ್ಲೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಸಮಯದಲ್ಲಿ ತಮ್ಮ ನೇತೃತ್ವದಲ್ಲಿ ಅಧಿಕಾರ ಹಂಚಿಕೆ ಸೂತ್ರ ರಚನೆಯಾಗಿದೆ. ಅಂದು ತಾವು ಸಿದ್ಧಪಡಿಸಿಕೊಟ್ಟ ಸೂತ್ರವನ್ನು ಈಗ ಜಾರಿಗೆ ತರಬೇಕು ಎಂದು ಮನವಿ ಮಾಡಿರುವುದಾಗಿ ತಿಳಿದುಬಂದಿದೆ.

ಡಿಕೆ ಶಿವಕುಮಾರ್ ಅವರು ದೆಹಲಿಯಲ್ಲಿ ಹೈಕಮಾಂಡ್ ನ ಕೆಲವು ನಾಯಕರನ್ನು ಭೇಟಿ ಮಾಡಿ ಅಧಿಕಾರ ಹಂಚಿಕೆ ಕುರಿತಂತೆ ಮಾತುಕತೆ ನಡೆಸಿದ ವೇಳೆ ಅವರೆಲ್ಲರೂ ಈ ವಿಚಾರವಾಗಿ ಮಲ್ಲಿಕಾರ್ಜುನ ಖರ್ಗೆ ಅವರು ತೀರ್ಮಾನ ತೆಗೆದುಕೊಳ್ಳಬೇಕು. ಸರ್ಕಾರ ರಚನೆ ಸಮಯದಲ್ಲಿ ಅವರ ನೇತೃತ್ವದಲ್ಲಿ ರಾಜೀ ಸೂತ್ರ ಸಿದ್ಧವಾಗಿತ್ತು. ಹೀಗಾಗಿಯೇ ಅವರು ಕೈಗೊಳ್ಳುವ ತೀರ್ಮಾನ ಅಂತಿಮವಾಗಲಿದೆ. ತಾವು ಅವರ ಜೊತೆಯೇ ಮಾತುಕತೆ ನಡೆಸಿ ಎಂದು ಸಲಹೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಡಿ.ಕೆ. ಶಿವಕುಮಾರ್ ತಮ್ಮ ಸೋದರ ಡಿ.ಕೆ. ಸುರೇಶ್ ಅವರೊಂದಿಗೆ ಖರ್ಗೆ ಅವರನ್ನು ಭೇಟಿ ಮಾಡಿ ಸುದೀರ್ಘ ಚರ್ಚೆ ನಡೆಸಿದರು.

ಈ ವೇಳೆ ಅಂದು ತಮ್ಮ ಸಲಹೆಯ ಮೇರೆಗೆ ಅಧಿಕಾರ ಹಂಚಿಕೆ ಸೂತ್ರ ರಚನೆಯಾಗಿದೆ ಈಗ ಸರ್ಕಾರ ಮೂರು ವರ್ಷ ಪೂರ್ಣಗೊಳಿಸುತ್ತಿದೆ. ಅದನ್ನು ಜಾರಿಗೆ ತರಬೇಕು. ಸರ್ಕಾರ ಎರಡೂವರೆ ವರ್ಷ ಅವಧಿ ಪೂರ್ಣಗೊಳಿಸಿದ ಬಳಿಕ ಅಧಿಕಾರ ಹಂಚಿಕೆ ಸೂತ್ರ ಜಾರಿಗೆ ಬರಲಿದೆ ಎಂದು ಹೇಳಲಾಗಿತ್ತು. ಆದರೆ, ವಿಧಾನಮಂಡಲದ ವಿಶೇಷ ಅಧಿವೇಶನ ಸೇರಿದಂತೆ ಹಲವಾರು ಕಾರಣಗಳಿಂದ ಅದು ಸಾಧ್ಯವಾಗಿಲ್ಲ ಇದೀಗ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಪೂರ್ಣಗೊಂಡಿದೆ. ಹೀಗಾಗಿ ಅಧಿಕಾರ ಹಂಚಿಕೆ ಸೂತ್ರ ಈಗ ಜಾರಿಗೆ ತರಬೇಕು ಎಂದು ಮನವಿ ಮಾಡಿರುವುದಾಗಿ ತಿಳಿದು ಬಂದಿದೆ.

ಈ ವೇಳೆ ಖರ್ಗೆ ಅವರು ತಾವು ಈ ವಿಚಾರವನ್ನು ಲೋಕಸಭೆ ಪ್ರತಿ ಪಕ್ಷ ನಾಯಕ ರಾಹುಲ್ ಗಾಂಧಿ ಅವರ ಜೊತೆ ಚರ್ಚೆ ನಡೆಸುತ್ತೇನೆ. ಸದ್ಯ ಅವರು ಪ್ರವಾಸದಲ್ಲಿದ್ದಾರೆ. ಮೇ ಐದರಂದು ದೆಹಲಿಗೆ ಬರುತ್ತಿದ್ದಾರೆ. ಅಂದು ವಿಧಾನ ಸಭೆ ಚುನಾವಣೆ ಫಲಿತಾಂಶ ಕೂಡ ಬರಲಿದೆ. ಈ ವೇಳೆ ಚರ್ಚೆ ನಡೆಸಿ ತಿಳಿಸುವುದಾಗಿ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ವರಿಷ್ಠರ ಮೇಲೆ ಒತ್ತಡ ಹಾಕಲು ಬಣಗಳು ಸಿದ್ಧಗೊಂಡಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 5 ಅಥವಾ 6 ರಂದು ದೆಹಲಿಗೆ ತೆರಳುತ್ತಿದ್ದು ಸಂಪುಟ ಪುನಾರಚನೆ ಕುರಿತಂತೆ ಚರ್ಚೆ ನಡೆಸಲಿದ್ದಾರೆ.

ಸದ್ಯದಲ್ಲೇ ದೆಹಲಿಗೆ: ಇದಕ್ಕೂ ಮುನ್ನ ಮೂರಕ್ಕೂ ಹೆಚ್ಚು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸುಮಾರು 30 ಮಂದಿ ದೆಹಲಿಗೆ ತೆರಳುತ್ತಿದ್ದಾರೆ. ಈ ಕುರಿತಂತೆ ಸುದ್ದಿಗಾರರಿಗೆ ಮಾಹಿತಿ ನೀಡಿರುವ ಶಾಸಕ ಹಾಗೂ ರಾಜ್ಯ ಸರ್ಕಾರದ ಮುಖ್ಯ ಸಚೇತಕ ಪಿಎಂ ಅಶೋಕ್ ಪಟ್ಟಣ್, ಈಗಾಗಲೇ ತಾವು ದೆಹಲಿಗೆ ತೆರಳಿ ಸಂಪುಟ ಪುನಾರಚನೆಗೆ ಮನವಿ ಮಾಡಿದ್ದೇವೆ. ಈಗ ಮತ್ತೊಮ್ಮೆ ದೆಹಲಿಗೆ ತೆರಳುತ್ತಿದ್ದೇವೆ ಎಂದು ಹೇಳಿದರು.

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಸಂಪುಟ ಪುನರ್ ರಚನೆಗೆ ಅನುಮತಿ ನೀಡುವಂತೆ ಮನವಿ ಮಾಡುತ್ತೇವೆ. ನಮ್ಮಲ್ಲಿ ಅನೇಕ ಮಂದಿ ಮಂತ್ರಿಗಳಾಗುವ ಅರ್ಹತೆಯಿದ್ದು ಇಲ್ಲಿಯವರೆಗೆ ಅಧಿಕಾರ ಸಿಗದ ಶಾಸಕರಿಗೆ ಮಂತ್ರಿ ಸ್ಥಾನ ನೀಡಬೇಕು ಎಂದು ಮನವಿ ಮಾಡುತ್ತೇವೆ. ಈ ವಿಚಾರದಲ್ಲಿ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ಧ ಎಂದರು.

ನಾಯಕತ್ವ ಬದಲಾವಣೆ ವಿಚಾರದಲ್ಲಿ ನಾವು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಈ ಬಗ್ಗೆ ಮಾತನಾಡುತ್ತಾರೆ. ಹೈಕಮಾಂಡ್ ಈ ಕುರಿತು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವೆಲ್ಲರೂ ಸಮ್ಮತಿಸುತ್ತೇವೆ ಎಂದರು.

ಸಿಹಿ ಸುದ್ದಿ ಬರಬಹುದು!

ಸ್ಥಾನ ಸಿಗಬೇಕು ಎಂಬುದು ನಮ್ಮ ಆಸೆ. ಈ ವಿಚಾರದಲ್ಲಿ ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ. ವರಿಷ್ಠರು ಸೂಕ್ತ ಸಂದರ್ಭದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುವ ವಿಶ್ವಾಸವಿದೆ. ಎಲ್ಲದಕ್ಕೂ ಕಾಲ ಬರಬೇಕು ಎಂದರು.

ಕರ್ಮಣ್ಯೇ ವಾದಿಕಾರಸ್ತೇ... ಎಂಬ ಭಗವದ್ಗೀತೆಯ ಸಾಲುಗಳನ್ನು ಉಲ್ಲೇಖಿಸಿದ ಅವರು ತಾವು ಮತ್ತು ತಮ್ಮ ನಾಯಕ ಡಿ.ಕೆ. ಶಿವಕುಮಾರ್ ಈ ತತ್ವದಲ್ಲಿ ನಂಬಿಕೆ ಇಟ್ಟಿದ್ದೇವೆ. ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ ಅಂತಿಮವಾಗಿ ಹೈಕಮಾಂಡ್ ತನ್ನ ತೀರ್ಮಾನ ಪ್ರಕಟಿಸಲಿದೆ ಎಂದು ಹೇಳಿದರು

ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆಯ ಒಪ್ಪಂದ ಆಗಿದೆ ಎಂಬ ವಿಚಾರ ಎಲ್ಲರ ತಲೆಯಲ್ಲೂ ಇದೆ. ಅದರ ಸ್ವರೂಪ ಏನೆಂಬುದು ಹೈಕಮಾಂಡ್ ಸ್ಪಷ್ಟಪಡಿಸಬೇಕು. ಹಾಗೂ ಗೊಂದಲಗಳನ್ನು ಪರಿಹರಿಸಬೇಕು ಎಂಬುದು ಬಹುತೇಕ ಶಾಸಕರ ಅನಿಸಿಕೆಯಾಗಿದೆ ಎಂದು ಹೇಳಿದರು.

40-50 ಶಾಸಕರ ಟಿಕೆಟ್ ಬುಕ್ಕಿಂಗ್

ಒಳಮೀಸಲಾತಿ ವಿಚಾರವನ್ನು ನಾನು ರಾಜಕೀಯವಾಗಿ ಬಳಕೆ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಈಗಾಗಲೇ ರಾಜ್ಯ ಸರ್ಕಾರವು ವಿಂಗಡಣೆ ಮಾಡಿದ್ದು, ಸಮುದಾಯಕ್ಕೆ ತೃಪ್ತಿಯಾದರೆ ಮುಗಿಯಿತು. ರಾಜಕೀಯವಾಗಿ ನಾನೇಕೆ ಎತ್ತಿಕಟ್ಟಿ ಸಂಘರ್ಷಕ್ಕೆಡೆ ಮಾಡಿಕೊಡಲಿ ಎಂದು ಪ್ರಶ್ನಿಸಿದರು. ಮೇಕೆದಾಟು ವಿಚಾರದಲ್ಲಿ ಕಾಂಗ್ರೆಸ್‌ನ ಮಿತ್ರ ಪಕ್ಷವಾದ ಡಿಎಂಕೆ ತಕರಾರು ಅರ್ಜಿ ಸಲ್ಲಿಸಿದೆ. ಸುಪ್ರೀಂ ಕೋರ್ಟ್ ತಮ್ಮ ಪರವಾಗಿ ತೀರ್ಪು ನೀಡಿದ್ದು, ಕೇಂದ್ರ ಸರ್ಕಾರ ಅನುಮತಿ ಕೊಡಿಸಬೇಕೆಂದು ರಾಜ್ಯ ಕಾಂಗ್ರೆಸ್ ಸರ್ಕಾರ ಹೇಳುತ್ತಿದೆ. ಶೀಘ್ರದಲ್ಲೇ ಡಿಪಿಆರ್ ಸಲ್ಲಿಸುವುದಾಗಿಯೂ ಸಚಿವರು ಹೇಳಿದ್ದಾರೆ. ಈಚೆಗೆ ತಮಿಳುನಾಡಿನಲ್ಲಿ ಪ್ರಚಾರ ಕೂಡ ನಡೆಸಿ ಬಂದಿದ್ದಾರೆ. ಡಿಎಂಕೆ ಜೊತೆ ಕುಳಿತು ಈ ಸಮಸ್ಯೆ ಬಗೆಹರಿಸಿಕೊಳ್ಳಬಹುದಲ್ಲವೇ? ನ್ಯಾಯಾಲಯಕ್ಕೆ ಹೋಗಬೇಡಿ ಎಂದು ಕೇಳಿಕೊಳ್ಳಬಹುದಲ್ಲವೇ ಎಂದರು.

ಮಹಿಳೆಯರು ಎಲ್ಲೂ ಸುರಕ್ಷಿತವಾಗಿಲ್ಲ

ಅಸಂಬದ್ಧ, ಇಂಥಾದ್ದನ್ನೆಲ್ಲಾ ಮಾಡುವ ಇವರು ಯಾವ ರೀತಿಯ ಗಂಡಸರು! ಮಹಿಳೆಯರನ್ನು ಎಲ್ಲೂ ಸುರಕ್ಷಿತವಾಗಿರಲು ಬಿಡುತ್ತಿಲ್ಲವಲ್ಲಾ ಎಂದು ಆತಂಕ ಹೊರಹಾಕಿದರು. ಇಂತಹ ಕೃತ್ಯ ಮಾಡಿ ಅದನ್ನು ಇನ್‌ಸ್ಟಾಗ್ರಾಂನಲ್ಲಿ ಮೆಟ್ರೊ ಚಿಕ್ಸ್ ಎಂಬ ಹೆಸರಿನಲ್ಲಿ ಬಿತ್ತರಿಸಿರುವುದು ಏನನ್ನು ಬಿಂಬಿಸುತ್ತದೆ ಗೊತ್ತಾ? ನಿಮ್ಮ ಅರ್ಜಿದಾರ ಮಾಡಿರುವ ಘನಂದಾರಿ ಕೆಲಸವನ್ನು ಅಪರಾಧ ಅಲ್ಲ ಎಂದು ಹೇಗೆ ಹೇಳುತ್ತೀರಿ? ಈ ಅರ್ಜಿಯಲ್ಲಿ ನಾನು ಯಾವುದೇ ತಾಂತ್ರಿಕ ಅಂಶಗಳ ಆಧಾರದಲ್ಲಿ ಆರೋಪಿ ಪಾರಾಗಲು ಬಿಡುವುದಿಲ್ಲ' ಎಂದು ಎಚ್ಚರಿಸಿ ಅರ್ಜಿ ವಜಾ ಮಾಡಿದರು. ಅರ್ಜಿದಾರರ ವಿರುದ್ಧ, ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್ ಎಸ್) ಕಲಂ 78(2) (ಹಿಂಬಾಲಿಸುವುದು), 238(ಸಿ) (ಅಪರಾಧದ ಪುರಾವೆಯನ್ನು ಕಣ್ಮರೆ ಮಾಡುವುದು) ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ–2000 ಕಲಂ 67 (ಎಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ ವಿಷಯವನ್ನು ಪ್ರಕಟಿಸುವುದು ಅಥವಾ ರವಾನಿಸುವುದು) ಅಡಿಯಲ್ಲಿ ಬನಶಂಕರಿ ಪೊಲೀಸ್ ಠಾಣೆ ಪೊಲೀಸರು ಸ್ವಯಂಪ್ರೇರಿತ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶೂನ್ಯ ಸುಂಕ, ಉದ್ಯೋಗಾವಕಾಶ, ಕೃಷಿ ರಕ್ಷಣೆ: ನ್ಯೂಜಿಲೆಂಡ್ ಜೊತೆ ಮುಕ್ತ ವ್ಯಾಪಾರ ಒಪ್ಪಂದ

ನವದೆಹಲಿ: ಭಾರತ ಮತ್ತು ನ್ಯೂಜಿಲೆಂಡ್ ನಡುವೆ ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದಕ್ಕೆ ನವದೆಹಲಿಯ ಭಾರತ್ ಮಂಟಪದಲ್ಲಿ ಸಹಿ ಹಾಕಲಾಗಿದ್ದು, ಈ ಒಪ್ಪಂದವು ಭಾರತದ ರಫ್ತು ವಲಯ ಮತ್ತು ಸಣ್ಣ ಉದ್ದಿಮೆಗಳಿಗೆ (ಎಂಎಸ್‌ಎಂಇ) ದೊಡ್ಡ ಮಟ್ಟದ ಉತ್ತೇಜನ ನೀಡಲಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮತ್ತು ನ್ಯೂಜಿಲೆಂಡ್‌ನ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮೆಕ್‌ಕ್ಲೇ ಅವರ ಸಮ್ಮುಖದಲ್ಲಿ ಈ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಈ ಒಪ್ಪಂದವು ಅಕ್ಟೋಬರ್ 2026 ರಿಂದ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಲಿದೆ. ಈ ಒಪ್ಪಂದದ ಮೂಲಕ ಭಾರತಕ್ಕೇನು ಲಾಭ? ರಫ್ತು ಮತ್ತು ಸಣ್ಣ ಉದ್ದಿಮೆಗಳ ಮೇಲಾಗುವ ಪ್ರಮುಖ ಪರಿಣಾಮಗಳ ಕುರಿತು ಸಣ್ಣ ಮಾಹಿತಿ ಇಲ್ಲಿದೆ.

ಒಪ್ಪಂದದ ಪ್ರಮುಖ ಅಂಶಗಳು

ವ್ಯಾಪಾರ ವೃದ್ಧಿ: ಮುಂದಿನ ಐದು ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು $5 ಬಿಲಿಯನ್‌ಗೆ (ಸುಮಾರು 41,000 ಕೋಟಿ) ದುಪ್ಪಟ್ಟುಗೊಳಿಸುವ ಗುರಿ ಹೊಂದಲಾಗಿದೆ.

ಹೂಡಿಕೆ: ನ್ಯೂಜಿಲೆಂಡ್ ಮುಂದಿನ 15 ವರ್ಷಗಳಲ್ಲಿ ಭಾರತದ ಮೂಲ ಸೌಕರ್ಯ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ $20 ಬಿಲಿಯನ್ ಹೂಡಿಕೆ ಮಾಡಲು ಒಪ್ಪಿಕೊಂಡಿದೆ.

ಉದ್ಯೋಗಾವಕಾಶ: ಪ್ರತಿ ವರ್ಷ ಸುಮಾರು 5,000 ಭಾರತೀಯ ವೃತ್ತಿಪರರಿಗೆ (ಐಟಿ, ಆರೋಗ್ಯ, ಇಂಜಿನಿಯರಿಂಗ್) ನ್ಯೂಜಿಲೆಂಡ್‌ನಲ್ಲಿ ಕೆಲಸ ಮಾಡಲು ವಿಶೇಷ ವೀಸಾ ಸೌಲಭ್ಯ ಸಿಗಲಿದೆ.

ಕೃಷಿ ರಕ್ಷಣೆ: ಭಾರತದ ರೈತರ ಹಿತದೃಷ್ಟಿಯಿಂದ ಹೈನುಗಾರಿಕೆ (ಹಾಲು, ಬೆಣ್ಣೆ, ಚೀಸ್), ಈರುಳ್ಳಿ ಮತ್ತು ಸಕ್ಕರೆ ಕ್ಷೇತ್ರಗಳನ್ನು ಈ ಒಪ್ಪಂದದಿಂದ ಹೊರಗಿಡಲಾಗಿದೆ.

ಶೂನ್ಯ ಸುಂಕದ ಪ್ರವೇಶ: ಭಾರತದ ರಫ್ತುದಾರರು ಈಗ ನ್ಯೂಜಿಲೆಂಡ್ ಮಾರುಕಟ್ಟೆಗೆ 8,284 ವಸ್ತುಗಳನ್ನು ಯಾವುದೇ ಆಮದು ಸುಂಕವಿಲ್ಲದೆ ಕಳುಹಿಸಬಹುದು. ಈ ಹಿಂದೆ ಜವಳಿ, ಚರ್ಮದ ವಸ್ತುಗಳು ಮತ್ತು ಎಂಜಿನಿಯರಿಂಗ್ ಸರಕುಗಳ ಮೇಲೆ ಶೇ. 10ರವರೆಗೆ ಸುಂಕವಿತ್ತು.

ಎಂಎಸ್‌ಎಂಇ ವಲಯಕ್ಕೆ ಲಾಭ: ಬಟ್ಟೆ, ಚರ್ಮದ ಪಾದರಕ್ಷೆಗಳು, ಎಂಜಿನಿಯರಿಂಗ್ ಉಪಕರಣಗಳು ಮತ್ತು ಔಷಧೀಯ ಕ್ಷೇತ್ರಗಳಲ್ಲಿ ತೊಡಗಿರುವ ಸಣ್ಣ ಕೈಗಾರಿಕೆಗಳಿಗೆ ಇದು ಹೊಸ ಮಾರುಕಟ್ಟೆಯನ್ನು ತೆರೆಯಲಿದೆ.

ಉತ್ಪಾದನಾ ವೆಚ್ಚ ಇಳಿಕೆ: ಉತ್ಪಾದನೆಗೆ ಬೇಕಾದ ಕಚ್ಚಾ ವಸ್ತುಗಳಾದ ಮರದ ದಿಮ್ಮಿಗಳು ಮತ್ತು ಲೋಹದ ಸ್ಕ್ರ್ಯಾಪ್‌ಗಳನ್ನು ಸುಂಕವಿಲ್ಲದೆ ಆಮದು ಮಾಡಿಕೊಳ್ಳಲು ಅವಕಾಶ ಸಿಕ್ಕಿರುವುದರಿಂದ ಭಾರತೀಯ ಕಂಪನಿಗಳ ಉತ್ಪಾದನಾ ವೆಚ್ಚ ಕಡಿಮೆಯಾಗಲಿದೆ.

ಕೃಷಿ ಮತ್ತು ಆಹಾರ ಸಂಸ್ಕರಣಾ ವಲಯ: ಭಾರತವು ತನ್ನ ರೈತರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿದೆ. ಭಾರತವು ನ್ಯೂಜಿಲೆಂಡ್‌ನ ಪ್ರಮುಖ ರಫ್ತು ಉತ್ಪನ್ನಗಳಾದ ಹಾಲು, ಬೆಣ್ಣೆ ಮತ್ತು ಚೀಸ್ ಅನ್ನು ಈ ಒಪ್ಪಂದದಿಂದ ಹೊರಗಿಟ್ಟಿದೆ. ಇದರಿಂದ ಭಾರತೀಯ ಹೈನುಗಾರಿಕೆ ರೈತರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಭಾರತದ ಕೃಷಿ ಉತ್ಪನ್ನಗಳಾದ ಬಾಸ್ಮತಿ ಅಕ್ಕಿ, ಸಂಸ್ಕರಿಸಿದ ಆಹಾರಗಳು, ಹಣ್ಣುಗಳು ಮತ್ತು ತರಕಾರಿಗಳಿಗೆ ನ್ಯೂಜಿಲೆಂಡ್‌ನಲ್ಲಿ ಉತ್ತಮ ಮಾರುಕಟ್ಟೆ ಸಿಗಲಿದೆ. ನ್ಯೂಜಿಲೆಂಡ್ ಕೃಷಿ ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದ್ದು, ಭಾರತದ ಕೋಲ್ಡ್ ಸ್ಟೋರೇಜ್ ಮತ್ತು ಆಹಾರ ಸಂಸ್ಕರಣಾ ತಂತ್ರಜ್ಞಾನವನ್ನು ಸುಧಾರಿಸಲು ಈ ಒಪ್ಪಂದ ಸಹಕಾರಿಯಾಗಲಿದೆ.

ಉದ್ಯೋಗ ಮತ್ತು ವೃತ್ತಿಪರರ ಸಂಚಾರ: ಯುವಜನತೆಗೆ ಮತ್ತು ವೃತ್ತಿಪರರಿಗೆ ಇದು ದೊಡ್ಡ ಅವಕಾಶಗಳನ್ನು ಸೃಷ್ಟಿಸಿದೆ. ಪ್ರತಿ ವರ್ಷ 5,000 ಭಾರತೀಯ ವೃತ್ತಿಪರರಿಗೆ (ಉದಾಹರಣೆಗೆ: ಸಾಫ್ಟ್‌ವೇರ್ ಎಂಜಿನಿಯರ್‌ಗಳು, ವೈದ್ಯರು, ನರ್ಸ್‌ಗಳು ಮತ್ತು ಅಕೌಂಟೆಂಟ್‌ಗಳು) ನ್ಯೂಜಿಲೆಂಡ್‌ನಲ್ಲಿ ಕೆಲಸ ಮಾಡಲು ಆದ್ಯತೆ ನೀಡಲಾಗುತ್ತದೆ. ಐಟಿ ಮತ್ತು ವ್ಯಾಪಾರ ಪ್ರಕ್ರಿಯೆಗಳ ಹೊರಗುತ್ತಿಗೆ ವಲಯದಲ್ಲಿ ಸಾವಿರಾರು ಹೊಸ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಉನ್ನತ ವ್ಯಾಸಂಗಕ್ಕಾಗಿ ನ್ಯೂಜಿಲೆಂಡ್‌ಗೆ ಹೋಗುವ ಭಾರತೀಯ ವಿದ್ಯಾರ್ಥಿಗಳಿಗೆ ಓದಿನ ನಂತರ ಅಲ್ಲಿ ಕೆಲಸ ಮಾಡಲು ಹೆಚ್ಚಿನ ಸರಳೀಕೃತ ನಿಯಮಗಳನ್ನು ಜಾರಿಗೆ ತರಲಾಗಿದೆ.

ಆಯುಷ್ ಮತ್ತು ಸಾಂಪ್ರದಾಯಿಕ ವೈದ್ಯಕೀಯ: ಮೊದಲ ಬಾರಿಗೆ, ನ್ಯೂಜಿಲೆಂಡ್ ಭಾರತದ ಆಯುರ್ವೇದ, ಯೋಗ ಮತ್ತು ಸಿದ್ಧ ಚಿಕಿತ್ಸಾ ಪದ್ಧತಿಗಳನ್ನು ಅಧಿಕೃತವಾಗಿ ಗುರುತಿಸಿದೆ. ಇದರಿಂದ ಭಾರತೀಯ ಆಯುರ್ವೇದ ವೈದ್ಯರಿಗೆ ಮತ್ತು ಯೋಗ ತರಬೇತುದಾರರಿಗೆ ನ್ಯೂಜಿಲೆಂಡ್‌ನಲ್ಲಿ ಹೊಸ ಉದ್ಯೋಗಾವಕಾಶಗಳು ಸಿಗಲಿವೆ.

ದೇಶದ ಮುಂದಿನ ರಾಷ್ಟ್ರಪತಿ?

ಆಸಕ್ತಿ ವಹಿಸಿದೆ. 2027 ರ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯನ್ನು ಯೋಗಿ ಆದಿತ್ಯನಾಥ್ ನೇತೃತ್ವದಲ್ಲಿ ಎದುರಿಸಲಾಗುವುದು ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಘೋಷಿಸಿದ್ದರಿಂದ ಬ್ರಾಹ್ಮಣ ನಾಯಕರು ಅಸಮಾಧಾನಗೊಂಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಪಂಕಜ್ ಚೌಧರಿ ಈಗಾಗಲೇ ತಮ್ಮ ರಾಜೀನಾಮೆಯನ್ನು ಕಳುಹಿಸಿದ್ದು, ಅದು ಜೂನ್ ಒಳಗೆ ಅಂಗೀಕಾರವಾಗುವ ಸಾಧ್ಯತೆಯಿದೆ. ಈಗ ರಾಜನಾಥ್ ಸಿಂಗ್ ಅವರನ್ನು ರಾಷ್ಟ್ರಪತಿಯನ್ನಾಗಿ ನೇಮಕ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಚೆಲುವಾಂಬದಲ್ಲಿ ಇರುವೆ ಕಚ್ಚಿ ಹಸುಳೆ ಸಾವು ಪ್ರಕರಣ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಎಐಎಂಎಸ್‌ಎಸ್ ಡಿಸಿಗೆ ಮನವಿ



ಎಐಎಂಎಸ್‌ಎಸ್ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಏ.27(ಎಂಕೆ)– ಮೈಸೂರಿನ ಚೆಲುವಾಂಬ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶಿಶುವೊಂದು ಇರುವೆ ಕಚ್ಚಿ ಮೃತಪಟ್ಟಿದೆ ಎನ್ನಲಾದ ಪ್ರಕರಣದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ವತಿಯಿಂದ ಜಿಲ್ಲಾಧಿಕಾರಿಗಳಿಗೆ ಸೋಮವಾರ ಮನವಿ ಸಲ್ಲಿಸಲಾಯಿತು.

ಚೆಲುವಾಂಬ ಆಸ್ಪತ್ರೆಯಲ್ಲಿ ಶಿಶುಗಳ ಮರಣ ಪ್ರಮಾಣ ಹೆಚ್ಚಾಗುತ್ತಿದೆ. ಅದರಂತೆ ಏ.23ರಂದು ಇರುವೆ ಕಚ್ಚಿ ಶಿಶು ಮೃತಪಟ್ಟಿದೆ ಎನ್ನಲಾಗುತ್ತಿದ್ದು, ಸತ್ಯಾಂಶವನ್ನು ಮುಚ್ಚಿಡಲಾಗುತ್ತಿದೆ. ಮಗು ಕಳೆದುಕೊಂಡ ದಂಪತಿ ದಿನಗೂಲಿ ಕೆಲಸ ಮಾಡಲಿದ್ದು, ಆರ್ಥಿಕವಾಗಿ ತೀವ್ರ ಸಂಕಷ್ಟದಲ್ಲಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತೆ ಎಂದು ನಂಬಿ ಬಂದಿದ್ದಕ್ಕೆ ಮಗುವನ್ನು ಕಳೆದುಕೊಂಡು ನೋವು ಅನುಭವಿಸುತ್ತಿದ್ದಾರೆ.

ಆದ್ದರಿಂದ ಶಿಶು ಸಾವಿನ ತನಿಖೆಯನ್ನು ತ್ವರಿತವಾಗಿ ನಡೆಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ನೊಂದ ಕುಟುಂಬಕ್ಕೆ ಸೂಕ್ತ ಪರಿಹಾರವನ್ನು ನೀಡಬೇಕೆಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ್ ರೆಡ್ಡಿ ಅವರಿಗೆ ಮನವಿ ಮಾಡಲಾಯಿತು. ಈ ವೇಳೆ ಎಐಎಂಎಸ್‌ಎಸ್‌ನ ಜಿಲ್ಲಾಧ್ಯಕ್ಷೆ ನಳಿನ, ಉಪಾಧ್ಯಕ್ಷರಾದ ಜಿ.ಸೀಮಾ, ಆಸಿಯಾ ಬೇಗಂ, ಪುಷ್ಪ, ಪದ್ಮ ಇದ್ದರು.

ಮನಸ್ವಿನಿಗೆ ಸನ್ಮಾನ...



ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 624/625 ಅಂಕ ಪಡೆದು ರಾಜ್ಯಕ್ಕೆ 2ನೇ, ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ ಮೈಸೂರಿನ ವಿಜಯ ವಿಠಲ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿ ಮನಸ್ವಿನಿ ಅವರನ್ನು ಮಾಜಿ ಕಾರ್ಪೊರೇಟರ್, ಮೈಸೂರು ನಗರ ಜೆಡಿಎಸ್ ಅಧ್ಯಕ್ಷ ಎಸ್‌ಬಿಎಂ ಮಂಜು ಸನ್ಮಾನಿಸಿದರು. ಈ ವೇಳೆ ಮನಸ್ವಿನಿ ತಾತ ಪ್ರೊ.ಆರ್.ಎಸ್.ನಾಗರಾಜ್, ಅಜ್ಜಿ ಬೃಂದಾ ನಾಗರಾಜ್, ತಂದೆ ಪ್ರದೀಪ್ ನಾಗರಾಜ್, ತಾಯಿ ರಾಧಾ, ಬೃಂದಾವನ ಬಡಾವಣೆಯ ಆರ್.ವಿ.ಕುಮಾರ್, ಪಿ.ಎಸ್.ನಟರಾಜು, ಸುಧಾಕರ್, ಮುರುಳಿ, ಯಧುಕುಮಾರ್, ದರ್ಶನ್ ಇನ್ನಿತರರು ಉಪಸ್ಥಿತರಿದ್ದರು.

ಭುವನ್‌ಕುಮಾರ್‌ಗೆ 602 ಅಂಕ



ಮೈಸೂರು: ಕೋಣನೂರು ಲಯನ್ಸ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿ ಎಂ.ಭುವನ್ ಕುಮಾರ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 602 (ಶೇ.97) ಅಂಕ ಗಳಿಸಿದ್ದಾನೆ. ಕನ್ನಡದಲ್ಲಿ 124, ಇಂಗ್ಲಿಷ್ 97, ಹಿಂದಿ 99, ಗಣಿತ 94, ವಿಜ್ಞಾನ 98, ಸಮಾಜ ವಿಜ್ಞಾನ 94 ಅಂಕ ಗಳಿಸಿದ್ದಾನೆ. ಅರಕಲಗೂಡು ತಾಲೂಕು ಕೋಣನೂರಿನ ಆರ್.ಮಂಜುನಾಥ್ ಮತ್ತು ಸುಮಿತ್ರ ದಂಪತಿ ಪುತ್ರ.

ಮೇಘನಾಗೆ 586 ಅಂಕ



ಮೈಸೂರು,ಏ.27(ಜಿಎ)–ಮೈಸೂರಿನ ಭಾರತೀಯ ವಿದ್ಯಾ ಭವನದ ವಿದ್ಯಾರ್ಥಿನಿ ಎಸ್.ಮೇಘನಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 586, ಶೇ.93.76 ಅಂಕ ಪಡೆಯುವ ಮೂಲಕ ಸಾಧನೆ ಮಾಡಿದ್ದಾರೆ.

ಈಕೆ ಸಂಸ್ಕೃತದಲ್ಲಿ 125, ಇಂಗ್ಲಿಷ್–95, ಕನ್ನಡ–98, ಗಣಿತ–82, ವಿಜ್ಞಾನ–91 ಹಾಗೂ ಸಮಾಜ ವಿಜ್ಞಾನ–95 ಅಂಕ ಗಳಿಸಿದ್ದು, ಶಾಲೆಯ ಅತ್ಯುನ್ನತ ಅಂಕ ಗಳಿಸಿದ ವಿದ್ಯಾರ್ಥಿಗಳಲ್ಲಿ ಓರ್ವರೆನಿಸಿದ್ದಾರೆ. ಎಸ್.ಶಿವಕುಮಾರ್ ಹಾಗೂ ಬಿ.ಮಮತಾ ಪುತ್ರಿಯಾಗಿದ್ದು, ಈಕೆಯ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಬೋಧಕ, ಬೋಧಕೇತರ ವರ್ಗ ಅಭಿನಂದಿಸಿದ್ದಾರೆ.

ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಏ.27–ಮೈಸೂರು ತಾಲ್ಲೂಕು ಜಯಪುರ ಗ್ರಾಮ ಮತ್ತು ಹೋಬಳಿಯ ಎಸ್.ಕಲ್ಲಹಳ್ಳಿಯಲ್ಲಿನ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ 2026–27ನೇ ಸಾಲಿನ ಹಾಸ್ಟೆಲ್ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. 5ರಿಂದ 10ನೇ ತರಗತಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾತಿ ಲಭ್ಯವಿದೆ. ಎರಡು ಪಾಸ್ ಪೋರ್ಟ್ ಸೈಜ್ ಭಾವಚಿತ್ರ, ಆಧಾರ್ ಕಾರ್ಡ್, ತಂದೆ–ತಾಯಿಯ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಬ್ಯಾಂಕ್ ಪಾಸ್ ಪುಸ್ತಕ, ಬಿಪಿಎಲ್ ಕಾರ್ಡ್, ಹಿಂದಿನ ತರಗತಿ ಅಂಕಪಟ್ಟಿಯನ್ನು ಅರ್ಜಿ ನಮೂನೆ ಜೊತೆ ಲಗತ್ತಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಯಪುರ ಹಾಸ್ಟೆಲ್ ವಾರ್ಡನ್ ಕೆ.ಎಲ್.ಶಿವಪ್ಪ ಮೊ.ಸಂಖ್ಯೆ 9880820787, ಸಣ್ಣಪ್ಪ 9901171881, ಹಾಗೂ ಎಸ್.ಕಲ್ಲಹಳ್ಳಿ ಹಾಸ್ಟೆಲ್ ವಾರ್ಡನ್ ಮಹೇಶ್ ಮೊ.ಸಂಖ್ಯೆ 9535340175, ಅಮೀರ್ 9353 839185 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಅಪರಿಚಿತ ವ್ಯಕ್ತಿ ಮೃತದೇಹ ಪತ್ತೆ

ಮೈಸೂರು,ಏ.27(ಎಂಕೆ)–ಮೈಸೂರಿನ ಹಳೆ ಕೆಸರೆ ಸಮೀಪದ ವರುಣಾ ಮೇಲ್ಗಾಲುವೆ ಕೆಳಗೆ ಅಪರಿಚಿತ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾಗಿದೆ. ಸುಮಾರು 40–45 ವರ್ಷ ವಯೋಮಾನದ ವ್ಯಕ್ತಿಯಾಗಿದ್ದು, ಚಾಪೆ ಮೇಲೆ ಬೆಡ್‌ಶೀಟ್ ಹೊದ್ದುಕೊಂಡು ಮಲಗಿದ್ದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ನರಸಿಂಹರಾಜ ಠಾಣೆ ಪೊಲೀಸರು, ಸ್ಥಳ ಮಹಜರು ನಡೆಸಿ, ಮೃತದೇಹವನ್ನು ಕೆ.ಆರ್.ಆಸ್ಪತ್ರೆಗೆ ರವಾನಿಸಿದ್ದಾರೆ. ಮೃತರ ವಾರಸುದಾರರಿದ್ದಲ್ಲಿ ಪೊಲೀಸ್ ಕಂಟ್ರೋಲ್ ರೂಂ.–0821–2418339 ಸಂಪರ್ಕಿಸಿ.

ಮನಬಂದಂತೆ ಯೂರಿಯಾ ಬಳಕೆಗೆ ನಿರ್ಬಂಧ

ಇನ್ಮುಂದೆ ಫ್ರೂಟ್ಸ್ ಐಡಿ ಮೂಲಕವೇ ವಿತರಣೆಗೆ ಕ್ರಮ



ಸಾಂದರ್ಭಿಕ ಚಿತ್ರ

ಮೈಸೂರು, ಏ.27(ಎಂಕೆ)– ಮಧ್ಯ ಪ್ರಾಚ್ಯ ಯುದ್ಧದಿಂದಾಗಬಹುದಾದ ಯೂರಿಯಾ ಸರಬರಾಜು ವ್ಯತ್ಯಯ ಸರಿದೂಗಿಸಲು, ವಿವೇಚನಾರಹಿತ ಯೂರಿಯಾ ಬಳಕೆ ಮತ್ತು ಅಕ್ರಮ ಮಾರಾಟಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕೃಷಿ ಇಲಾಖೆ ಹೊಸ ಮಾರ್ಗವೊಂದನ್ನು ಕಂಡುಕೊಂಡಿದೆ.

ಯೂರಿಯಾ ಉತ್ಪಾದನೆ ಮತ್ತು ಪೂರೈಕೆಯನ್ನು ಸದ್ಯಕ್ಕೆ ವ್ಯತ್ಯಯವಾಗದಿದ್ದರೂ ಮುಂಜಾಗ್ರತಾ ದೃಷ್ಟಿಯಿಂದ ಹಾಗೂ ಮಣ್ಣಿನ ಆರೋಗ್ಯ, ಬೆಳೆ ಮತ್ತು ಪರಿಸರದ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಬೀರುವ ಯೂರಿಯಾ ಯಥೇಚ್ಛ ಬಳಕೆಯನ್ನು ನಿಯಂತ್ರಿಸಲು ಈ ವರ್ಷದಿಂದ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ.

ಕೆ–ಕಿಸಾನ್(K-Kisan) ಆ್ಯಪ್ ಅಥವಾ ವೆಬ್‌ಸೈಟ್ ಮೂಲಕ ರೈತರು ತಮ್ಮ ವೈಯಕ್ತಿಕ ವಿವರ, ತಮಗಿರುವ ಭೂಮಿ(ಜಮೀನು) ಮತ್ತು ಬ್ಯಾಂಕ್ ಖಾತೆ ಮಾಹಿತಿ ನೀಡಿ 'ಫ್ರೂಟ್ಸ್ ಐಡಿ (FRUITS ID)' ಪಡೆದಿದ್ದರೆ ಮಾತ್ರವೇ ಯೂರಿಯಾ ನೀಡಲು ನಿರ್ಧರಿಸಲಾಗಿದೆ. ರೈತರಿಗೆ ನೀಡುವ ಫ್ರೂಟ್ಸ್ ಐಡಿಯಲ್ಲಿ ರೈತರ ಜಮೀನಿನ ವಿವರಗಳು ದಾಖಲಾಗಿರಲಿದ್ದು, ರೈತರ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗಿ ಯೂರಿಯಾ ವಿತರಿಸಲು ಕ್ರಮವಹಿಸಲಾಗುತ್ತಿದೆ. ಐದು ಎಕರೆ ಭೂಮಿ ಇರುವ ರೈತರು, 25 ಎಕರೆಗಾಗುವಷ್ಟು ಯೂರಿಯಾ ಕೇಳಿದರೆ ಕೊಡುವಂತಿಲ್ಲ. ಡೀಲರ್‌ಗಳು ರೈತರ 'ಫ್ರೂಟ್ಸ್ ಐಡಿ' ಪರಿಶೀಲಿಸಿಯೇ ಯೂರಿಯಾ ವಿತರಣೆ ಮಾಡಬೇಕು. ಕೃಷಿ ಉದ್ದೇಶಕ್ಕೆ ಸರ್ಕಾರದಿಂದ ಸಬ್ಸಿಡಿ ದರದಲ್ಲಿ(45 ಕೆಜಿ ಚೀಲಕ್ಕೆ 265 ರೂ.) ಯೂರಿಯಾ ಖರೀದಿಸಿ, ಕೃಷಿಯೇತರ ಚಟುವಟಿಕೆಗಾಗಿ ಕಾರ್ಖಾನೆಗಳಿಗೆ ಯೂರಿಯಾ ಮಾರಾಟ ಮಾಡುವುದಕ್ಕೆ ಕಡಿವಾಣ ಹಾಕಲು 'ಫ್ರೂಟ್ಸ್ ಐಡಿ' ಅವಲಂಬನೆಯನ್ನು ಕಡ್ಡಾಯಗೊಳಿಸಲಾಗುತ್ತಿದೆ ಎಂದು ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಕೆ.ಹೆಚ್.ರವಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರೈತರು ಯೂರಿಯಾವನ್ನು ಡೀಲರ್‌ಗಳಿಂದ 'ಫ್ರೂಟ್ಸ್ ಐಡಿ' ಮೂಲಕವೇ ಪಡೆದುಕೊಳ್ಳಬೇಕು. 'ಫ್ರೂಟ್ಸ್ ಐಡಿ'ಯು ಯೂನಿಕ್ ಐಡಿಯಾಗಿದ್ದು, ರೈತರ ಆಸ್ತಿ ವಿವರವನ್ನೊಳಗೊಂಡಿರಲಿದೆ. ಜಮೀನಿನ ವಿಸ್ತೀರ್ಣಕ್ಕೆ ಅವಶ್ಯವಿರುವಷ್ಟು ಮಾತ್ರವೇ ಯೂರಿಯಾ ನೀಡಲು ನಿರ್ಧರಿಸಲಾಗಿದೆ. ಹಾಗೆಯೇ ಕಡಿಮೆ ದುಡ್ಡಿಗೆ ದೊರೆಯುವ ಯೂರಿಯಾವನ್ನು ಯಥೇಚ್ಛವಾಗಿ ಬಳಕೆ ಮಾಡುವುದಕ್ಕೂ ಕಡಿವಾಣ ಹಾಕುವ ಚಿಂತನೆ ಇದಾಗಿದೆ ಎಂದರು.

ಎಚ್ಚರ: ಕಳೆದ ವಾರದಲ್ಲಿ ಜಿಲ್ಲೆಯ ಎರಡೂ ಪ್ರತ್ಯೇಕ ಸ್ಥಳಗಳಲ್ಲಿ ಯೂರಿಯಾ ಅಕ್ರಮ ದಾಸ್ತಾನು ಮಾಡಿಕೊಂಡು ಮಾರಾಟ ಮಾಡುತ್ತಿದ್ದವರನ್ನು ಬಂಧಿಸಿ, 1505 ಚೀಲ ಯೂರಿಯಾವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಆದ್ದರಿಂದ ಗ್ರಾಮೀಣ ಭಾಗದಲ್ಲಿ ಗೋಡೌನ್ ಮತ್ತು ತೋಟದ ಮನೆಗಳನ್ನು ಬಾಡಿಗೆಗೆ ಕೊಡುವ ಮುನ್ನ ಎಚ್ಚರವಹಿಸಬೇಕು. ಹುಣಸೂರಿನಲ್ಲಿ ವ್ಯಕ್ತಿಯೊಬ್ಬರ ಗೋಡೌನ್ ಬಾಡಿಗೆ ಪಡೆದು 1200 ಚೀಲ ಯೂರಿಯಾವನ್ನು ಅಕ್ರಮವಾಗಿ ದಾಸ್ತಾನು ಮಾಡಲಾಗಿತ್ತು. ಹಾಗೆಯೇ ಡೀಲರ್‌ಗಳು ಕೂಡ ರೈತರಿಗೆ ಅಗತ್ಯಕ್ಕಿಂತ ಹೆಚ್ಚು ಯೂರಿಯಾ ನೀಡಿದರೆ ಅವರ ಮೇಲೂ ಕ್ರಮ ವಹಿಸಲಾಗುವುದು ಎಂದು ಕೆ.ಹೆಚ್.ರವಿ ಎಚ್ಚರಿಸಿದರು.

ಮಾಹಿತಿ ನೀಡಿ: ರೈತರಿಗೆ ಅವಶ್ಯವಾದ ರಾಸಾಯನಿಕ ಗೊಬ್ಬರಗಳನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದಲ್ಲಿ, ಅಕ್ರಮವಾಗಿ ಮಾರಾಟ ಮಾಡುತ್ತಿರುವುದು ಕಂಡ ಬಂದಲ್ಲಿ ಕೂಡಲೇ ಕೃಷಿ ಇಲಾಖೆ ಅಧಿಕಾರಿ–ಸಿಬ್ಬಂದಿಗೆ ಮಾಹಿತಿ ನೀಡಿ. ಮಾಹಿತಿ ನೀಡುವವರ ವಿವರವನ್ನು ಗೌಪ್ಯವಾಗಿಡಲಾಗುವುದು. ಈ ನಿಟ್ಟಿನಲ್ಲಿ ಸಾರ್ವಜನಿಕರ ಸಹಕಾರ ಅವಶ್ಯವಾಗಿದೆ ಎಂದರು.

ಗಡಿಪಾರಿಗೆ ಶಿಫಾರಸ್ಸು...!

"ಹುಣಸೂರು ನಗರದ ಹೌಸಿಂಗ್ ಬೋರ್ಡ್‌ನ ಗೋಡೌನ್‌ವೊಂದರಲ್ಲಿ ಅಕ್ರಮವಾಗಿ ಯೂರಿಯಾ ದಾಸ್ತಾನು ಮಾಡಿದ್ದ ವ್ಯಕ್ತಿಯನ್ನು ಗಡಿಪಾರು ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಈತ ಕಳೆದ ಮೂರ್ನಾಲ್ಕು ವರ್ಷದಲ್ಲಿ ಎರಡ್ಮೂರು ಅಕ್ರಮ ದಾಸ್ತಾನು ಪ್ರಕರಣದಲ್ಲಿ ಭಾಗಿಯಾಗಿದ್ದಾನೆ. ಆದ್ದರಿಂದ ಈತನನ್ನು ಗಡಿಪಾರು ಮಾಡುವಂತೆ ಕೋರಲಾಗಿದೆ.

–ಕೆ.ಹೆಚ್.ರವಿ, ಜಂಟಿ ಕೃಷಿ ನಿರ್ದೇಶಕ

ವ್ಯಕ್ತಿ ನಾಪತ್ತೆ



ಮೈಸೂರು, ಏ.27– ಮೂರ್ತಿ ಸಿ.ಎಸ್ ಎಂಬ 40 ವರ್ಷದ ವ್ಯಕ್ತಿ ಕಾಣೆಯಾಗಿರುವುದಾಗಿ ಅವರ ಪತ್ನಿ ಚೈತ್ರ ಕೆ.ಆರ್ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಮೇರೆಗೆ ಪ್ರಕರಣ ದಾಖಲಾಗಿ ತನಿಖೆಯಲ್ಲಿದೆ. ವಯಸ್ಸು ಸುಮಾರು 40 ವರ್ಷ, 5.3 ಸೆಮೀ ಅಡಿ ಎತ್ತರ, ಕಂದು ಬಣ್ಣದ ಕೂದಲು, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು, ಕೋಲು ಮುಖ, ಎಡಗೈ ಮೇಲೆ ಯಶೋದ ಎಂದು ಹಚ್ಚೆ ಗುರುತು ಇರುತ್ತದೆ. ವ್ಯಕ್ತಿಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಕೆಆರ್ ನಗರ ಪೊಲೀಸ್ ಠಾಣೆಗೆ ಅಥವಾ ಪೊಲೀಸ್ ನಿಯಂತ್ರಣ ಕೊಠಡಿಯ ದೂ.ಸಂ: 08223–262222, 0821–2436600, ಇಮೇಲ್, ಡಿಪಿಓ: 0821–2520040, Email:, Range: 0821–2445168, Email:, Chiefs Off: 22212108,Email:ff@mail.com ಸಂಪರ್ಕಿಸಬಹುದೆಂದು ಕೆ.ಆರ್.ನಗರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಅನಿಲ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವಸ್ಥಾನಗಳು ಎಂದೆಂದಿಗೂ ನೆಮ್ಮದಿ ಕೇಂದ್ರಗಳು



ಮೈಸೂರಿನ ವಾರ್ಡ್ ನಂ.23ರ ಹಳೆ ಬಂಡಿಕೇರಿಯಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವದ ವಿಶೇಷ ಪೂಜೆಯಲ್ಲಿ ಶಾಸಕ ಹರೀಶ್‌ಗೌಡ ಪಾಲ್ಗೊಂಡು, ಆಶೀರ್ವಾದ ಪಡೆದರು.

ಮೈಸೂರು: ಮೈಸೂರಿನ ವಾರ್ಡ್ ನಂ.23ರ ಹಳೆ ಬಂಡಿಕೇರಿಯಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ನಡೆದ ಶ್ರೀನಿವಾಸ ಕಲ್ಯಾಣೋತ್ಸವದ ವಿಶೇಷ ಪೂಜೆಯಲ್ಲಿ ಶಾಸಕ ಹರೀಶ್‌ಗೌಡ ಭಾಗಿಯಾಗಿದ್ದರು.

ಬಳಿಕ ಮಾತನಾಡಿದ ಅವರು, ಸಂಸ್ಕೃತಿ ಪ್ರತೀಕವಾದ ಮಠಮಾನ್ಯಗಳು ಹಾಗೂ ಧಾರ್ಮಿಕ ಕೇಂದ್ರಗಳಾದ ದೇವಾಲಯಗಳು, ಮನುಷ್ಯನಿಗೆ ಸುಖ, ಶಾಂತಿ, ನೆಮ್ಮದಿ ಕರುಣಿಸುವ ಶ್ರದ್ಧಾ ಕೇಂದ್ರಗಳಾಗಿವೆ. ಸಂಸ್ಕೃತಿಯ ಪರಂಪರೆಯು ಶ್ರೀಮಂತ ಕೊಡುಗೆಯಾಗಿದ್ದು, ಮಠಮಾನ್ಯಗಳು ಹಾಗೂ ದೇವಾಲಯಗಳ ಧಾರ್ಮಿಕ ಶ್ರದ್ಧಾ ಕೇಂದ್ರಗಳು ಮನುಷ್ಯನನ್ನು ಸನ್ಮಾರ್ಗದಲ್ಲಿ ನಡೆಯಲು ಮಾರ್ಗದರ್ಶನ ನೀಡುವ ಮೂಲಕ ಆತನ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ ಕರುಣಿಸುವ ಕ್ಷೇತ್ರಗಳಾಗಿವೆ ಎಂದರು.



ಬೇಸಿಗೆ ಶಿಬಿರ

ಮೈಸೂರಿನ ಕುವೆಂಪು ಪ್ರೌಢ ಶಾಲೆಯಲ್ಲಿ 'ಹಾಡು ಆಟ ಆಡು' ಬೇಸಿಗೆ ಶಿಬಿರವನ್ನು ಕಲಾವಿದ ಹಾಗೂ ಸಂಪನ್ಮೂಲ ಶಿಕ್ಷಕಿ ಸವಿತಾ ಉದ್ಘಾಟಿಸಿದರು. ಶಿಬಿರದ ಸಂಚಾಲಕ ಗೌತಮ್, ಸಾಗರ್, ಭಾರ್ಗವಿ, ವಿಜಯ್ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಚಾಂದ್ರಮಾನ ಶ್ರೀ ನರಸಿಂಹ ಜಯಂತಿ ವಿಶೇಷ ಪೂಜೆ

ಮೈಸೂರು: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಏ.30ರಂದು ಚಾಂದ್ರಮಾನ ಶ್ರೀನರಸಿಂಹ ಜಯಂತಿ ವಿಶೇಷ ಪೂಜೆಯನ್ನು ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 8 ಗಂಟೆಗೆ ಪೂಜೆ ಆರಂಭವಾಗಿ 11 ಗಂಟೆ ವೇಳೆ ಪ್ರಸಾದ ವಿತರಣೆ ಮಾಡಲಾಗುವುದು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಮೂತ್ರ ಜನಕಾಂಗ ಕಲ್ಲುಗಳ ಉಚಿತ ತಪಾಸಣೆ ಶಿಬಿರ

ಮೈಸೂರು,ಏ.27–ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಏ.28ರಿಂದ ಮೇ 5ರವರೆಗೆ ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಮೂತ್ರಜನಕಾಂಗದ ಕಲ್ಲುಗಳ ತೊಂದರೆಯಿಂದ ಬಳಲುತ್ತಿರುವವರು, ಮೂತ್ರವಿಸರ್ಜನೆ ವೇಳೆ ಉರಿ ಅಥವಾ ನೋವು, ಬೆನ್ನು ಅಥವಾ ಪಕ್ಕೆಯ ಭಾಗದಲ್ಲಿ ಪದೇ ಪದೇ ನೋವು, ಮೂತ್ರನಾಳದಲ್ಲಿ ಸೋಂಕು ಹೊಂದಿರುವವರು, ಕುಟುಂಬದಲ್ಲಿ ಮೂತ್ರದಲ್ಲಿ ಕಲ್ಲುಗಳ ಸಮಸ್ಯೆ ಇರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 0821–2533600, 99863 99862 ಸಂಪರ್ಕಿಸಬಹುದಾಗಿದೆ.

ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೊಮಾ ಪ್ರವೇಶಾತಿ ಆರಂಭ

ಮೈಸೂರು, ಏ.27– ಜೆ.ಎಸ್.ಎಸ್ ಮಹಾವಿದ್ಯಾಪೀಠವು ಮೈಸೂರಿನಲ್ಲಿ ಸ್ಥಾಪಿಸಿರುವ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ವತಿಯಿಂದ ವಿಶೇಷಚೇತನ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ಮೂಲಕ ಸ್ವಾವಲಂಬಿ ಜೀವನ ರೂಪಿಸಿಕೊಡುವ ಉದ್ದೇಶದಿಂದ 2026–27ನೇ ಶೈಕ್ಷಣಿಕ ಸಾಲಿನ ವಿವಿಧ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರುವ ವಿಶೇಷಚೇತನ ವಿದ್ಯಾರ್ಥಿಗಳು ಈ ಸುವರ್ಣಾವಕಾಶ ಬಳಸಿಕೊಳ್ಳಬಹುದು. ಮಾಹಿತಿಗಾಗಿ ದೂ.ಸಂ: 0821–2548315, 2548316/ 9844644937, ಇ–ಮೇಲ್: jsspda@ gmail.com, www.jsspda.org ಅನ್ನು ಸಂಪರ್ಕಿಸಬಹು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬದಲಾದ ಜೀವನ ಶೈಲಿಯಿಂದ ಮಧುಮೇಹಿಗಳ ಹೆಚ್ಚಳ

'ಬದುಕು ಒಮ್ಮೆ ಮಾತ್ರ' ಕೃತಿ ಬಿಡುಗಡೆ ಮಾಡಿದ ಡಾ.ಸದಾನಂದ ಆತಂಕ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಆಯೋಜಿಸಿದ್ದ 'ಬದುಕು ಒಮ್ಮೆ ಮಾತ್ರ' ಕೃತಿಯನ್ನು ಡಾ.ಸದಾನಂದ ಬಿಡುಗಡೆಗೊಳಿಸಿದರು.

ಮೈಸೂರು, ಏ.27(ಜಿಎ)–ಬದಲಾದ ಜೀವನ ಶೈಲಿ, ಆಹಾರದಲ್ಲಿ ಬದಲಾವಣೆ, ಒತ್ತಡ ಮತ್ತಿತರ ಕಾರಣಗಳಿಂದ ದೇಶದಲ್ಲಿ ಮಧುಮೇಹ ಹೆಚ್ಚಾಗುತ್ತಿದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್.ಸದಾನಂದ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಆಯೋಜಿಸಿದ್ದ ಸಮಾರಂಭದಲ್ಲಿ ಡಾ.ಎನ್.ಪ್ರಭುದೇವ ಅವರ ಇಂಗ್ಲಿಷ್ ಲೇಖನಗಳನ್ನು ಶ್ರೀನಿವಾಸ ಬಹದ್ದೂರ್ ಮತ್ತು ಭ್ರಮರ ಬಹದ್ದೂರ್ ಅವರು ಕನ್ನಡಕ್ಕೆ ಅನುವಾದಿಸಿರುವ 'ಬದುಕು ಒಮ್ಮೆ ಮಾತ್ರ' ಕೃತಿಯನ್ನು ಅವರು ಬಿಡುಗಡೆಗೊಳಿಸಿ, ಮಾತನಾಡಿದರು.

ಭಾರತದಲ್ಲಿ ಗಣನೀಯವಾಗಿ ಮಧುಮೇಹ ಹೆಚ್ಚಾಗಿ ವಿಶ್ವದಲ್ಲಿ ಭಾರತ ಮಧುಮೇಹದ ರಾಜಧಾನಿಯಾಗಿದೆ. 35 ವರ್ಷದ ವ್ಯಕ್ತಿಗಳಲ್ಲೇ ಕೊಲೆಸ್ಟ್ರಾಲ್, ಮಧುಮೇಹ, ಬಿಪಿ, ಬೊಜ್ಜು ಇನ್ನಿತರ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿದೆ. ಆಸ್ಪತ್ರೆಗೆ ಬರುವ ಹಂತದಲ್ಲಿಯೇ ಸಾವುಗಳು ಸಂಭವಿಸುತ್ತಿದೆ ಎಂದು ತಿಳಿಸಿದರು.

ವೈದ್ಯಕೀಯ ಮಾಹಿತಿಯನ್ನು ಸರಳ ಭಾಷೆಯಲ್ಲಿ ಬರೆಯುವ ಮೂಲಕ ಜನರಿಗೆ ಅರಿವು ಮೂಡಿಸಬೇಕಿದೆ. ವೈದ್ಯಕೀಯ ಮಾಹಿತಿಯುಳ್ಳ ಪುಸ್ತಕಗಳ ಸಂಖ್ಯೆ ಕಡಿಮೆ ಇದೆ. ಪ್ರಸ್ತುತ ವೈದ್ಯರ ಮೇಲೂ ಒತ್ತಡ ಹೆಚ್ಚಿದೆ. ಸಾಮಾನ್ಯ ಜನರಿಗಿಂತ ವೈದ್ಯರ ಜೀವಿತ ಅವಧಿ ಕಡಿಮೆ ಆಗುತ್ತಿದೆ. ಹೀಗಾಗಿ, ವೈದ್ಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವುದರ ಜೊತೆಗೆ ಜನರ ಆರೋಗ್ಯವನ್ನು ಕಾಪಾಡಬೇಕಿದೆ ಎಂದರು.

"ಇಂದು ಮೊಬೈಲ್‌ನಿಂದ ಎಲ್ಲರೂ ವೈದ್ಯರಾಗುತ್ತಿದ್ದು, ಅನಾರೋಗ್ಯ ಕಾಣಿಸಿಕೊಂಡ ತಕ್ಷಣ ಮೊಬೈಲ್‌ನಲ್ಲಿ ನೋಡಿಕೊಂಡು ಸ್ವಯಂ ಚಿಕಿತ್ಸೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಳವಾಗಿದೆ. ಪ್ರಮುಖವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಮಾಹಿತಿಗಳು ಎಲ್ಲವೂ ನಿಜವಲ್ಲ. ವಿವಿಧ ರೀತಿಯಲ್ಲಿ ಮಾಹಿತಿ ನೀಡುತ್ತಾರೆ. ಹೀಗಾಗಿ ಆರೋಗ್ಯ ಸಮಸ್ಯೆ ಎದುರಾದ ತಕ್ಷಣ ವೈದ್ಯರ ಬಳಿ ತೆರಳಿ.

–ಡಾ.ಸದಾನಂದ

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ. ಪ್ರಧಾನ ಗುರುದತ್, ಅನ್ವೇಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಜಿ.ಆರ್. ಅರಸ್, ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಎನ್. ಪ್ರಭುದೇವ, ಕೃತಿಯ ಅನುವಾದಕರಾದ ಶ್ರೀನಿವಾಸ ಬಹದ್ದೂರ್, ಭ್ರಮರ ಬಹದ್ದೂರ್, ಅನ್ವೇಷಣಾ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥ ರಾಜೇ ಅರಸ್, ಉಪಾಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಒಪ್ಪಿತ ಸಹ ಜೀವನದ ನಂತರ ಅತ್ಯಾಚಾರ ಆರೋಪ ಸರಿಯಲ್ಲ!



ನವದೆಹಲಿ: ಸಹ ಸಂಬಂಧ(ಲಿವ್ ಇನ್ ರಿಲೇಷನ್‌ಶಿಪ್)ದಲ್ಲಿ ದೀರ್ಘಕಾಲ ಬಾಳಿ, ಮಗುವನ್ನು ಪಡೆದ ನಂತರ ಪುರುಷನ ವಿರುದ್ಧ ಅತ್ಯಾಚಾರದ ದೂರು ದಾಖಲಿಸುವ ಪ್ರವೃತ್ತಿ ಬಗ್ಗೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ಇದೇ ವೇಳೆ ಇಂತಹ ಸಂಬಂಧಗಳಿಂದ ಹೊರನಡೆಯುವುದು ಕ್ರಿಮಿನಲ್ ಅಪರಾಧವಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಮದುವೆಯ ಸುಳ್ಳು ಭರವಸೆ ನೀಡಿ ಅತ್ಯಾಚಾರ ಎಸಗಲಾಗಿದೆ ಎಂಬ ಮಹಿಳೆಯ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರಿದ್ದ ಪೀಠವು, ಇದು ಲಿವ್ ಇನ್ ಸಂಬಂಧವಾಗಿದ್ದು, ಮಹಿಳೆ ಆ ವ್ಯಕ್ತಿಯೊಂದಿಗೆ ಮಗುವನ್ನು ಹೊಂದಿದ್ದಾಳೆ. ಹೀಗಿರುವಾಗ ಈಗ ಅತ್ಯಾಚಾರ ಮತ್ತು ಹಲ್ಲೆಯ ಆರೋಪ ಮಾಡುತ್ತಿರುವುದು ಆಶ್ಚರ್ಯಕರ. ಒಪ್ಪಂದದ ಅಥವಾ ಒಮ್ಮತದ ಸಂಬಂಧವಿದ್ದಾಗ ಅಲ್ಲಿ ಅಪರಾಧದ ಪ್ರಶ್ನೆ ಎಲ್ಲಿಂದ ಬರುತ್ತದೆ. ವರ್ಷಗಳ ಕಾಲ ಒಟ್ಟಿಗೆ ವಾಸಿಸಿ, ಬೇರ್ಪಟ್ಟ ನಂತರ ಲೈಂಗಿಕ ದೌರ್ಜನ್ಯದ ದೂರು ದಾಖಲಿಸುವುದು ಸರಿಯಲ್ಲ ಎಂದು ತಿಳಿಸಿತು. ಲಿವ್–ಇನ್ ಸಂಬಂಧಗಳು ಮುರಿದುಬಿದ್ದಾಗ ಮಹಿಳೆಯರು ಹೆಚ್ಚಾಗಿ ಲೈಂಗಿಕ ದೌರ್ಜನ್ಯದ ದೂರುಗಳನ್ನು ಅಸ್ತ್ರವಾಗಿ ಬಳಸುತ್ತಿದ್ದಾರೆ ಎಂದು ವಿಷಾದಿಸಿ, ಒಪ್ಪಿಗೆಯ ಸ್ವರೂಪವನ್ನು ಪರಿಶೀಲಿಸುವುದು ಕೋರ್ಟ್ ಜವಾಬ್ದಾರಿಯಾಗಿದೆ ಎಂದು ಹೇಳಿದೆ.


ಎಐ ಪಾರುಪತ್ಯ; ಒರಾಕಲ್‌ನ 30 ಸಾವಿರ ಉದ್ಯೋಗಿಗಳ ವಜಾ!



ನ್ಯೂಯಾರ್ಕ್: ಟೆಕ್ ದೈತ್ಯ ಕಂಪನಿ ಒರಾಕಲ್, ಇತ್ತೀಚಿನ ವರ್ಷಗಳಲ್ಲಿನ ತನ್ನ ಅತಿದೊಡ್ಡ ಉದ್ಯೋಗ ಕಡಿತ ಘೋಷಿಸಿದೆ.

ಜಾಗತಿಕವಾಗಿ ಇಷ್ಟು ಪ್ರಮಾಣದ ಉದ್ಯೋಗಿಗಳನ್ನು ವಜಾಗೊಳಿಸಿದ ನಿರ್ಧಾರವನ್ನು ಬೆಳಗಿನ ಜಾವ ಇ–ಮೇಲ್‌ಗಳ ಮೂಲಕ ತಿಳಿಸಲಾಯಿತು. ದೀರ್ಘಕಾಲ ಸೇವೆ ಸಲ್ಲಿಸಿದ, ಉನ್ನತ ಕೌಶಲ್ಯ ಹೊಂದಿರುವ ಅನೇಕ ಉದ್ಯೋಗಿಗಳನ್ನು ತೆಗೆದುಹಾಕಲಾಗಿದೆ. ಒರಾಕಲ್‌ನಲ್ಲಿ 33 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ ಹಿರಿಯ ಭದ್ರತಾ ವೃತ್ತಿಪರರಾದ ನೀನಾ ಲೂಯಿಸ್ ಅವರನ್ನು ಏಪ್ರಿಲ್ 1 ರಂದು ಕಂಪನಿಯ ಎಐ ಒತ್ತಡದ ನಡುವೆ ವಜಾಗೊಳಿಸಲಾಯಿತು. 30ಕ್ಕಿಂತ ಹೆಚ್ಚು ವರ್ಷಗಳ ಸೇವೆ ಬಳಿಕ ನಾನು ಇಂದು ವಜಾಗೊಳಿಸಲಾದ 30 ಸಾವಿರ ಉದ್ಯೋಗಿಗಳ ಭಾಗವಾಗಿದ್ದೇನೆ ಎಂದು ಅವರು ಲಿಂಕ್ಡ್‌ಇನ್‌ನಲ್ಲಿ ಆಘಾತ ವ್ಯಕ್ತಪಡಿಸಿದ್ದಾರೆ. ಕಂಪನಿಗಳು ಕೃತಕ ಬುದ್ಧಿಮತ್ತೆಯಲ್ಲಿ ಹೆಚ್ಚು ಹೂಡಿಕೆ ಮಾಡಿ, ಕೆಲಸದ ಹರಿವುಗಳನ್ನು ಸ್ವಯಂಚಾಲಿತಗೊಳಿಸುತ್ತಿದ್ದಾರೆ. ಹೆಚ್ಚು ದಕ್ಷತೆ, ಕಡಿಮೆ ಇನ್‌ಪುಟ್ ವೆಚ್ಚ, ಹೆಚ್ಚಿನ ಲಾಭ ಎಂಬುದು ಈ ಪ್ರಕ್ರಿಯೆಯ ಹಿಂದಿರುವ ಉದ್ದೇಶವಾಗಿದೆ. ಒರಾಕಲ್‌ನ ಉದ್ಯೋಗ ಕಡಿತಕ್ಕೂ ಇದೇ ಕಾರಣ ಎನ್ನಲಾಗಿದೆ.

ಕಲ್ಲಂಗಡಿ ಹಣ್ಣು ಸೇವಿಸಿದ್ದ ಒಂದೇ ಕುಟುಂಬದ ನಾಲ್ವರ ಸಾವು



ಮುಂಬೈ: ಕಲ್ಲಂಗಡಿ ಹಣ್ಣು ಸೇವಿಸಿದ ಒಂದೇ ಕುಟುಂಬದ ನಾಲ್ವರು ಸದಸ್ಯರು ನಿಗೂಢವಾಗಿ ಸಾವನ್ನಪ್ಪಿರುವ ಘಟನೆ ದಕ್ಷಿಣ ಮುಂಬೈನ ಪೈಧೋನಿಯಲ್ಲಿ ನಡೆದಿದ್ದು, ಸೋಮವಾರ ಬೆಳಕಿಗೆ ಬಂದಿದೆ. ಇಲ್ಲಿನ ನಿವಾಸಿಗಳಾದ ಅಬ್ದುಲ್ಲಾ ಡೊಕಾಡಿಯಾ (40), ನಸ್ರೀನ್ ಡೊಕಾಡಿಯಾ(35) ಮತ್ತು ಅವರ ಪುತ್ರಿಯರಾದ ಆಯೇಷಾ (16) ಹಾಗೂ ಜೈನಾಬ್(13) ಮೃತರು. ಶನಿವಾರ ತಡರಾತ್ರಿ ಮನೆಯಲ್ಲಿ ನಡೆದ ಸಣ್ಣ ಸಮಾರಂಭದ ಬಳಿಕ ಕಲ್ಲಂಗಡಿ ಹಣ್ಣು ಸೇವಿಸಿದ ಕೆಲವೇ ಗಂಟೆಗಳಲ್ಲಿ ತೀವ್ರತರದ ವಾಂತಿ, ತಲೆಸುತ್ತು ಮತ್ತು ಹೊಟ್ಟೆನೋವು ಕಾಣಿಸಿಕೊಂಡಿದೆ. ಬೆಳಗಾಗು ವಷ್ಟರಲ್ಲಿ ಇವರೆಲ್ಲರ ಆರೋಗ್ಯ ಸ್ಥಿತಿ ಗಂಭೀರವಾಗಿ ಹದಗೆಟ್ಟಿದೆ. ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಇಬ್ಬರು ಪುತ್ರಿಯರನ್ನು ತಕ್ಷಣವೇ ಜೆಜೆ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ ಒಬ್ಬರು ಮಾರ್ಗಮಧ್ಯೆ, ಮತ್ತೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದು, ಬಳಿಕ ಪೋಷಕರು ಮೃತಪಟ್ಟಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಕಲ್ಲಂಗಡಿ ಹಣ್ಣಿನಲ್ಲಿ ವಿಷಕಾರಿ ಅಂಶವಿತ್ತೇ ಅಥವಾ ಬೇರೆ ಯಾವುದಾದರೂ ಕಾರಣದಿಂದ ಈ ದುರಂತ ಸಂಭವಿಸಿರಬಹುದೇ ಎಂಬುದು ವಿಧಿವಿಜ್ಞಾನ ವರದಿ ಹಾಗೂ ಮರಣೋತ್ತರ ಪರೀಕ್ಷೆ ವರದಿಯಿಂದ ತಿಳಿಯಬೇಕಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ಉಗ್ರ ಶೇಖ್ ಯೂಸುಫ್ ಅಫ್ರಿದಿ ಹತ್ಯೆ



ಇಸ್ಲಾಮಾಬಾದ್: ಲಷ್ಕರ್–ಎ–ತೊಯ್ಬಾ ಕಮಾಂಡರ್ ಶೇಖ್ ಯೂಸುಫ್ ಅಫ್ರಿದಿಯನ್ನು ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದಲ್ಲಿ ಅಪರಿಚಿತ ಬಂದೂಕುಧಾರಿಗಳು ಗುಂಡಿಕ್ಕಿ ಕೊಂದಿದ್ದಾರೆ. ಈ ಮೂಲಕ ಕಳೆದ ಕೆಲವು ತಿಂಗಳುಗಳಿಂದ ಪಾಕಿಸ್ತಾನದ ಸುರಕ್ಷಿತ ತಾಣಗಳಲ್ಲಿ ಅಡಗಿರುವ ಉಗ್ರರ ಮೇಲೆ ನಡೆಯುತ್ತಿರುವ ದಾಳಿಗಳ ಸರಣಿ ಮತ್ತೊಂದು ತಿರುವು ಪಡೆದಿದೆ. ಅಮೆರಿಕದಿಂದ ನಿಷೇಧಕ್ಕೊಳಗಾಗಿರುವ ಲಷ್ಕರ್ ಸಂಘಟನೆಯ ಕಾರ್ಯಾಚರಣೆಗಳಲ್ಲಿ ಅಫ್ರಿದಿ ಪ್ರಮುಖ ಕೊಂಡಿಯಾಗಿದ್ದ. ತನಿಖಾಧಿಕಾರಿಗಳ ಪ್ರಕಾರ, ಇದು ಪಕ್ಕಾ ಯೋಜಿತ ದಾಳಿಯಾಗಿದ್ದು, ಅಫ್ರಿದಿಗೆ ತಪ್ಪಿಸಿಕೊಳ್ಳಲು ಯಾವುದೇ ಸಿಕ್ಕಿಲ್ಲ. ಕಳೆದ ತಿಂಗಳು ಲಾಹೋರ್‌ನಲ್ಲಿ ಲಷ್ಕರ್ ಸ್ಥಾಪಕ ಸದಸ್ಯ ಅಮೀರ್ ಹಮ್ಜಾನನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು. ಜೈಶ್–ಎ–ಮೊಹಮ್ಮದ್ ಮುಖ್ಯಸ್ಥ ಮೌಲಾನಾ ಮಸೂದ್ ಅಜರ್‌ನ ಹಿರಿಯ ಸಹೋದರ ತಾಹಿರ್ ಅನ್ವರ್ ಕೂಡ ನಿಗೂಢವಾಗಿ ಸಾವನ್ನಪ್ಪಿದ. ರಿಯಾಸಿ ದಾಳಿಯ ಮಾಸ್ಟರ್‌ಮೈಂಡ್ ಕತಲ್ ಸಿಂಧಿಯನ್ನು ಕಳೆದ ವರ್ಷ ಝೇಲಂನಲ್ಲಿ ಹತ್ಯೆ ಮಾಡಲಾಗಿತ್ತು. 2023ರಿಂದ ಪ್ರಾರಂಭವಾದ ಈ ಮಾದರಿಯ ಹತ್ಯೆಗಳು 2026ರಲ್ಲಿ ತೀವ್ರಗೊಂಡಿವೆ. ಈ ವರ್ಷ ಕನಿಷ್ಠ 30 ಭಯೋತ್ಪಾದಕರನ್ನು ಲಾಹೋರ್, ಕರಾಚಿ ಮತ್ತು ಗಡಿ ಪ್ರದೇಶಗಳಲ್ಲಿ ಹತ್ಯೆ ಮಾಡಲಾಗಿದೆ. ಈ ಬಂದೂಕುಧಾರಿಗಳು ಯಾರು ಎಂಬುದು ಐಎಸ್‌ಐಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಡೆಲಿವರಿ ಏಜೆಂಟ್‌ಗೆ ಗುಂಡಿಕ್ಕಿ ಹತ್ಯೆ: ಪೊಲೀಸ್ ಕಾನ್‌ಸ್ಟೇಬಲ್ ಬಂಧನ



ನವದೆಹಲಿ: ನೈಋತ್ಯ ದೆಹಲಿಯ ಜಾಫರ್‌ಪುರ್ ಕಲಾನ್ ಪ್ರದೇಶದಲ್ಲಿ ನಡೆದ 21 ವರ್ಷದ ಡೆಲಿವರಿ ಏಜೆಂಟ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಕಾನ್‌ಸ್ಟೇಬಲ್ ಒಬ್ಬರನ್ನು ಬಂಧಿಸಲಾಗಿದೆ.

ವಾಗ್ವಾದದ ಬಳಿಕ ಡೆಲಿವರಿ ಏಜೆಂಟ್‌ನನ್ನು ಗುಂಡು ಹಾರಿಸಿ ಕೊಂದು, ಆತನ ಸ್ನೇಹಿತನನ್ನು ಗಾಯಗೊಳಿಸಿದ ಆರೋಪದ ಮೇರೆಗೆ ಘಟನೆ ನಡೆದ 24 ಗಂಟೆಗಳ ಒಳಗೆ ದೆಹಲಿ ಪೊಲೀಸ್ ಹೆಡ್‌ಕಾನ್‌ಸ್ಟೇಬಲ್ ನೀರಜ್ ಅವರನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ದೃಢಪಡಿಸಿದ್ದಾರೆ. ಭಾನುವಾರ ತಡರಾತ್ರಿ 2.30ರ ವೇಳೆಯಲ್ಲಿ ಡೆಲಿವರಿ ಏಜೆಂಟ್ ಪಾಂಡವ್ ಕುಮಾರ್ ಮತ್ತು ಆತನ ಸ್ನೇಹಿತ ಕ್ರಿಶನ್ ಹುಟ್ಟುಹಬ್ಬದ ಆಚರಣೆ ನಂತರ ರಸ್ತೆಯ ಪಕ್ಕದಲ್ಲಿ ನಿಂತಿದ್ದರು. ಅಲ್ಲಿಯೇ ವಾಸವಿರುವ ಹೆಡ್ ಕಾನ್‌ಸ್ಟೇಬಲ್ ನೀರಜ್, ಪಾಂಡವ್‌ಕುಮಾರ್ ಹಾಗೂ ಕ್ರಿಶನ್ ಜೊತೆ ವಾಗ್ವಾದ ನಡೆಸಿ, ಪಾಂಡವ್ ಕುಮಾರ್ ಮೇಲೆ ಗುಂಡು ಹಾರಿಸಿದಾಗ ಅದು ಅವನ ಎದೆಯನ್ನು ಚುಚ್ಚಿ, ಬಳಿಕ ಆತನ ಸ್ನೇಹಿತನಿಗೂ ತಗುಲಿದೆ. ಇಬ್ಬರನ್ನೂ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಪಾಂಡವ್ ಕುಮಾರ್ ಬದುಕುಳಿಯಲಿಲ್ಲ. ಕ್ರಿಶನ್‌ಗೆ ಚಿಕಿತ್ಸೆ ಮುಂದುವರೆದಿದೆ. ಘಟನೆಯ ಸಮಯದಲ್ಲಿ ನೀರಜ್ ಕರ್ತವ್ಯದಲ್ಲಿ ಇರಲಿಲ್ಲ. ಘಟನೆಯ ನಂತರ ಪರಾರಿಯಾಗಿದ್ದ ಆತನನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 28 ಏಪ್ರಿಲ್ 2026

ಚುನಾವಣೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ

ಮಡಿಕೇರಿ, ಏ.27– ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಆಡಳಿತ ರೂಢ ಕಾಂಗ್ರೆಸ್ ಸರ್ಕಾರ ನಿರ್ಲಕ್ಷ್ಯ ವಹಿಸಿದ್ದು, ತಕ್ಷಣ ಚುನಾವಣೆ ನಡೆಸಬೇಕೆಂದು ಆಗ್ರಹಿಸಿ ಭಾರತೀಯ ಜನತಾ ಪಕ್ಷದ ವತಿಯಿಂದ ಸೋಮವಾರಪೇಟೆ ತಾಲೂಕು ಪಂಚಾಯಿತಿ ಎದುರು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಮಾತನಾಡಿ, ರಾಜ್ಯ ಸರ್ಕಾರ ಜನ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ. ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿವೆ. ರಸ್ತೆಗಳ ಗುಂಡಿ ಮುಚ್ಚಲೂ ಸಹ ಸರ್ಕಾರದ ಬಳಿ ಹಣವಿಲ್ಲದಂತಾಗಿದೆ. ರಾಜ್ಯದ ಬೊಕ್ಕಸವನ್ನು ಬರಿದು ಮಾಡಿರುವ ಕಾಂಗ್ರೆಸ್ ಸರ್ಕಾರ ಇದೀಗ ಚುನಾವಣೆ ನಡೆಸಲೂ ಸಹ ಮುಂದಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿ, ರಾಜ್ಯಪಾಲರು ಆದಷ್ಟು ಬೇಗ ಈ ಬಗ್ಗೆ ಗಮನಹರಿಸಿ ಚುನಾವಣೆ ನಡೆಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಎಸ್.ಜಿ. ಮೇದಪ್ಪ ಮಾತನಾಡಿ, ಅಧಿಕಾರ ವಿಕೇಂದ್ರೀಕರಣದ ಬದಲು ಕಾಂಗ್ರೆಸ್ ಸರ್ಕಾರ ಅಧಿಕಾರ ಕೇಂದ್ರೀಕರಣದ ಮೂಲಕ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ. ಭಾರತೀಶ್, ಬಿಜೆಪಿ ಮಂಡಲ ಅಧ್ಯಕ್ಷ ಗೌತಮ್ ಗೌಡ ಹಾಗೂ ಯುವ ಮೋರ್ಚಾ ಅಧ್ಯಕ್ಷ ಮಹೇಶ್ ತಿಮ್ಮಯ್ಯ ಮಾತನಾಡಿ, ತಕ್ಷಣ ಚುನಾವಣೆಗಳನ್ನು ನಡೆಸದೇ ಹೋದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಸಂಘಟಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರಾದ ವಿ.ಕೆ. ಲೋಕೇಶ್, ಎಸ್.ಆರ್.ಸೋಮೇಶ್, ಮನು ಕುಮಾರ್ ರೈ, ಬಿ.ಜೆ.ದೀಪಕ್, ದರ್ಶನ್ ಜೋಯಪ್ಪ, ಮೋಹಿತ್ ತಿಮ್ಮಯ್ಯ, ಮೋಕ್ಷಿಕ್ ರಾಜ್, ಶರತ್ ಚಂದ್ರ, ಎನ್.ಆರ್. ಅಜೀಶ್ ಕುಮಾರ್, ಅನಂತ್ ಕುಮಾರ್, ಭಾಸ್ಕರ್ ನಾಯಕ್, ಭುವನೇಂದ್ರ, ಬಿ.ಎ. ಧರ್ಮಪ್ಪ, ಟಿ.ಕೆ.ರಮೇಶ್, ಕೆ.ಕೆ ಸುಧಾಕರ್, ದಿವಾಕರ್, ಕುಶಾಲಪ್ಪ, ಕವಿತಾ ವಿರೂಪಾಕ್ಷ, ಸವಿತ ಸತೀಶ್, ಇಂದಿರಾ ಮೋಣಪ್ಪ, ಜಯಲಕ್ಷ್ಮಿ, ರೂಪಾ ಸತೀಶ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ಚುನಾವಣೆ ನಡೆಸುವಂತೆ ಆಗ್ರಹಿಸಿ ಬಿಜೆಪಿ ಸೋಮವಾರಪೇಟೆ ತಾಪಂ ಎದುರು ಪ್ರತಿಭಟನೆ ನಡೆಸಿತು.

ಮೋದಿಗೆ ಮಹಿಳೆಯರ ಬಗ್ಗೆ ನೈಜ ಕಾಳಜಿಯೇ ಇಲ್ಲ

ಮಡಿಕೇರಿ, ಏ.27–ಮಹಿಳೆಯರ ಬಗ್ಗೆ ನೈಜ ಕಾಳಜಿ ಇಲ್ಲದ ಮೋದಿ ಅವರ ನೇತೃತ್ವದ ಕೇಂದ್ರ ಸರಕಾರ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವಲ್ಲಿ ವಿಫಲವಾಗಿದೆ. ಈ ವಿಚಾರದಲ್ಲಿ ಸುಳ್ಳು ಹೇಳುತ್ತಿರುವ ಕೇಂದ್ರ ಸರಕಾರ ಕಾಂಗ್ರೆಸ್ ವಿರುದ್ಧ ಗೂಬೆ ಕೂರಿಸುವ ಯತ್ನ ಮಾಡುತ್ತಿದೆ ಎಂದು ರಾಜ್ಯ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಹಾಗೂ ಮಹಿಳಾ ಕಾಂಗ್ರೆಸ್‌ನ ಉಸ್ತುವಾರಿ ಮಮತಾ ಗಟ್ಟಿ ಆರೋಪಿಸಿದ್ದಾರೆ.

ಮಹಿಳಾ ಮೀಸಲಾತಿ ಪರ ಸುಮಾರು 10 ಲಕ್ಷ ಸಹಿ ಸಂಗ್ರಹದ ಗುರಿಯೊಂದಿಗೆ ಮಹಿಳಾ ಕಾಂಗ್ರೆಸ್ ರಾಜ್ಯವ್ಯಾಪಿ ಅಭಿಯಾನ ನಡೆಸುತ್ತಿದೆ ಎಂದರು. ಭಾರತದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸದಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ನೀಡುವಲ್ಲಿ ಕಾಂಗ್ರೆಸ್ ಮಹತ್ತರ ಪಾತ್ರ ವಹಿಸಿದೆ. ಆದರೆ ಮಹಿಳಾ ಸಬಲೀಕರಣಕ್ಕೆ ಯಾವುದೇ ಕೊಡುಗೆ ನೀಡದ ಪ್ರಧಾನಿ ಮೋದಿ ನೇತೃತ್ವದ ಸರಕಾರ ಸುಳ್ಳು ಹೇಳುತ್ತಾ ಕಾಲಾಹರಣ ಮಾಡುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.



ರಾಜ್ಯ ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.


ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಮಹಿಳಾ ಮೀಸಲಾತಿ ಕುರಿತು ಸುಳ್ಳು ಆರೋಪಗಳನ್ನು ಮಾಡಿ ಕಾಂಗ್ರೆಸ್ ವಿರುದ್ಧ ಗೂಬೆ ಕೂರಿಸುತ್ತಿದ್ದಾರೆ. ಕಾಂಗ್ರೆಸ್ ಹಾಕಿ ಕೊಟ್ಟ ಮಹಿಳಾ ಸಬಲೀಕರಣದ ಅಡಿಪಾಯವೇ ಶೋಭಾ ಅವರು ಇಂದು ಸಚಿವರಾಗಿ ಅಧಿಕಾರದಲ್ಲಿರಲು ಕಾರಣವಾಗಿದೆ. ಶೋಭಾ ಕರಂದ್ಲಾಜೆ ಅವರಿಗೆ ಪ್ರಾಮಾಣಿಕತೆ ಇದ್ದರೆ ಮಹಿಳೆಯರ ಪರ ಧ್ವನಿ ಎತ್ತಲಿ ಎಂದು ಸವಾಲು ಹಾಕಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ ಮಾತನಾಡಿ, ಪ್ರಧಾನಿ ಮೋದಿ ಅವರಿಗೆ ಮಹಿಳೆಯರ ಬಗ್ಗೆ ನೈಜ ಪ್ರೀತಿಯೇ ಇಲ್ಲ ಎಂದು ಟೀಕಿಸಿದರು. ಸುದ್ದಿ ಗೋಷ್ಠಿ ಯಲ್ಲಿ ಕೊಡಗು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಜಿ.ಆರ್, ಪ್ರಧಾನ ಕಾರ್ಯದರ್ಶಿ ರೂಪ ಭೀಮಯ್ಯ, ಉಪಾಧ್ಯಕ್ಷೆ ಶೀಲಾ ಡಿಸೋಜ ಹಾಗೂ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷೆ ಜೆ.ಫಿಲೋಮಿನಾ ಉಪಸ್ಥಿತರಿದ್ದರು.

ಇಂದು ಪೂರ್ವಭಾವಿ ಸಭೆ

ಮಡಿಕೇರಿ: ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನದಲ್ಲಿ ಮೇ 13ರಿಂದ ಅಷ್ಟಬಂಧ ಬ್ರಹ್ಮ ಕಲಶ ಉತ್ಸವ ಸಂಬಂಧ ಏ.28ರ ಬೆಳಗ್ಗೆ 10.30 ಗಂಟೆಗೆ ದೇವಸ್ಥಾನದಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ.

ಗುಹ್ಯ ಗ್ರಾಮದ ಕಾಫಿ ತೋಟಗಳಲ್ಲಿ ಆನೆಗಳ ಹಿಂಡು



ಸಿದ್ದಾಪುರ, ಏ.27–ಆಹಾರ ಅರಸಿ ಕಾಡಿನಿಂದ ನದಿ ದಾಟಿ ಬಂದ ಕಾಡಾನೆಗಳು ಗುಹ್ಯ ಗ್ರಾಮದ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿವೆ. ಮರಿಗಳೊಂದಿಗೆ 20ಕ್ಕೂ ಹೆಚ್ಚು ಕಾಡಾನೆಗಳು ಹಾಡ ಹಗಲಿನಲ್ಲೇ ರಾಜಾರೋಷವಾಗಿ ಕಾವೇರಿ ನದಿ ದಾಟಿ ಬಂದಿವೆ.

ಮೀನು ಕೊಲ್ಲಿ ಅರಣ್ಯ ಭಾಗದಿಂದ ಅರೆಕಾಡು ಬೆಳಂಜಿಗೆರೆ ಕಾಫಿ ತೋಟದ ಮಾರ್ಗವಾಗಿ ಕಾವೇರಿ ನದಿ ದಾಟಿ ಗುಹ್ಯ ಗ್ರಾಮದ ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲುಗಳನ್ನು ನಾಶಪಡಿಸುತ್ತಿವೆ.

ಕೆಲಸಕ್ಕೆ ತೆರಳಿದ ತೋಟದ ಕಾರ್ಮಿಕರು ಕಾಡಾನೆಗಳ ಹಿಂಡನ್ನು ಕಂಡು ಭಯಭೀತರಾಗಿದ್ದಾರೆ. ಕಾಡಾನೆಗಳು ಕಾಡಿನಿಂದ ನಾಡಿಗೆ ಬಾರದ ಹಾಗೆ ತಡೆಗಟ್ಟುವಲ್ಲಿ ಅರಣ್ಯ ಇಲಾಖೆಯು ವಿಫಲವಾಗಿದ್ದು, ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ಕಾರ್ಮಿಕ ಸಂಘಟನೆಯ ಮುಖಂಡ ಪಿ.ಆರ್.ಭರತ್ ಹಾಗೂ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಚುನಾವಣೆಗಳನ್ನು ಬಹಿಷ್ಕರಿಸಲು

ರಾಮ್ ಜೀ ಸಕ್ವಾಲ್ ಬಡಾವಣೆ ನಿವೇಶನ ರಹಿತರ ನಿರ್ಧಾರ

ಮಡಿಕೇರಿ, ಏ.27–ನಿವೇಶನ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಹೋರಾಟ ನಡೆಸುತ್ತಿರುವ ಚೆಟ್ಟಳ್ಳಿ ಪೊನ್ನತ್‌ಮೊಟ್ಟೆ ಪ್ರದೇಶದ ರಾಮ್ ಜೀ ಸಕ್ವಾಲ್ ಬಡಾವಣೆಯ ನಿವೇಶನ ರಹಿತರು ಹೋರಾಟ ತೀವ್ರಗೊಳಿಸುವ ನಿಟ್ಟಿನಲ್ಲಿ ಮುಂಬರುವ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ಘೋಷಣೆ ಮಾಡಿದ್ದಾರೆ.

ಕುಶಾಲನಗರ ತಾಲೂಕಿನ ಚೆಟ್ಟಳ್ಳಿ ಗ್ರಾ.ಪಂ.ವ್ಯಾಪ್ತಿಯ 1.80 ಎಕರೆ ಜಾಗವನ್ನು ನಿವೇಶನ ರಹಿತರಿಗೆ ಹಂಚಿಕೆ ಮಾಡಲು ತಾಲೂಕು ಕಾರ್ಯನಿರ್ವಹಣಾಧಿಕಾರಿಗಳ ಹೆಸರಿಗೆ ಆರ್‌ಟಿಸಿ ಮಾಡಲಾಗಿತ್ತು. ಆದರೆ ಪಂಚಾಯಿತಿ ನಿರ್ಲಕ್ಷ್ಯದಿಂದ 6 ವರ್ಷಗಳಿಂದ ಜಾಗ ಮಂಜೂರಾತಿ ಪ್ರಕ್ರಿಯೆ ಪೂರ್ಣಗೊಂಡಿಲ್ಲ ಎಂದು ನಿವಾಸಿಗಳು ಆರೋಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಾಡಿಗೆ ಮನೆಗಳು ಹಾಗೂ ತೋಟದ ಲೈನ್‌ಮನೆಗಳಲ್ಲಿ ವಾಸಿಸುತ್ತಿದ್ದ 29 ಕುಟುಂಬಗಳು ಮಂಜೂರಾದ ಜಾಗದಲ್ಲೇ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಿಕೊಂಡಿವೆ. ಪಂಚಾಯಿತಿ ನೀರಿನ ಪೈಪ್ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿತ್ತು. ನಂತರ ತಾವೇ ಬಾವಿಯನ್ನು ತೋಡಿ ನೀರನ್ನು ಬಳಸಿಕೊಂಡರೂ ಬಿಸಿಲಿನ ತಾಪಕ್ಕೆ ಬಾವಿ ನೀರು ಬತ್ತುತ್ತಿದೆ. ಕಸ ವಿಲೇವಾರಿಯಲ್ಲೂ ಅವೈಜ್ಞಾನಿಕ ಕ್ರಮಗಳಿಂದ ತೊಂದರೆ ಉಂಟಾಗಿದೆ ಎಂದು ದೂರಿದ್ದಾರೆ. ನಮ್ಮ ಜಾಗ ನಮ್ಮ ಹಕ್ಕು. ಸುಳ್ಳು ಭರವಸೆ ನೀಡಿ ನಮ್ಮಿಂದ ಮತ ಪಡೆದು ಈಗ ನಮಗೇ ತೊಂದರೆ ನೀಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿ ಸಿರುವ ನಿವಾಸಿಗಳು ಸ್ಥಳೀಯ ಸಂಸ್ಥೆ ಗಳ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಸರ್ಕಾರದ ಗಮನ ಸೆಳೆಯಲು ಮಂಜೂರಾದ ಜಾಗದಲ್ಲಿ ಬ್ಯಾನರ್‌ಗಳನ್ನು ಅಳವಡಿಸಲಾಗಿದೆ ಎಂದು ತಿಳಿಸಿದ್ದಾರೆ. ಸೌಕತ್ ಆಲಿ, ಚಂದ್ರಶೇಖರ್, ಶಕೀರ್, ಸಫಿ, ಭಾರತಿ ಹಾಗೂ ಭವ್ಯ, ಮತ್ತಿತರರು ಹಾಜರಿದ್ದರು.



ಸರ್ಕಾರದ ಗಮನ ಸೆಳೆಯಲು ಜಾಗದಲ್ಲಿ ಬ್ಯಾನರ್‌ಗಳನ್ನು ಅಳವಡಿಸಿರುವುದು.

ಅರ್ಚಕರ ಸ್ಕೂಟಿಯಲ್ಲಿ ನಾಗರಹಾವು!

ಸಿದ್ದಾಪುರ, ಏ.27–ಬಿಸಿಲಿನ ತಾಪ ತಾಳಲಾರದೆ ನಾಗರ ಹಾವೊಂದು ಮನೆ ಬಳಿ ನಿಲ್ಲಿಸಿದ್ದ ಸ್ಕೂಟಿಯೊಳಗೆ ಸೇರಿಕೊಂಡಿದ್ದ ಘಟನೆ ಗುಹ್ಯ ಗ್ರಾಮದಲ್ಲಿ ನಡೆದಿದೆ.

ಗುಹ್ಯ ಗ್ರಾಮದ ನಿವಾಸಿ ಅರ್ಚಕ ವೃತ್ತಿಯ ರವಿ ಶಂಕರ್ ಎಂಬವರ ಸ್ಕೂಟಿಯನ್ನು ಮನೆಯ ಬಳಿ ನಿಲ್ಲಿಸಲಾಗಿತ್ತು. ಬೆಳಗ್ಗೆ ರವಿಶಂಕರ್ ಅವರು ಸ್ಕೂಟಿ ಬಳಿ ಹೋದಾಗ ವಾಹನದ ಒಳ ಭಾಗದಿಂದ ಏನೋ ಶಬ್ದ ಬರುತ್ತಿರುವುದನ್ನು ಗಮನಿಸಿದ್ದಾರೆ. ಬಳಿಕ ಸೂಕ್ಷ್ಮವಾಗಿ ಆಲಿಸಿದಾಗ ಹಾವು ಬುಸುಗುಡುತ್ತಿರುವ ಶಬ್ದ ಕೇಳಿದೆ.

ಕೂಡಲೇ ಸ್ಥಳಕ್ಕೆ ಬಂದ ಉರಗ ರಕ್ಷಕ ಸುರೇಶ್ ಪೂಜಾರಿ ಸತತ 1 ಗಂಟೆ ಕಾಲ ಕಾರ್ಯಾಚರಣೆ ನಡೆಸಿ ಕೊನೆಗೂ ಸ್ಕೂಟಿಯ ಬಿಡಿ ಭಾಗಗಳನ್ನು ತೆಗೆದು ಒಳಗಡೆ ಅಡಗಿದ್ದ ನಾಗರ ಹಾವನ್ನು ಹೊರ ತೆಗೆದು, ಸುರಕ್ಷಿತವಾಗಿ ಹಾವನ್ನು ಅರಣ್ಯಕ್ಕೆ ಬಿಟ್ಟಿದ್ದಾರೆ.



ಸ್ಕೂಟಿಯೊಳಗೆ ನಾಗರ ಹಾವು ಸೇರಿರುವುದು.

ಪಲ್ಲಾಟ್ ಅಯ್ಯಪ್ಪ ದೇವರ ಬ್ರಹ್ಮಕಲಶ ಮಹೋತ್ಸವ ಆರಂಭ

ವಿರಾಜಪೇಟೆ: ಪಟ್ಟಣದ ನೆಹರು ನಗರದಲ್ಲಿರುವ ಶ್ರೀ ಪಲ್ಲಾಟ್ ಅಯ್ಯಪ್ಪ ದೇವರ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಮಹೋತ್ಸವ ನಿನ್ನೆ ವಿಜೃಂಭಣೆಯಿಂದ ಆರಂಭವಾಯಿತು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ ಈಗಾಗಲೇ ದೇವಸ್ಥಾನ ಪಕ್ಕದಲ್ಲಿ ಹಾದು ಹೋಗುವ ರಸ್ತೆಗೆ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಕಾಂಕ್ರೀಟ್ ರಸ್ತೆ ಮಾಡಲಾಗಿದೆ, ಪ್ರಾರಂಭದಲ್ಲಿ ದೇವಸ್ಥಾನ ಕಾಮಗಾರಿ ನಡೆಯುವ ಸಂದರ್ಭ ಅನುದಾನ ನೀಡಲಾಗಿದ್ದು ಇನ್ನು ಮುಂದೆಯೂ ದೇವಾಲಯಗಳ ಅಭಿ ವೃದ್ಧಿಗೆ ಸಹಕಾರ ಇರುತ್ತದೆಯೆಂದು ಹೇಳಿದರು.

ಪಲ್ಲಾಟ್ ಅಯ್ಯಪ್ಪ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಚೆನ್ನಪ್ಪ, ವಾರ್ಡ್ ಮಾಜಿ ಸದಸ್ಯ ಮಹ್ಮದ್ ರಾಫಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಬ್ರಹ್ಮಶ್ರೀ ವೇಮೂ ಶ್ರೀಕಾಂತ ತಂತ್ರಿ, ಪುರಸಭೆ ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಹಿರಿಯ ವಕೀಲ ಕೆ.ಅಪ್ಪಣ್ಣ, ಕೆ.ಕೆ.ಗ್ರೂಪ್ ಜಗತ್ ಹಾಗೂ ಪಲ್ಲಾಟ್ ಅಯ್ಯಪ್ಪ ಸೇವಾ ಟ್ರಸ್ಟ್ ಪದಾಧಿಕಾರಿಗಳು ಮತ್ತು ದೇವಸ್ಥಾನ ಸಮಿತಿ ಸದಸ್ಯರು ಉಪಸ್ಥಿತರಿದ್ದರು.



ಶಾಸಕ ಪೊನ್ನಣ್ಣ ಪಲ್ಲಾಟ್ ಅಯ್ಯಪ್ಪ ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಿದರು.

ಕಲರ್ ಬೆಲ್ಟ್ ವಿತರಣೆ



ಕರ್ನಾಟಕ ಕುಂಗ್ ಫೂ ಸಂಸ್ಥೆ ವತಿಯಿಂದ ಸೋಮವಾರಪೇಟೆಯಲ್ಲಿ ಕುಂಗ್ ಫೂ ಕಲರ್ ಬೆಲ್ಟ್ ಪರೀಕ್ಷೆ ನಡೆಯಿತು. ಚನ್ನಬಸಪ್ಪ ಹಾಲ್‌ನಲ್ಲಿ ನಡೆದ ಪರೀಕ್ಷೆಯಲ್ಲಿ 30 ವಿದ್ಯಾರ್ಥಿಗಳಿಗೆ ಕಲರ್ ಬೆಲ್ಟ್ ವಿತರಿಸಲಾಯಿತು. ಸಂಸ್ಥೆಯ ಅಧ್ಯಕ್ಷರು ಹಾಗೂ ರಾಷ್ಟ್ರೀಯ ತರಬೇತುದಾರ ಎನ್.ಸಿ.ಸುದರ್ಶನ್ ನೇತೃತ್ವದಲ್ಲಿ ಪರೀಕ್ಷಕ ಡಿ.ಚಂದ್ರು ಪರೀಕ್ಷೆ ನಡೆಸಿದರು.

ಮುಳ್ಳೂರಿನಲ್ಲಿ ಅಂಬೇಡ್ಕರ್ ಜಯಂತಿ

ದಲಿತರಿಗೆ ಅನ್ಯಾಯವಾದರೆ ಅಧಿಕಾರ ತ್ಯಾಗಕ್ಕೂ ಸಿದ್ಧ

ಅಂದು ಸಂವಿಧಾನ ಬದಲಿಸುತ್ತೇವೆ ಅಂದವರು ಇಂದು ಸಂವಿಧಾನ ಪೀಠಿಕೆ ಹಿಡಿದು ಓಡಾಡುತ್ತಿದ್ದಾರೆ -ಸಚಿವ ಹೆಚ್.ಸಿ.ಮಹದೇವಪ್ಪ

ಕೊಳ್ಳೇಗಾಲ, ಏ.27– ನನ್ನ 40 ವರುಷಗಳ ರಾಜಕಾರಣದಲ್ಲಿ ದಲಿತ ಸಮಾಜದ ಅನ್ಯಾಯ ವಿರುದ್ಧ ಹೋರಾಟ ಮಾಡುತ್ತಲೇ ಬಂದಿದ್ದೇನೆ, ಅಂತಹ ಸಮಾಜಕ್ಕೆ ನಾನು ಇರುವ ತನಕ ಅನ್ಯಾಯವಾಗಲು ಬಿಡಲ್ಲ, ಒಂದು ವೇಳೆ ಅನ್ಯಾಯವಾದರೆ ನಾನು ಅಧಿಕಾರ ತ್ಯಾಗಕ್ಕೂ ಸಿದ್ಧನಿದ್ದೇನೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿ ಮಹದೇವಪ್ಪ ತಿಳಿಸಿದ್ದಾರೆ.

ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಆಯೋಜಿಸಲಾಗಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಾನು ಸಚಿವನಾದ ಮೇಲೆ ಸಂವಿಧಾನದ ಪೀಠಿಕೆ ಎಲ್ಲರ ಕೈಯಲ್ಲು ಹಿಡಿಯುವಂತಾಗಿದೆ. ಯಾರು ಯಾರು ಸಂವಿಧಾನ ಬದಲಿಸುತ್ತೇವೆ ಅಂದವರು ಸಹಾ ಸಂವಿಧಾನದ ಪುಸ್ತಕ ಕೈನಲ್ಲಿ ಹಿಡಿದುಕೊಂಡು ಓಡಾಡುತ್ತಿದ್ದಾರೆ ಎಂದರು.

ನೀವು ಹಾರ ಹಾಕಿದ್ದಿರಿ, ಬೇರೆಯವರು ಏನು ಹಾಕಿದ್ದಾರೆ ಗೊತ್ತಿಲ್ಲ?

ನೀವು ಮುಳ್ಳೂರು ಗ್ರಾಮದಲ್ಲಿ ನನ್ನ ಭಾವಚಿತ್ರಕ್ಕೆ ಹಾರ ಹಾಕಿದ್ದಿರಿ. ಅಭಿನಂದನೆ ಸಲ್ಲಿಸಿದ್ದಿರಿ, ಆದರೆ ಬೇರೆಯವರು ಏನು ಹಾಕಿದ್ದಾರೊ ನನಗೆ ಗೊತ್ತಿಲ್ಲ, ಅಂತಹ ದುಡುಕಿನ ನಿರ್ಧಾರ ಅವಿವೇಕತನದ ಪರಮಾವಧಿ ಎಂದು ತಮ್ಮ ಫೋಟೋಗೆ ಕೊಳ್ಳೇಗಾಲದಲ್ಲಿ ಚಪ್ಪಲಿ ಹಾರ ಹಾಕಿದವರಿಗೆ ಸಚಿವ ಮಹದೇವಪ್ಪ ತಿರುಗೇಟು ನೀಡಿದರು.

ನಕಲಿ ಅಂಬೇಡ್ಕರ್ ವಾದಿಗಳ ಬಗ್ಗೆ ಎಚ್ಚರವಿರಬೇಕು, ಇಂತಹ ಅವಿವೇಕತನದಿಂದ ಸಮಾಜಕ್ಕೆ ಒಳ್ಳೆಯದಾಗಲ್ಲ, ಇಂತಹ ದುಡಿಕಿನ ನಿರ್ಧಾರವ ಸರಿಯಲ್ಲ ಎಂದು ಕಿಡಿಕಾರಿದರು

ಸಂವಿಧಾನ ಪೀಠಿಕೆ ಓದುವುದು ಕಡ್ಡಾಯ ಎಂದು ನಿರ್ಣಯಿಸಿದ ಮೇಲೆ ಕೈನಲ್ಲಿ ಹಿಡಿದುಕೊಂಡಿದ್ದಾರೆ. ಅವರ ಕೈನಲ್ಲಿ ಸಂವಿಧಾನ ಕೆಂಪು ಪುಸ್ತಕ ಇದೆ. ಪ್ರಧಾನಿ, ಮುಖ್ಯಮಂತ್ರಿಗಳು, ಸ್ವಾಮೀಜಿಗಳು ಸಹ ಸಂವಿಧಾನಕ್ಕೆ ನಮಿಸುತ್ತಿದ್ದಾರೆ. ಎಲ್ಲಾ ಜನರು ಸಂವಿಧಾನಕ್ಕೆ ಅರ್ಹರು, ಅವರೆಲ್ಲಾ ಕಾನೂನಿನ ಮುಂದೆ ಸಮಾನರು. ಸಂವಿಧಾನ ನಮ್ಮ ಹಕ್ಕು, ನಮ್ಮ ಸ್ವಾಭಿಮಾನ, ದೇಶಕ ಏಕತೆ, ಸಾರ್ವಭೌಮತ್ವಕ್ಕೆ ಮೀಸಲಾದುದುದು ಸಂವಿಧಾನ, ಅದನ್ನ ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂದರು.

ಪ್ರಸ್ತುತ ದಿನಗಳಲ್ಲಿ ಸಂವಿಧಾನದ ಮೇಲೆ ಕೋಮುವಾದಿಗಳು, ಮತೀಯರು ಕಾಲಕಾಲಕ್ಕೆ ಸವಾರಿ ಮಾಡುತ್ತ ಪ್ರಜಾಪ್ರಭುತ್ವ ಅಳಿಸಿ ಹಾಕುವ ಪ್ರಯತ್ನಕ್ಕೆ ಕೈಹಾಕಿದ್ದಾರೆ, ಅಂಬೇಡ್ಕರ್ ವಾದಿಗಳ ಜೊತೆ ನಕಲಿ ಅಂಬೇಡ್ಕರ್ ವಾದಿಗಳಿದ್ದಾರೆ. ಈ ಹಿನ್ನೆಲೆ ನಾವೆಲ್ಲರೂ ಅಂತಹವರ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದರು.

ದಲಿತ ಸಮಾಜ ಕ್ಷುಲ್ಲಕ ವಿಚಾರಗಳಿಗಾಗಿ ಗುಂಪು, ಗುಂಪುಗಳಾಗಿ ಪರಿವರ್ತನೆಯಾದರೆ ಶಾಶ್ವತವಾಗಿ ವಿಭಜನೆಯಾಗುತ್ತೀರಿ, ಇದನ್ನರಿತು ಮುಂದೆ ಸಾಗಬೇಕು ಎಂದರು.

ಅಂಬೇಡ್ಕರ್ ಅವರು ಸರ್ವಾಧಿಕಾರಿ ದೋರಣೆ ಸಹಿಸುತ್ತಿರಲಿಲ್ಲ, ಫೋಟೋ ಪೂಜೆ ವಿರೋದಿಸುತ್ತಿದ್ದರು. ನಮ್ಮ ದೇಶಕ್ಕೆ ಪ್ರಜಾಪ್ರಭುತ್ವ ಬೇಕು ಎಂಬುದನ್ನು ನಿರ್ಧರಿಸಿ ಮಹಾನ್ ಪವಿತ್ರ ಗ್ರಂಥವನ್ನು ದೇಶಕ್ಕೆ ಕೊಡುಗೆ ನೀಡಿದರು. ತುಳಿತಕ್ಕೊಳಗಾದವರ ಮೇಲೆತ್ತಿದ್ದ ಕೀರ್ತಿ ಬಾಬಾ ಸಾಹೇಬರದ್ದು, ಇಂದು ನಾವೆಲ್ಲರೂ ಅಂಬೇಡ್ಕರ್ ವಾದಿಗಳ ಒಳಗೆ ಸುಳ್ಳು ಅಂಬೇಡ್ಕರ್‌ವಾದಿಗಳ ಬಗ್ಗೆ ಜಾಗೃತಿ ವಹಿಸುವ ಅಗತ್ಯವಿದೆ ಎಂದರು.

ಬಾಬಾ ಸಾಹೇಬರ ಚರಿತ್ರೆ ಓದಿದರೆ ಅವರು ದೇಶ ಪ್ರೇಮದ ಪ್ರತೀಕ ಎಂಬುದು ವೇದ್ಯವಾಗಲಿದೆ. ಅವರು ಯಾರನ್ನು ದ್ವೇಷಿಸಿದವರೂ ಅಲ್ಲ, ವಿರೋಧಿಸಿದವರೂ ಅಲ್ಲ, ಸೇಡಿನ ಮನೋಭಾವ ಇರಲಿಲ್ಲ, ಭಾರತ ದೇಶ ವೈವಿಧ್ಯತೆಯಲ್ಲಿ ಏಕತೆಯ ದೇಶ ಎಂಬುದನ್ನ ಮನಗಂಡು ಸಂವಿಧಾನ ಕೊಡುಗೆ ನೀಡಿದ್ದಾರೆ. ಅದನ್ನ ಸಂರಕ್ಷಿಸುವ ಗುರುತರ ಹೊಣೆ ನಾವೆಲ್ಲರೂ ಅರಿಯಬೇಕು ಎಂದರು

ಈ ಸಂದರ್ಭದಲ್ಲಿ ಎರಡನೇ ಬಾರಿಗೆ ಮುಖ್ಯಮಂತ್ರಿ ಪದಕ ಪಡೆದಿರುವ ಬೆಂಗಳೂರಿನ ಸಿಸಿಬಿ ಪೊಲೀಸ್ ಆಯುಕ್ತರು ಹೆಚ್.ಕೆ.ಮಹಾನಂದ, ವೈದ್ಯಕೀಯ ಪ್ರವೇಶ ಪಡೆದ ಆರು ವಿದ್ಯಾರ್ಥಿಗಳು, ಪಿಯುಸಿ ಮತ್ತು ಎಸ್ಎಸ್ಎಲ್‌ಸಿ ಮಕ್ಕಳು, ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದ ಮಕ್ಕಳು, ಸರ್ಕಾರಿ ನೌಕರರುಗಳಿಗೆ ಅಭಿನಂದನೆ ಸಲ್ಲಿಸಲಾಯಿತು.

ಈ ವೇಳೆ ಶಾಸಕ ಎ.ಆರ್.ಕೃಷ್ಣಮೂರ್ತಿ, ಟಿ.ಎನ್.ಪುರ ತಾಲೂಕಿನ ನಳಂದ ಬುದ್ಧ ವಿಹಾರ ಬೌದ್ಧರತ್ನ ಬಂತೇಜಿ, ಅಪರ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ಧರ್ಮೇಂದ್ರ, ಯಜಮಾನ ಬಸವಣ್ಣ, ದೊರೆರಾಜು, ನಂಜಯ್ಯ, ಪ್ರೇಮ್ ಕುಮಾರ್, ಕೃಷ್ಣಮೂರ್ತಿ, ಶಿವಕುಮಾರ್, ವಿಜಯರಾಜ್, ನಂಜುಂಡಸ್ವಾಮಿ, ನಂಜಯ್ಯ, ನೌಕರರ ಸಂಘದ ಆನಂದರಾಜು, ನರೇಂದ್ರನಾಥ್, ಪ್ರೇಮಕುಮಾರ್, ಕನಕರಾಜ್, ಜಿಪಂ ಮಾಜಿ ಸದಸ್ಯ ಮುಳ್ಳೂರು ಕಮಲ್ ನಾಗರಾಜು, ಶಿವಮಲ್ಲು ಇನ್ನಿತರರಿದ್ದರು.



ಮುಖ್ಯಮಂತ್ರಿಗಳ ಪದಕ ಪಡೆದಿರುವ ಬೆಂಗಳೂರಿನ ಸಿಸಿಬಿಯ ಎಸಿಪಿ ಹೆಚ್.ಕೆ.ಮಹಾನಂದ ಅವರನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತಿತರ ಗಣ್ಯರು ಸನ್ಮಾನಿಸಿದರು.

ಪ್ರತಿಭೆ ಗುರುತಿಸಿ ಹೊರತರುವುದೇ ನಿಜವಾದ ಕಲಿಕೆ

ಚಾಮರಾಜನಗರ: ಮಕ್ಕಳಲ್ಲಿರುವ ಸುಪ್ತಪ್ರತಿಭೆಯನ್ನು ಗುರುತಿಸಿ ಹೊರತರಲು ಬೇಸಿಗೆ ಶಿಬಿರಗಳು ಪೂರಕ ವಾಗಿವೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಮಹದೇವಸ್ವಾಮಿ ಹೇಳಿದರು.

ನಗರದ ನ್ಯಾಯಾಲಯದ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಕಚೇರಿಯಲ್ಲಿ ಪವನ್‌ಸೇವಾ ಟ್ರಸ್ಟ್ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಲ್‌ಕೆಜಿಯಿಂದ 8ನೇ ತರಗತಿ ಮಕ್ಕಳಿಗಾಗಿ 7 ದಿನಗಳ ಕಾಲ ಹಮ್ಮಿಕೊಂಡಿರುವ ಚಿತ್ರಕಲಾ ಬೇಸಿಗೆ ಶಿಬಿರಕ್ಕೆ ಅವರು ಚಾಲನೆ ನೀಡಿ ಮಾತನಾಡಿದರು. ಪಠ್ಯ ದಷ್ಟೆ, ಪಠ್ಯೇತರ ಚಟುವಟಿಕೆಗಳಿಗೆ, ಮಕ್ಕಳ ಕಲಿಕೆಗೆ ಸರ್ಕಾರ ಬಹಳಷ್ಟು ಒತ್ತು ನೀಡಿದೆ. ಪುಸ್ತಕ ಓದುವುದಷ್ಟೆ ಓದು ಅಲ್ಲ. ಪುಸ್ತಕ ಓದುವ ಜೊತೆ ಯಲ್ಲಿ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಹೊರತರುವುದು ನಿಜವಾದ ಕಲಿಕೆಯಾಗಿದೆ ಆ ನಿಟ್ಟಿನಲ್ಲಿ ಇಂತಹ ಬೇಸಿಗೆ ಶಿಬಿರಗಳು ಉಪಯುಕ್ತವಾಗಿವೆ ಎಂದರು.

ಪವನ್ ಸೇವಾ ಸಂಸ್ಥೆಯು ಬಹಳ ವರ್ಷಗಳಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ಸುಮಾರು ವರ್ಷಗಳಿಂದ ಆಯೋಜನೆ ಮಾಡಿಕೊಂಡು ಬರುತ್ತಿದ್ದಾರೆ. ಮತ್ತಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಲಿ ಅವರ ಜೊತೆ ಸದಾ ಕರ್ನಾಟಕ ಸರ್ಕಾರಿ ನೌಕರರ ಸಂಘ, ಶಿಕ್ಷಕರ ಸಂಘ ಇರುತ್ತದೆ ಎಂದರು.

ಅಂತಾರಾಷ್ಟ್ರೀಯ ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ ಮಾತನಾಡಿ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬೇಸಿಗೆ ಶಿಬಿರ ಸಹಕಾರಿಯಾಗಿದ್ದು, ಆತ್ಮವಿಶ್ವಾಸ, ಕೌಶಲ್ಯಾಭಿವೃದ್ಧಿ, ಆಕರ್ಷಕ ಚಿತ್ರ ಬರೆಸುವಿಕೆ ಹಾಗೂ ಮಕ್ಕಳಲ್ಲಿರುವ ಸುಪ್ತಪ್ರತಿಭೆ ಹೆಚ್ಚು ಮಾಡಲು ಇಂತಹ ಶಿಬಿರ ನೆರವಾಗಲಿದ್ದು, ಮಕ್ಕಳಿಗೆ ಆಸಕ್ತಿಯಿರುವ ಕ್ಷೇತ್ರದಲ್ಲಿ ಪೋಷಕರು ಅವಕಾಶ ಮಾಡಿಕೊಟ್ಟರೆ ಅಂತಹ ಕ್ಷೇತ್ರದಲ್ಲಿ ದೊಡ್ಡಮಟ್ಟದಲ್ಲಿ ಮಕ್ಕಳು ಬೆಳೆಯಲು ಸಾಧ್ಯವಾಗುತ್ತದೆ ಎಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭರತ್ ಭೂಷಣ, ಜಿಲ್ಲಾ ಖಜಾಂಚಿ ಶಿವಕುಮಾರಯ್ಯ, ಹಿರಿಯ ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ, ನಿರ್ದೇಶಕ ಶಾಂತರಾಜು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಶಿಬಿರದ ಆಯೋಜಕ ಸಿ.ಎನ್.ಸಂಪತ್ ಕುಮಾರ್, ಪವನ್ ಸೇವಾ ಟ್ರಸ್ಟ್ ಕಾರ್ಯದರ್ಶಿ ವೀಣಾ ಸಂಪತ್‌ಕುಮಾರ್, ಕಲಾವಿದರಾದ ಎನ್.ಅನಿಲ್ ಕುಮಾರ್, ರವಿತೇಜ್, ಗೌಸ್, ರಾಜೇಶ್, ಸಮಾಜ ಕಲ್ಯಾಣ ಇಲಾಖೆಯ ಸಿ.ಎ.ರಾಜು, ಶಿಕ್ಷಕರಾದ ಇಂದಿರಾ, ಕಾವೇರಿ, ಜೈತ್ರಾ, ಜಯಶಂಕರ್, ಪೋಷಕರು, ವಿದ್ಯಾರ್ಥಿಗಳು ಇತರರು ಭಾಗವಹಿಸಿದ್ದರು.



ಚಿತ್ರಕಲಾ ಬೇಸಿಗೆ ಶಿಬಿರಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷೆ ಮಹದೇವಸ್ವಾಮಿ ಚಾಲನೆ ನೀಡಿದರು.

ಗುಂಡ್ಲುಪೇಟೆ ತಾಲೂಕಿನಲ್ಲಿ ಶೇ.94ರಷ್ಟು ಫಲಿತಾಂಶ



ಆರ್.ಪ್ರತಿಭಾ

ಗುಂಡ್ಲುಪೇಟೆ ಏ.27– ತಾಲೂಕಿನ ಸರಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಿಗೆ 2025–ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.94.17 ಫಲಿತಾಂಶ ಬಂದಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ ತಿಳಿಸಿದ್ದಾರೆ.

ತಾಲೂಕಿನಲ್ಲಿ ಸರಕಾರಿ–20, ಸರಕಾರಿ ವಸತಿ–6, ಅನುದಾನಿತ–14 ಮತ್ತು ಅನುದಾನ ರಹಿತ–10 ಒಟ್ಟು 50 ಪ್ರೌಢಶಾಲೆಗಳಿದ್ದು, ಪ್ರಸಕ್ತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಗೆ 2197 ವಿದ್ಯಾರ್ಥಿಗಳು ಹಾಜರಾಗಿದ್ದರು. ಈ ಪೈಕಿ 2069 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ 94.17 ಫಲಿತಾಂಶ ಬಂದಿದೆ.

ತಾಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ವಿವರ: ಗುಂಡ್ಲು ಪೇಟೆಯ ಸರಕಾರಿ ಆದರ್ಶ ವಿದ್ಯಾಲಯ ಆರ್. ಪ್ರತಿಭಾ–618, ಬೇಗೂರಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಬಿ.ಎಂ.ಅಪೂರ್ವ–616, ಗುಂಡ್ಲುಪೇಟೆಯ ಸರಕಾರಿ ಆದರ್ಶ ವಿದ್ಯಾಲಯದ ಆರ್.ಗೀತಾ–614, ಗುಂಡ್ಲುಪೇಟೆ ಸರಕಾರಿ ಆದರ್ಶ ವಿದ್ಯಾಲಯದ ಬಿ.ಎಂ.ಮೈತ್ರಿ–614, ಗುಂಡ್ಲುಪೇಟೆ ಸೆಂಟ್ ಜಾನ್ ಶಾಲೆಯ ಕೆ.ಬಿ.ಕಿಶನ್–614 ಪಡೆದಿದ್ದಾರೆ.

ರಾಜ್ಯ ಒಕ್ಕಲಿಗರ ಸಂಘದಲ್ಲಿ ಚಾ.ನಗರ ಜಿಲ್ಲೆಗೆ ಪ್ರತ್ಯೇಕ ನಿರ್ದೇಶಕ ಸ್ಥಾನ ನೀಡಲು ರಾಜ್ಯಾಧ್ಯಕ್ಷರಿಗೆ ಮನವಿ

ಚಾಮರಾಜನಗರ: ರಾಜ್ಯ ಒಕ್ಕಲಿಗರ ಸಂಘದಲ್ಲಿ ಚಾಮರಾಜನಗರ ಜಿಲ್ಲೆಗೆ ಪ್ರತ್ಯೇಕ ನಿರ್ದೇಶಕ ಸ್ಥಾನ ನೀಡಬೇಕೆಂದು ಸಂಘದ ರಾಜ್ಯಾಧ್ಯಕ್ಷ ಎಲ್.ಶ್ರೀನಿವಾಸ ಅವರಿಗೆ ಬೆಂಗಳೂರಿನಲ್ಲಿ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ ಸಂಸ್ಥೆಗಳ ಮುಖಂಡರು ಹಾಗೂ ರಾಜ್ಯ ಒಕ್ಕಲಿಗರ ಸಂಘದ ಸದಸ್ಯರು ಮನವಿ ಸಲ್ಲಿಸಿದರು.

ಗಡಿ ಜಿಲ್ಲೆಯಾದ ಚಾಮರಾಜನಗರ ಜಿಲ್ಲೆಯು ಈ ಹಿಂದೆ ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿತ್ತು, ಚಾಮರಾಜನಗರ ಜಿಲ್ಲೆಯ ರಾಜ್ಯ ಒಕ್ಕಲಿಗರ ಸಂಘದ ಸದಸ್ಯರಾದ ನಾವು ಮೈಸೂರು ಜಿಲ್ಲೆಯ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರುಗಳಿಗೆ ಮತವನ್ನು ಹಾಕಿಕೊಂಡು ಬಂದಿರುತ್ತೇವೆ. ಈಗ ನಮ್ಮ ಚಾಮರಾಜನಗರ ಜಿಲ್ಲೆಯಾಗಿ ಸುಮಾರು 30 ವರ್ಷ ಕಳೆಯುತ್ತಿದೆ. ನಮ್ಮ ಜಿಲ್ಲೆಯಲ್ಲಿ ಸಾವಿರಾರು ಮತದಾರರು ರಾಜ್ಯ ಒಕ್ಕಲಿಗರ ಸದಸ್ಯತ್ವವನ್ನು ಪಡೆದಿದ್ದಾರೆ. ಈ ಭಾಗದಲ್ಲಿ ನಮ್ಮ ಸಮುದಾಯದ ಬಹಳಷ್ಟು ಕೆಲಸ ಕಾರ್ಯಗಳು ಆಗಬೇಕಾಗಿರುವುದರಿಂದ ನಮ್ಮ ಜಿಲ್ಲೆಗೆ ಪ್ರತ್ಯೇಕ ನಿರ್ದೇಶಕ ಸ್ಥಾನದ ಅವಶ್ಯಕತೆ ಇದೆ ಎಂದಿದ್ದಾರೆ. ನೂತನವಾಗಿ ರಚನೆಯಾದ ಜಿಲ್ಲೆಗಳಿಗೆ ರಾಜ್ಯ ಒಕ್ಕಲಿಗರ ಸಂಘದಲ್ಲಿ ನಿರ್ದೇಶಕ ಸ್ಥಾನ ಮಾನವನ್ನು ನೀಡಿರುವ ರೀತಿಯಲ್ಲಿ ನಮ್ಮ ಚಾಮರಾಜನಗರ ಜಿಲ್ಲೆಗೂ ಸಹ ನಿರ್ದೇಶಕ ಸ್ಥಾನವನ್ನು ನೀಡಬೇಕು. ಮುಂದೆ ನಡೆಯಲಿರುವ ರಾಜ್ಯ ಒಕ್ಕಲಿಗರ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ನಮ್ಮ ಜಿಲ್ಲೆಗೆ ನಿರ್ದೇಶಕ ಸ್ಥಾನವನ್ನು ನೀಡಬೇಕೆಂದು ಸಂಘದ ರಾಜ್ಯಾಧ್ಯಕ್ಷರಿಗೆ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ಸೇನಾ ಪಡೆ ರಾಜ್ಯಾಧ್ಯಕ್ಷ ಚಾ.ರಂ. ಶ್ರೀನಿವಾಸ್ ಗೌಡ, ಕರಿಯನಕಟ್ಟೆ ಚಿನ್ನಮುತ್ತು ಪಣ್ಯದಹುಂಡಿ ರಾಜು, ಮಹೇಶ್ ಗೌಡ, ಟೌನ್ ಸಂಘದ ಅಧ್ಯಕ್ಷ ಮಹೇಶ್, ದೊಡ್ಡರಪೇಟೆ ನಾಗೇಂದ್ರ ಅರುಣ್ ಕುಮಾರ್ ಗೌಡ, ಹೊಮ್ಮ ಲೋಕೇಶ್ ಹಾಜರಿದ್ದರು.



ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳಿಗೆ ಮನವಿ ಸಲ್ಲಿಸುತ್ತಿರುವುದು.

ಮೈಸೂರು ಮಿತ್ರ

7 ಆಪ್ ಸಂಸದರು ಬಿಜೆಪಿ ಜೊತೆ ವಿಲೀನ: ರಾಜ್ಯಸಭಾಧ್ಯಕ್ಷರಿಂದ ಅಂಗೀಕಾರ



ನವದೆಹಲಿ: ರಾಜ್ಯಸಭೆಯಲ್ಲಿ ಮಹತ್ವದ ಬದಲಾವಣೆಯೊಂದರಲ್ಲಿ, ರಾಜ್ಯಸಭಾಧ್ಯಕ್ಷರೂ ಆದ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಆಮ್ ಆದ್ಮಿ ಪಕ್ಷದ ಏಳು ಸಂಸದರು ಭಾರತೀಯ ಜನತಾ ಪಕ್ಷದಲ್ಲಿ ಜೊತೆ ವಿಲೀನಗೊಂಡಿರುವುದನ್ನು ಅಧಿಕೃತವಾಗಿ ಅನುಮೋದಿಸಿದ್ದಾರೆ. ಇಂದು ಸೋಮವಾರ ಪ್ರಕಟವಾದ ಈ ನಿರ್ಧಾರ ದಿಂದ ರಾಜ್ಯಸಭೆಯಲ್ಲಿ ಆಪ್ ಬಲವು 10ರಿಂದ 3ಕ್ಕೆ ಇಳಿದಿದ್ದು, ಬಿಜೆಪಿಯ ಸದಸ್ಯರ ಸಂಖ್ಯೆ 113ಕ್ಕೆ ಏರಿಕೆಯಾಗಿದೆ.

ರಾಘವ್ ಚಡ್ಡಾ, ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಇತರರು ಇತ್ತೀಚೆಗೆ ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಭೇಟಿಯಾಗಿ ಪಕ್ಷ ಪ್ರವೇಶವನ್ನು ಅಧಿಕೃತಗೊಳಿಸಿದ್ದರು. ಈ ಗುಂಪಿನಲ್ಲಿ ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್, ಸ್ವಾತಿ ಮಾಲಿವಾಲ್, ವಿಕ್ರಮ್‌ಜಿತ್ ಸಿಂಗ್ ಸಾಹ್ನೆ ಮತ್ತು ರಾಜೆಂದರ್ ಗುಪ್ತಾ ಕೂಡ ಸೇರಿದ್ದಾರೆ. ಪಕ್ಷದ ಮೂಲ ಭ್ರಷ್ಟಾಚಾರ ವಿರೋಧಿ ತತ್ವಗಳಿಂದ ದೂರವಾಗಿರುವುದು ಹಾಗೂ ಆಪ್‌ನಲ್ಲಿ ಉಸಿರುಗಟ್ಟುವ ರೀತಿಯ ಪರಿಸ್ಥಿತಿಯಿಂದ ಪಕ್ಷ ತೊರೆದಿದ್ದೇವೆ ಎಂದು ಹೇಳಿದರು.

ಈ ಏಳು ಸದಸ್ಯರು ಸೇರಿ ಸಂವಿಧಾನದ 10ನೇ ಅನುಸೂಚಿಯ ಪ್ರಕಾರ ಅಗತ್ಯವಾದ ಮೂರನೇ ಎರಡು ಪ್ರಮಾಣವನ್ನು ಪೂರೈಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ಇದರಿಂದ ವಿರೋಧ ಪಕ್ಷ ತೊರೆದ ಕಾರಣಕ್ಕೆ ಅನರ್ಹತೆಯಿಂದ ತಪ್ಪಿಸಿಕೊಳ್ಳಬಹುದು.

ಇದಕ್ಕೆ ಆಪ್ ಪ್ರತಿಯಾಗಿ, ರಾಜ್ಯಸಭಾಧ್ಯಕ್ಷರ ಮುಂದೆ ಈ ಏಳು ಸಂಸದರನ್ನು ತಕ್ಷಣವೇ ಅನರ್ಹಗೊಳಿಸುವಂತೆ ಮನವಿ ಸಲ್ಲಿಸಿದೆ. ಹಿರಿಯ ನಾಯಕ ಸಂಜಯ್ ಸಿಂಗ್ ಈ ವಿಲೀನವನ್ನು "ಸಂವಿಧಾನಿಕ ವಂಚನೆ" ಮತ್ತು "ಪಂಜಾಬ್ ಜನರ ಆದೇಶಕ್ಕೆ ದ್ರೋಹ" ಎಂದು ಆರೋಪಿಸಿದ್ದಾರೆ. ಬಿಜೆಪಿ ಕೇಂದ್ರ ಸಂಸ್ಥೆಗಳನ್ನು ಬಳಸಿಕೊಂಡು ಸಂಸದರನ್ನು ಒತ್ತಡಕ್ಕೆ ಒಳಪಡಿಸಿದೆ ಹೇಳಿದರು. 245 ಸದಸ್ಯರ ರಾಜ್ಯಸಭೆಯ ಬಿಜೆಪಿ ಸದಸ್ಯರ ಸಂಖ್ಯೆ 113ಕ್ಕೆ ಏರಿಕೆಯಾಗಿದೆ. ಎನ್‌ಡಿಎ ಒಕ್ಕೂಟದ ಒಟ್ಟು ಬಲ 141ಕ್ಕೆ ತಲುಪಿದೆ. ಇದರಿಂದ ಸರ್ಕಾರಕ್ಕೆ ಸರಳ ಬಹುಮತ ದತ್ತ ಮಹತ್ವದ ಮುನ್ನಡೆ ದೊರೆತಿದೆ.

ಆರ್‌ಸಿಬಿ 'ಜೋಶ್'ಗೆ ಕಂಗೆಟ್ಟ ಡೆಲ್ಲಿ ಕ್ಯಾಪಿಟಲ್ಸ್



ದೆಹಲಿ, ಏ.27– ಭುವನೇಶ್ವರ್ ಕುಮಾರ್ ಹಾಗೂ ಜೋಶ್ ಹೇಜಲ್‌ವುಡ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಆರ್‌ಸಿಬಿ ಆಡಿರುವ 8 ಪಂದ್ಯಗಳ ಪೈಕಿ 6 ಜಯ, 2 ಸೋಲಿನೊಂದಿಗೆ 12 ಅಂಕ ಗಳಿಸಿ ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿ ಮುಂದುವರೆದಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ 16.3 ಓವರ್‌ಗಳಲ್ಲಿ ಕೇವಲ 75 ರನ್‌ಗಳಿಗೆ ಆಲೌಟಾಯಿತು. ನಂತರ ಗುರಿ ಬೆನ್ನತ್ತಿದ ಆರ್‌ಸಿಬಿ 6.3 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 77 ರನ್ ಗಳಿಸುವ ಮೂಲಕ ಇನ್ನೂ 81 ಎಸೆತಗಳು ಬಾಕಿ ಇರುವಾಗಲೇ ಹೀನಾಯವಾಗಿ ಸೋಲಿಸಿ, ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅನುಭವಿಸಿದ್ದ ಸೋಲಿನ ಸೇಡು ತೀರಿಸಿಕೊಂಡಿತು.

ಡೆಲ್ಲಿ ನೀಡಿದ ಸುಲಭ ಗೆಲುವಿನ ಗುರಿ ಬೆನ್ನತ್ತಿದ ಆರ್‌ಸಿಬಿ ಪರ ಆರಂಭಿಕ ಆಟಗಾರ ಜಾಕೋಬ್ ಬೆಥೆಲ್ ಆರಂಭದಲ್ಲೇ ಅಬ್ಬರಿಸಿದರು. 11 ಎಸೆತಗಳಲ್ಲಿ 2 ಸಿಕ್ಸರ್, 1 ಬೌಂಡರಿ ಒಳಗೊಂಡ ಬಿರುಸಿನ 20 ರನ್ ಗಳಿಸಿ ಕೈಲ್ ಜೇಮಿಸನ್ ಬೌಲಿಂಗ್‌ನಲ್ಲಿ ನಟರಾಜನ್ ಹಿಡಿದ ಅಮೋಘ ಕ್ಯಾಚ್‌ಗೆ ಬಲಿಯಾದರು. ನಂತರ ಕೊಹ್ಲಿ ಜೊತೆಗೂಡಿದ ಕನ್ನಡಿಗ ದೇವದತ್ ಪಡಿಕ್ಕಲ್ ತಮ್ಮ ಬ್ಯಾಟಿಂಗ್ ಲಯವನ್ನು ಮುಂದುವರೆಸಿದರು. ಈ ಜೋಡಿ 2ನೇ ವಿಕೆಟ್‌ಗೆ 51 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ವಿರಾಟ್ ಕೊಹ್ಲಿ 15 ಎಸೆತಗಳಲ್ಲಿ 2 ಸಿಕ್ಸರ್, 1 ಬೌಂಡರಿ ಒಳಗೊಂಡ ಅಜೇಯ 23 ಹಾಗೂ ದೇವದತ್ ಪಡಿಕ್ಕಲ್ 13 ಎಸೆತಗಳಲ್ಲಿ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ ಅಜೇಯ 34 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ಡೆಲ್ಲಿ ಪರ ಕೈಲ್ ಜೇಮಿಸನ್ 1 ವಿಕೆಟ್ ಪಡೆದುಕೊಂಡರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ಆರ್‌ಸಿಬಿಯ ಜೋಶ್ ಹೇಜಲ್‌ವುಡ್, ಭುವನೇಶ್ವರ್ ಮಾರಕ ಬೌಲಿಂಗ್‌ಗೆ ತತ್ತರಿಸಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಇನ್ನಿಂಗ್ಸ್‌ನ ಮೊದಲ ಓವರ್‌ನ 2ನೇ ಎಸೆತದಲ್ಲಿ ಭುವನೇಶ್ವರ್ ಕುಮಾರ್ ಸಾಹಿಲ್ ಪಾರಖ್ ವಿಕೆಟ್ ಪಡೆದು ಸಂಭ್ರಮಿಸಿದರು. 2ನೇ ಓವರ್‌ನ ಮೊದಲೆರಡು ಎಸೆತದಲ್ಲಿ ಕೆ.ಎಲ್.ರಾಹುಲ್, ಸಮೀರ್ ರಿಜ್ವಿ ಅವರನ್ನು ಪೆವಿಲಿಯನ್‌ಗೆ ಅಟ್ಟುವ ಮೂಲಕ ಹೇಜಲ್‌ವುಡ್ ಅಬ್ಬರಿಸಿದರು. ಅಲ್ಲದೇ ತರಗೆಲೆಯಂತೆ ವಿಕೆಟ್ ಕಳೆದುಕೊಂಡ ಡೆಲ್ಲಿ 9 ರನ್‌ಗೆ 6 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ನಂತರ ಬಂದ ಡೇವಿಡ್ ಮಿಲ್ಲರ್ 19, ಅಭಿಷೇಕ್ ಪೊರೆಲ್ 30, ಕೈಲ್ ಜೇಮಿಸನ್ 12 ರನ್ ಗಳಿಸಿದರಾದರೂ ಬೃಹತ್ ಮೊತ್ತ ದಾಖಲಿಸಲು ಸಾಧ್ಯವಾಗದೇ ವಿಕೆಟ್ ಒಪ್ಪಿಸಿದರು.

ಆರ್‌ಸಿಬಿ ಪರ ಜೋಶ್ ಹೇಜಲ್‌ವುಡ್ 4, ಭುವನೇಶ್ವರ್ ಕುಮಾರ್ 3, ರಸಿಕ್ ಸಲಾಂ, ಸುಯೇಶ್ ಶರ್ಮಾ ಹಾಗೂ ಕೃನಾಲ್ ಪಾಂಡ್ಯ ತಲಾ 1 ವಿಕೆಟ್ ಪಡೆದರು. ಉತ್ತಮ ಬೌಲಿಂಗ್ ದಾಳಿ ನಡೆಸಿದ ಜೋಶ್ ಹೇಜಲ್‌ವುಡ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

9 ಸಾವಿರ ರನ್ ದಾಖಲಿಸಿದ ಕೊಹ್ಲಿ



ದೆಹಲಿ: ಐಪಿಎಲ್ ಇತಿಹಾಸದಲ್ಲೇ 9 ಸಾವಿರ ರನ್ ದಾಖಲಿಸಿದ ಮೊದಲ ಕ್ರಿಕೆಟಿಗ ಎಂಬ ದಾಖಲೆಗೆ ರನ್ ಮಿಷನ್ ಖ್ಯಾತಿಯ ವಿರಾಟ್ ಕೊಹ್ಲಿ ಭಾಜನರಾಗಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯಕ್ಕೂ ಮುನ್ನ, ಈ ದಾಖಲೆ ನಿರ್ಮಿಸಲು ಕೊಹ್ಲಿಗೆ 11 ರನ್‌ಗಳ ಅಗತ್ಯವಿತ್ತು. ಅದರಂತೆ ಬ್ಯಾಟ್ ಬೀಸಿದ ಕೊಹ್ಲಿ ಕೇವಲ 12 ಎಸೆತಗಳಲ್ಲಿ 11 ರನ್ ಗಳಿಸಿ 9000 ರನ್‌ಗಳ ಮೈಲಿಗಲ್ಲು ಸಾಧಿಸಿದರು. ಅವರ ನಂತರ ರೋಹಿತ್ ಶರ್ಮಾ 7183 ರನ್ ಗಳಿಸಿ 2ನೇ ಸ್ಥಾನದಲ್ಲಿದ್ದಾರೆ.

ಎಚ್.ವಿಶ್ವನಾಥ್‌ಗೆ ಅರಳು ಮರಳು, ಕ್ಷಮಿಸಿಬಿಡೋಣ

ಸಚಿವ ಮಧು ಬಂಗಾರಪ್ಪ ವ್ಯಂಗ್ಯೋಕ್ತಿ



ಶಿವಮೊಗ್ಗ: ಪರೀಕ್ಷಾ ಕೇಂದ್ರದಲ್ಲಿ ವೆಬ್‌ಕ್ಯಾಸ್ಟಿಂಗ್ ಸ್ಥಗಿತಗೊಳಿಸಿ ಕಾಪಿ ಹೊಡೆಸುವ ಮೂಲಕ ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಈ ಬಾರಿ ದಾಖಲೆಯ ಫಲಿತಾಂಶ ಪಡೆಯಲಾಗಿದೆ ಎಂದು ಮಾಜಿ ಸಚಿವ ಎಚ್. ವಿಶ್ವನಾಥ್ ಆರೋಪಿಸಿದ್ದಾರೆ. ಅವರ ಈ ಹೇಳಿಕೆ ನಾಡಿನ ಮಕ್ಕಳು ಶೈಕ್ಷಣಿಕ ಸಾಧನೆ ಒಪ್ಪಲಾಗದೇ ಮಾಡಿರುವ ಉದ್ದೇಶಪೂರ್ವಕ ಅಪಮಾನ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಕಿಡಿಕಾರಿದರು.

ಎಚ್.ವಿಶ್ವನಾಥ್ ಅವರಿಗೆ ವಯಸ್ಸಾಗಿದೆ. ಅವರು ಮಕ್ಕಳು ಇದ್ದಂತೆ. ಹೀಗಾಗಿ ಏನೇನೊ ಬಡಬಡಿಸುತ್ತಾರೆ. ಅದನ್ನು ಅರಳುಮರಳು ಎಂದು ಹೇಳಲಾಗುವುದಿಲ್ಲ. ಅವರ ವಯಸ್ಸಿಗೆ ಬೆಲೆ ಕೊಟ್ಟು ಕ್ಷಮಿಸಿ ಬಿಡೋಣ ಎಂದು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇಡೀ ದೇಶದಲ್ಲಿ ಮೊದಲ ಬಾರಿಗೆ ಪರೀಕ್ಷಾ ಕೊಠಡಿಯಲ್ಲಿ ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ ಜಾರಿಗೊಳಿಸಿದ್ದೇ ಮಧು ಬಂಗಾರಪ್ಪ. ಹಾಗಿದ್ದ ಮೇಲೆ ಕ್ಯಾಮರಾ ಹಾಕಿ ಕಾಪಿ ಹೊಡೆಸಲು ಸಾಧ್ಯವೇ? ಎಂದು ಪ್ರಶ್ನಿಸಿದ ಅವರು, 'ಪರೀಕ್ಷಾ ಕೊಠಡಿಯಲ್ಲಿ ವೆಬ್‌ಕ್ಯಾಸ್ಟಿಂಗ್ ಕರ್ನಾಟಕದ್ದು ಮಾದರಿ ವ್ಯವಸ್ಥೆ. ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಕೂಡ ನಮ್ಮ ಬಳಿಯೇ ವರದಿ ಪಡೆದು ವೆಬ್ ಕ್ಯಾಸ್ಟಿಂಗ್ ಹಾಗೂ ಎರಡು ಬಾರಿ ಪರೀಕ್ಷೆ ನಡೆಸುವ ವ್ಯವಸ್ಥೆ ಅಳವಡಿಸಿ ಕೊಂಡಿದೆ' ಎಂದು ಹೇಳಿದರು.

'ಎಚ್.ವಿಶ್ವನಾಥ್ ನನ್ನ ಶಿಕ್ಷಣದ ಪ್ರಮಾಣಪತ್ರ ಕೇಳಿದ್ದಾರೆ. ಬಿಜೆಪಿ, ಕಾಂಗ್ರೆಸ್ ಎಲ್ಲಿಯೂ ಸಲ್ಲದೇ ದಿಕ್ಕು ದೆಸೆ ಇಲ್ಲದಂತಾಗಿರುವ ವಿಶ್ವನಾಥ್ ಅವರಿಗೆ ನಾನೇ ಸರ್ಟಿಫಿಕೇಟ್ ಕಳಿಸಿಕೊಡುವೆ' ಎಂದು ಛೇಡಿಸಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತೇರ್ಗಡೆ ಅಂಕವನ್ನು 35ರಿಂದ 33ಕ್ಕೆ ಇಳಿಸಿದ್ದರ ಬಗ್ಗೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕೆ ಮಾಡಿದ್ದಾರೆ.

ಈ ಬಾರಿ ಶೇ 33ಕ್ಕೆ ತೇರ್ಗಡೆ ಅಂಕ ನಿಗದಿಗೊಳಿಸಿದ್ದರಿಂದ ಉತ್ತೀರ್ಣರಾದ ಮಕ್ಕಳ ಸಂಖ್ಯೆ ಪರೀಕ್ಷಾ ಫಲಿತಾಂಶದ ಶೇ 0.14 ಮಾತ್ರ. ವಾಸ್ತವವಾಗಿ ತೇರ್ಗಡೆ ಅಂಕವನ್ನು ಕೇಂದ್ರ ಸರ್ಕಾರದ ನಿಯಮಾವಳಿಯಂತೆ ಅಳವಡಿಸಿದ್ದೇವೆ. ಕೇರಳದಲ್ಲಿ 30 ಅಂಕ ಪಡೆದರೆ ತೇರ್ಗಡೆ ಯಾಗುತ್ತಾರೆ. ಅದು ಬಸವರಾಜ ಬೊಮ್ಮಾಯಿ ಅವರಿಗೆ ಗೊತ್ತಿಲ್ಲವೇ ಎಂದು ಪ್ರಶ್ನಿಸಿದರು.

ಶಿಗ್ಗಾವಿಯಲ್ಲಿ ತಮ್ಮ ಮಗನನ್ನು ವಿಧಾನಸಭೆ ಚುನಾವಣೆಗೆ ನಿಲ್ಲಿಸಿ ಹೀನಾಯವಾಗಿ ಸೋಲಿಸಿರುವ ಬೊಮ್ಮಾಯಿ, ಈಗ ನಾಚಿಕೆ ಇಲ್ಲದೇ ನಾಡಿನ ಮಕ್ಕಳ ಸಾಧನೆಯನ್ನು ಅಪಮಾನಿಸುತ್ತಿದ್ದಾರೆ. ಅವರಿಗೆ ಮಕ್ಕಳ ಶಾಪ ತಟ್ಟಲಿದೆ ಎಂದು ಹೇಳಿದರು.

ಮೈಸೂರಲ್ಲಿ ರೌಡಿಶೀಟರ್‌ಗಳ ಪರೇಡ್; ಅಪರಾಧ ಕೃತ್ಯಗಳಲ್ಲಿ ತೊಡಗಿದರೆ ಕಠಿಣ ಕಾನೂನು ಕ್ರಮ

65 ರೌಡಿಶೀಟರ್‌ಗಳಿಗೆ ಡಿಸಿಪಿ ಡಾ.ಹರ್ಷ ಪ್ರಿಯಂವದಾ ಕಟ್ಟುನಿಟ್ಟಿನ ಸೂಚನೆ



ಮೈಸೂರಿನ ಸಿಸಿಬಿ ಘಟಕದ ಆವರಣದಲ್ಲಿ ಸೋಮವಾರ ರೌಡಿಶೀಟರ್‌ಗಳ ಪರೇಡ್ ನಡೆಸಲಾಯಿತು.

ಮೈಸೂರು,ಏ.27(ಪಿಎಂ)– ಮೈಸೂರಿನ ಸಿಸಿಬಿ ಘಟಕದ ಆವರಣದಲ್ಲಿ ಸೋಮವಾರ ನಗರದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ರೌಡಿಶೀಟರ್‌ಗಳ ಪರೇಡ್ ನಡೆಸಲಾಯಿತು.

ಡಿಸಿಪಿ ಡಾ.ಹರ್ಷ ಪ್ರಿಯಂವದಾ ಅವರ ನೇತೃತ್ವದಲ್ಲಿ ನಡೆದ ಪರೇಡ್‌ನಲ್ಲಿ ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯ 65 ರೌಡಿಶೀಟರ್‌ಗಳನ್ನು ಹಾಜರುಪಡಿಸಿ ವಿಚಾರಣೆಗೆ ಒಳಪಡಿಸಲಾಯಿತು.

ರೌಡಿಶೀಟರ್‌ಗಳ ಅಪರಾಧ ಪ್ರಕರಣಗಳ ಬಗ್ಗೆ ವಿವರ ಪಡೆದ ಡಿಸಿಪಿ ಡಾ.ಹರ್ಷ ಪ್ರಿಯಂವದಾ, ಅಪರಾಧ ಕೃತ್ಯಗಳನ್ನು ಮುಂದುವರೆಸಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ನಗರದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ಉಂಟು ಮಾಡಬಾರದು. ಅಪರಾಧ ಚಟುವಟಿಕೆಗಳಲ್ಲಿ ತೊಡಗುವುದು ಮುಂದುವರೆಸಬಾರದು. ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಾಕಾರಿ ಪೋಸ್ಟ್ ಹಾಗೂ ರೀಲ್ಸ್‌ಗಳ ಮೂಲಕ ಸಾರ್ವಜನಿಕರಲ್ಲಿ ಭಯ ಹುಟ್ಟಿಸುವುದು ಕಂಡು ಬಂದಲ್ಲಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ಕೊಟ್ಟರು. ಈ ವೇಳೆ ಸಿಸಿಬಿ ಎಸಿಪಿ, ಇನ್ಸ್‌ಪೆಕ್ಟರ್‌ರವರು ಸೇರಿದಂತೆ ಇನ್ನಿತರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಹಾಜರಿದ್ದರು.

ಮಾಲಿ ರಕ್ಷಣಾ ಸಚಿವ ಸಾಡಿಯೋ ಕಾಮಾರಾ ಗುಂಡಿಕ್ಕಿ ಹತ್ಯೆ



ಬಮಾಕೊ: ಮಾಲಿಯ ರಕ್ಷಣಾ ಸಚಿವ ಜನರಲ್ ಸಾಡಿಯೋ ಕಾಮಾರಾ ದೇಶದಾದ್ಯಂತ ಸೈನಿಕ ತಾಣಗಳ ಮೇಲೆ ನಡೆದ ಸಂಯೋಜಿತ ದಾಳಿಗಳಲ್ಲಿ ಹತ್ಯೆಯಾಗಿದ್ದಾರೆ ಎಂದು ಸರ್ಕಾರದ ವಕ್ತಾರರು ದೃಢಪಡಿಸಿದ್ದಾರೆ.

ವಕ್ತಾರ ಇಸ್ಸಾ ಉಸ್ಮಾನೆ ಕೂಲಿಬಾಲಿ ನಿನ್ನೆ ನೀಡಿದ ಹೇಳಿಕೆಯಲ್ಲಿ, ದಾಳಿಕೋರರು ಕಾಮಾರಾ ಅವರ ಮನೆಯನ್ನು ಗುರಿಯಾಗಿಸಿಕೊಂಡು ನಡೆದ ದಾಳಿಯಲ್ಲಿ ಮೃತಪಟ್ಟಿದ್ದಾರೆ. ಗ್ಯಾರಿಸನ್ ಪಟ್ಟಣವಾದ ಕಾಟಿಯಲ್ಲಿ ಇರುವ ಕಾಮಾರಾ ಅವರ ನಿವಾಸದ ಮೇಲೆ ಅಲ್‌ಖೈದಾ ಸಂಪರ್ಕಿತ ಸಂಘಟನೆ ಮತ್ತು ಟುವಾರೆಗ್ ಬಂಡುಕೋರರು ಒಂದೇ ಸಮಯದಲ್ಲಿ ದಾಳಿ ನಡೆಸಿದ್ದರು.

2020 ಮತ್ತು 2021ರಲ್ಲಿ ಸೇನೆ ತಿರುಗಿಬಿದ್ದ ನಂತರ ಅಧಿಕಾರಕ್ಕೆ ಬಂದ ಸೈನಿಕ ಸರ್ಕಾರದಲ್ಲಿ ಕಾಮಾರಾ ಪ್ರಮುಖ ಪಾತ್ರವಹಿಸಿದ್ದರು. ಆಡಳಿತ ನಡೆಸುತ್ತಿರುವ ಸೈನಿಕ ನಾಯಕತ್ವದೊಳಗೆ ಅವರು ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲೊಬ್ಬರು ಮತ್ತು ಭವಿಷ್ಯದ ನಾಯಕರಾಗಿ ಕಾಣಿಸಿಕೊಂಡಿದ್ದರು ಎಂದು ಮಾಲಿಯಿಂದ ವರದಿ ಮಾಡುತ್ತಿರುವ ಅಲ್ ಜಝೀರಾ ಪತ್ರಕರ್ತ ನಿಕೋಲಸ್ ಹಕ್ ಹೇಳಿದ್ದಾರೆ. ಅವರ ಸಾವು ದೇಶದ ಸಶಸ್ತ್ರ ಪಡೆಗಳಿಗೆ ದೊಡ್ಡ ಹೊಡೆತವಾಗಿದೆ. ಹಕ್ ಅವರ ಪ್ರಕಾರ, ದಾಳಿಕೋರರು ಕಾಮಾರಾ ಅವರ ಕಾಟಿಯಲ್ಲಿರುವ ನಿವಾಸದ ಮೇಲೆ ಆತ್ಮಾಹುತಿ ಕಾರ್ ಬಾಂಬ್ ದಾಳಿ ನಡೆಸಿದರು. ಕಾಟಿ ರಾಜಧಾನಿ ಬಮಾಕೋದಿಂದ ಸುಮಾರು 15 ಕಿಮೀ ದೂರದಲ್ಲಿರುವ ಅತ್ಯಂತ ಭದ್ರತಾ ವ್ಯವಸ್ಥೆಯುಳ್ಳ ಸೈನಿಕ ಪಟ್ಟಣವಾಗಿದ್ದು, ಮಧ್ಯಂತರ ಅಧ್ಯಕ್ಷ ಅಸ್ಸಿಮಿ ಗೋಯಿಟಾ ಕೂಡ ಅಲ್ಲಿ ವಾಸಿಸುತ್ತಾರೆ.

ಎಎಫ್‌ಪಿ ವರದಿ ಪ್ರಕಾರ, ಕಾಮಾರಾ ಅವರ ಎರಡನೇ ಪತ್ನಿ ಮತ್ತು ಇಬ್ಬರು ಮೊಮ್ಮಕ್ಕಳೂ ಈ ದಾಳಿಯಲ್ಲಿ ಅವರು ಮೃತಪಟ್ಟಿದ್ದಾರೆ. ಕಾಟಿ ದೇಶದ ಅತ್ಯಂತ ಸುರಕ್ಷಿತ ಸ್ಥಳಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದ್ದರೂ, ಅಲ್‌ಖೈದಾ ಸಂಪರ್ಕಿತ ಜಮಾಅತ್ ನುಸ್ರತ್ ಅಲ್ ಇಸ್ಲಾಂ ವಲ್ ಮುಸ್ಲಿಮೀನ್ ಹಾಗೂ ಅಜಾವಾದ್ ವಿಮೋಚನಾ ಮುಂಚೂಣಿ ಟುವಾರೆಗ್ ಯೋಧರು ದಾಳಿ ನಡೆಸಲು ಯಶಸ್ವಿಯಾದರು ಎಂದಿದ್ದಾರೆ.

ಮೇ 10ಕ್ಕೆ ಕೃಷಿ ಪ್ರಾಯೋಗಿಕ ಪರೀಕ್ಷೆ ಮುಂದೂಡಿಕೆ

ಮೈಸೂರು,ಏ.27(ಎಸ್‌ಪಿಎನ್)– ಯುಜಿಸಿಇಟಿ–2026ರ ಕೃಷಿಕರ ಕೋಟಾ ಅಭ್ಯರ್ಥಿಗಳ ಕೃಷಿ ಪ್ರಾಯೋಗಿಕ ಪರೀಕ್ಷೆಯನ್ನು ಮೇ 10ಕ್ಕೆ ಮುಂದೂಡಿ ಬೆಂಗಳೂರು ಕೃಷಿ ವಿವಿ ಕುಲಸಚಿವರು ಅಧಿಸೂಚನೆ ಹೊರಡಿಸಿದ್ದಾರೆ.

ಈ ಹಿಂದೆ ಕೃಷಿ ಪ್ರಾಯೋಗಿಕ ಪರೀಕ್ಷೆಯನ್ನು ಏ.29ರಂದು ನಡೆಸಲು ದಿನಾಂಕ ನಿಗದಿಪಡಿಸಲಾಗಿತ್ತು. ಆದರೆ, ದೇಶಾದ್ಯಂತ ಮೇ.3ರಂದು ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ನೀಟ್ ಪರೀಕ್ಷೆ ನಡೆಯುತ್ತಿರುವುದರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕೋರಿಕೆಯಂತೆ ಏ.29ರಂದು ನಿಗದಿಪಡಿಸಿದ್ದ ಪ್ರಾಯೋಗಿಕ ಪರೀಕ್ಷೆಯನ್ನು ಮೇ 10ಕ್ಕೆ ಮುಂದೂಡಿ ಕೃಷಿ ವಿವಿ ಕುಲಸಚಿವರು ಅಧಿಸೂಚನೆ ಹೊರಡಿಸಿದ್ದಾರೆ.

ಎಕ್ಸ್‌ಪ್ರೆಸ್‌ವೇನಲ್ಲಿ ಫಲಕಕ್ಕೆ ಲಾರಿ ಡಿಕ್ಕಿ: ಸಂಚಾರ ಅಸ್ತವ್ಯಸ್ತ



ಮದ್ದೂರು: ಲಾರಿಯೊಂದು ರಸ್ತೆ ಬದಿಯ ಫಲಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕನಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದು, ಕೆಲಕಾಲ ಟ್ರಾಫಿಕ್ ಜಾಮ್ ಆಗಿತ್ತು. ಘಟನೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಯ ನಿಡಘಟ್ಟ ಬಳಿ ಸಂಭವಿಸಿದೆ.

ಬೆಂಗಳೂರಿನಿಂದ ಮೈಸೂರು ಕಡೆ ಬರುತ್ತಿದ್ದ ಲಾರಿ ನಿಡಘಟ್ಟದ ಬಗ್ಗೆ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿ ಅಳವಡಿಸಲಾಗಿರುವ ಸೂಚನಾ ಫಲಕಕ್ಕೆ ಹೊಡೆಯಿತು. ಇದರಿಂದ ಬೋರ್ಡ್ ಮುರಿದು ರಸ್ತೆ ಮಧ್ಯಕ್ಕೆ ಬಿದ್ದಿತು. ಲಾರಿ ಕೂಡ ಜಖಂಗೊಂಡು ಅಡ್ಡಾದಿಡ್ಡಿ ನಿಂತಿತು. ಇದರಿಂದ ಸಂಚಾರ ಅಸ್ತವ್ಯಸ್ತಗೊಂಡಿತು. ವಿಷಯ ತಿಳಿದು ಮದ್ದೂರು ಟ್ರಾಫಿಕ್ ಪೊಲೀಸರು ಸ್ಥಳಕ್ಕೆ ತೆರಳಿ ಮುರಿದು ಬಿದ್ದ ಬೋರ್ಡ್ ತೆರವುಗೊಳಿಸಿ, ಲಾರಿಯನ್ನು ತಮ್ಮ ವಶಕ್ಕೆ ಪಡೆದು ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಮದ್ದೂರು ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ಅವಶ್ಯ

ಕಾರ್ಮಿಕ ಇಲಾಖೆ ಹಿರಿಯ ನಿರೀಕ್ಷಕಿ ವೀಣಾ ಸಲಹೆ



ಗೃಹ ಕಾರ್ಮಿಕರ ಜಿಲ್ಲಾ ಸಮಾವೇಶ ಹಾಗೂ ಸ್ಮಾರ್ಟ್ ಕಾರ್ಡ್ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕಾರ್ಮಿಕ ಇಲಾಖೆಯ ಹಿರಿಯ ನಿರೀಕ್ಷಕಿ ವೀಣಾ ಮಾತನಾಡಿದರು.

ಮೈಸೂರು,ಏ.27(ಎಸ್‌ಪಿಎನ್)– ಗೃಹ ಕಾರ್ಮಿಕರಿಗೆ ಸರ್ಕಾರದಿಂದ ಲಭ್ಯವಿರುವ ವಿವಿಧ ಸವಲತ್ತುಗಳನ್ನು ಪಡೆದುಕೊಳ್ಳಲು ಸ್ಮಾರ್ಟ್ ಕಾರ್ಡ್ ಅಗತ್ಯ ಎಂದು ಕಾರ್ಮಿಕ ಇಲಾಖೆಯ ಹಿರಿಯ ನಿರೀಕ್ಷಕಿ ವೀಣಾ ಅಭಿಪ್ರಾಯಪಟ್ಟರು.

ಮೈಸೂರು ಡಿ.ಸುಬ್ಬಯ್ಯ ರಸ್ತೆಯಲ್ಲಿರುವ ಎಐಯುಟಿಯುಸಿ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಅಸಂಘಟಿತ ಕಾರ್ಮಿಕರ ಸಂಘ ಹಾಗೂ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್)ಯ ಜಿಲ್ಲಾ ಸಮಿತಿಗಳ ಸಹಯೋಗದೊಂದಿಗೆ ಏರ್ಪಡಿಸಿದ್ದ ಗೃಹ ಕಾರ್ಮಿಕರ ಜಿಲ್ಲಾ ಸಮಾವೇಶ ಹಾಗೂ ಸ್ಮಾರ್ಟ್ ಕಾರ್ಡ್ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಸಂಘಟಿತ ಕಾರ್ಮಿಕರ ನೋಂದಣಿ ಮತ್ತು ಸ್ಮಾರ್ಟ್ ಕಾರ್ಡ್ ವಿತರಣೆ ಯೋಜನೆಯಡಿ 26ಕ್ಕೂ ಅಧಿಕ ಅಸಂಘಟಿತ ಕಾರ್ಮಿಕರನ್ನು ಈ ಹಿಂದೆ ನೋಂದಾಯಿಸಲಾಗಿದೆ. ಪ್ರಸ್ತುತ ಹೊಸದಾಗಿ ಒಬಿಸಿ ವರ್ಗಕ್ಕೆ ಸೇರಿದ ಪಾರಂಪರಿಕ ವೃತ್ತಿಯಲ್ಲಿ ತೊಡಗಿರುವ 38 ವರ್ಗಗಳು ಹಾಗೂ ಹಿಂದುಳಿದ ವರ್ಗದಲ್ಲಿ ಬರುವ ಅಲೆಮಾರಿ ಹಾಗೂ ಅರೆ ಅಲೆಮಾರಿ ಪಂಗಡ ಕುಲ ಕಸುಬಿನಲ್ಲಿ ತೊಡಗಿರುವ 27 ವರ್ಗಗಳ ಕಾರ್ಮಿಕರು ಸೇರಿದಂತೆ ಒಟ್ಟಾರೆ 91 ವರ್ಗಗಳ ಕಾರ್ಮಿಕರನ್ನು ಉಚಿತವಾಗಿ ನೋಂದಾಯಿಸಿ ಸರ್ಕಾರಿ ಸೌಲಭ್ಯ ಪಡೆಯಲು ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ. ಅಂತೆಯೇ ಇಂದಿನ ಸಭೆಯಲ್ಲಿ 1,118 ಮಂದಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಮಾಡಲಾಗುತ್ತಿದೆ ಎಂದರು.

ಈ ಯೋಜನೆಯಡಿ ನೊಂದಾಯಿಸಲು ಫಲಾನುಭವಿಗಳು ರಾಜ್ಯದ ನಿವಾಸಿಗಳಾಗಿರಬೇಕು. 18 ರಿಂದ 60 ವರ್ಷಗಳಾಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ಹೊಂದಿರಬಾರದು. ಈ ಯೋಜನೆಯಡಿ ಗೃಹ ಕಾರ್ಮಿಕರಿಗೆ ಅಪಘಾತ ಪರಿಹಾರ ಸೌಲಭ್ಯ, ಅಪಘಾತದಿಂದ ಮರಣ ಹೊಂದಿದಲ್ಲಿ ಅವರ ನಾಮನಿರ್ದೇಶಿತರಿಗೆ ಲಕ್ಷ ರೂ. ಪರಿಹಾರ. ಅಪಘಾತದಿಂದ ಸಂಪೂರ್ಣ ಇಲ್ಲವೇ ಭಾಗಶಃ ದುರ್ಬಲತೆ ಹೊಂದಿದಲ್ಲಿ ಲಕ್ಷದವರೆಗೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರ ಮೇಲೆ), ಆಸ್ಪತ್ರೆ ವೆಚ್ಚ ಮರುಪಾವತಿಗೆ 50 ಸಾವಿರದವರೆಗೆ (ಅಪಘಾತ ಪ್ರಕರಣಗಳಲ್ಲಿ ಮಾತ್ರ) ಪರಿಹಾರ ನೀಡಲಾಗುವುದು. ಈ ಯೋಜನೆಯಡಿ ಪರಿಹಾರ ಪಡೆಯಲು ಪ್ರತಿಯೊಬ್ಬರು ಸ್ಮಾರ್ಟ್ ಕಾರ್ಡ್ ಅವಶ್ಯಕ ಎಂದರು.

ಜಿಲ್ಲಾ ಗೃಹ ಕಾರ್ಮಿಕರ ಸಂಘದ ನೂತನ ಸಂಚಾಲಕಿ ಪಿ.ಎಸ್.ಸಂಧ್ಯಾ ಅವರು, ಗೃಹ ಕಾರ್ಮಿಕರ ಹಿತರಕ್ಷಣೆಗಾಗಿ ಪ್ರತ್ಯೇಕ ಗೃಹ ಕಾರ್ಮಿಕ ಕಲ್ಯಾಣ ಮಂಡಳಿ ರಚನೆ, ಜೀವನ ಭದ್ರತೆ, ಇಎಸ್‌ಐ ಮತ್ತು ಪಿಎಫ್ ಸೌಲಭ್ಯ, ವಾರದ ರಜೆ, ಗುರುತಿನ ಚೀಟಿ ಹಾಗೂ ಕೆಲಸದ ಸ್ಥಳದಲ್ಲಿ ನಡೆಯುವ ದೌರ್ಜನ್ಯ ತಡೆಗೆ ಸುರಕ್ಷಾ ಸಮಿತಿ ರಚನೆ, ಮಹಿಳಾ ಕಾರ್ಮಿಕರಿಗೆ ಮುಟ್ಟಿನ ರಜೆ, ಉಚಿತ ಆರೋಗ್ಯ ತಪಾಸಣೆಗೆ ವ್ಯವಸ್ಥೆ ಕಲ್ಪಿಸುವಂತೆ ಒತ್ತಾಯಿಸಿ ಮನವಿ ಪತ್ರವನ್ನು ಕಾರ್ಮಿಕ ಇಲಾಖೆಯ ಹಿರಿಯ ನಿರೀಕ್ಷಕಿ ವೀಣಾ ಅವರಿಗೆ ಸಲ್ಲಿಸಿದರು.

ನೂತನ ಜಿಲ್ಲಾ ಸಮಿತಿ ಆಯ್ಕೆ: ಇದೇ ವೇಳೆ ಕರ್ನಾಟಕ ರಾಜ್ಯ ಗೃಹ ಕಾರ್ಮಿಕರ ಸಂಘಟನೆಯ ಜಿಲ್ಲಾ ಸಮಿತಿ ಸಂಚಾಲಕರಾಗಿ ಪಿ.ಎಸ್.ಸಂಧ್ಯಾ, ಸದಸ್ಯರಾಗಿ ಮರಿಯಮ್ಮ, ಸುಂದರಮ್ಮ, ಮಹದೇವಮ್ಮ, ಮೇರಿ ಜೋಸೆಫಿನ್, ಕುಮಾರಿ, ವೇದಾವತಿ, ಇಂದ್ರಾಣಿ ಹಾಗೂ ಜಾನಕಮ್ಮ ಅವರನ್ನು ಆಯ್ಕೆ ಮಾಡಲಾಯಿತು.

ಈ ವೇಳೆ ಜಿಲ್ಲಾ ಗೃಹ ಕಾರ್ಮಿಕರ ಸಮಾವೇಶದಲ್ಲಿ ಎಐಯುಟಿ ಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಜಿಲ್ಲಾ ಉಪಾಧ್ಯಕ್ಷೆ ಜಿ.ಎಸ್.ಸೀಮಾ, ಸಭೆಯಲ್ಲಿ ಮೈಸೂರಿನ ವಿವಿಧ ಭಾಗಗಳಿಂದ ಆಗಮಿಸಿದ್ದ ನೂರಾರು ಗೃಹ ಕಾರ್ಮಿಕರು ಪಾಲ್ಗೊಂಡಿದ್ದರು.

ಮೈಸೂರಿನ ಸೇಪಿಯೆಂಟ್ ಕಾಲೇಜಿನಿಂದ 'ಸೇಪಿಯೆನ್ಷಿಯಾ–26' ಅಂತರ ಕಾಲೇಜು ಉತ್ಸವ



ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿನ ಸೇಪಿಯೆಂಟ್ ಕಾಲೇಜು ವತಿಯಿಂದ ನಡೆದ 'ಸೇಪಿಯೆನ್ಷಿಯಾ–26' ಅಂತರ ಕಾಲೇಜು ಉತ್ಸವದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ, ಪ್ರೋತ್ಸಾಹಿಸಲಾಯಿತು. ತಾರಾ ದಂಪತಿ ಹರ್ಷಿಕಾ ಪೂಣಚ್ಚ ಹಾಗೂ ಭುವನ್ ಪೊನ್ನಣ್ಣ, ಸಂಸ್ಥೆಯ ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು.

ಮೈಸೂರು, ಏ.27– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಸೇಪಿಯೆಂಟ್ ಕಾಲೇಜು ವತಿಯಿಂದ ದಶಮಾನೋತ್ಸವ ಸಂಭ್ರಮಾಚರಣೆ ಅಂಗವಾಗಿ 'ಸೇಪಿಯೆನ್ಷಿಯಾ–26' ಅಂತರ ಕಾಲೇಜು ಉತ್ಸವವನ್ನು ಆಯೋಜಿಸಲಾಗಿತ್ತು.

ನಗರದ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ನಾರ್ತ್ ಅವೆನ್ಯೂ ಬ್ಯಾಂಕ್ವೆಟ್ ಹಾಲ್ ಆವರಣದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಚಲನಚಿತ್ರ ರಂಗದ ಜನಪ್ರಿಯ ದಂಪತಿ ಭುವನ್ ಪೊನ್ನಣ್ಣ ಮತ್ತು ಹರ್ಷಿಕಾ ಪೂಣಚ್ಚ ಭಾಗವಹಿಸಿದ್ದರು.

ಈ ವೇಳೆ ಕಾಲೇಜು ಉತ್ಸವದ ಅಂಗವಾಗಿ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳು ಹಾಗೂ ಸಮಗ್ರ ಪ್ರಶಸ್ತಿ ವಿಜೇತ ಮಹಾಜನ ಕಾಲೇಜು ತಂಡಕ್ಕೆ ಸಂಸ್ಥೆಯ ಅಧ್ಯಕ್ಷ ದಲ್ಜೀತ್ ರಾಮ್ ಅವರೊಂದಿಗೆ ಸಿನಿ ದಂಪತಿ ಭುವನ್ ಹಾಗೂ ಹರ್ಷಿಕಾ ಬಹುಮಾನದೊಂದಿಗೆ ಟ್ರೋಫಿ ವಿತರಿಸಿದರು. ಸಮಗ್ರ ಪ್ರಶಸ್ತಿ 25 ಸಾವಿರ ಸೇರಿ ಒಟ್ಟು 1.5 ಲಕ್ಷ ರೂ. ನಗದು ಬಹುಮಾನ ನೀಡಲಾಯಿತು.

ಇದೇ ಸಂದರ್ಭದಲ್ಲಿ ಪಿಯುಸಿ ಮತ್ತು ಪದವಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಾಧಕ ವಿದ್ಯಾರ್ಥಿಗಳನ್ನು ಅವರ ಪೋಷಕರ ಸಮ್ಮುಖದಲ್ಲಿ ನಗದು ಬಹುಮಾನ ಹಾಗೂ ನೆನಪಿನ ಕಾಣಿಕೆ ನೀಡಿ ಅಭಿನಂದಿಸಲಾಯಿತು. ಸೇಪಿಯೆಂಟ್ ವಿದ್ಯಾರ್ಥಿಗಳು ರ್‍ಯಾಂಪ್ ವಾಕ್, ನೃತ್ಯ ಪ್ರದರ್ಶನ, ಗಾಯನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು.

ತಾರಾ ದಂಪತಿ ನೃತ್ಯ: ಹರ್ಷಿಕಾ ಹಾಗೂ ಪೊನ್ನಣ್ಣ ಮಾತನಾಡಿ, ಅತ್ಯಂತ ಕಡಿಮೆ ಅವಧಿಯಲ್ಲಿ ಸೇಪಿಯೆಂಟ್ ಕಾಲೇಜು ಅಪಾರ ಸಾಧನೆಯೊಂದಿಗೆ ಪ್ರಸಿದ್ಧ ಸಂಸ್ಥೆಯಾಗಿ ಬೆಳೆದಿದೆ ಎಂದು ಶ್ಲಾಘಿಸಿ, ತಮ್ಮ ಶೈಕ್ಷಣಿಕ ಜೀವನದ ಅನುಭವ ಹಂಚಿಕೊಂಡರು. ಬಳಿಕ ಚಿತ್ರಗೀತೆ ಹಾಡಿ, ನೃತ್ಯ ಪ್ರಸ್ತುತಿ ಮೂಲಕ ನೆರೆದಿದ್ದ ವಿದ್ಯಾರ್ಥಿ ಸಮೂಹವನ್ನು ರಂಜಿಸಿದರು.

ಈ ವೇಳೆ ಕಾರ್ಯಕ್ರಮದಲ್ಲಿ ಸೇಪಿಯೆಂಟ್ ಕಾಲೇಜಿನ ನಿರ್ದೇಶಕರಾದ ಶ್ರೀಮತಿ ಯೆಷ್ಮಿಕ್ ದಲ್ಜೀತ್ ರಾಮ್, ಡೀನ್ ಡಾ.ಸುಜಾತ ಬೋಪಣ್ಣ, ಪ್ರಾಂಶುಪಾಲ ಡಾ.ಗಣೇಶ್ ಕೆ., ಆಡಳಿತಾಧಿಕಾರಿ ಸುಜಿತ್ ಪಡಿವಾಲ್ ವೇದಿಕೆಯಲ್ಲಿದ್ದರು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

1.90 ಕೋಟಿ ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ



ಸಿಸಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು, ಏ.27– ಕ್ಷೇತ್ರಕ್ಕೆ ಮುಖ್ಯಮಂತ್ರಿಗಳ ವಿಶೇಷ ಅನುದಾನದ ಅಡಿ 50 ಕೋಟಿ ರೂ. ಮಂಜೂರಾಗಿದ್ದು, ತಾಲೂಕಿನ ವಿವಿಧ ಗ್ರಾಮಗಳಲ್ಲಿ 1 ಕೋಟಿ 90 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿ, ಮಾದನಹಳ್ಳಿ, ಶಿರಮಳ್ಳಿ, ಕಾರ್ಯ, ಮಾದಾಪುರ, ಎಂ.ಕೊಂಗಳ್ಳಿ ಗ್ರಾಮಗಳಲ್ಲಿ 1.90 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಲೋಕೋಪಯೋಗಿ ಇಲಾಖೆಯಿಂದ ಪ.ಜಾತಿ ಬೀದಿಗಳ ಅಭಿವೃದ್ಧಿಗಾಗಿ 1 ಕೋಟಿ ಅನುದಾನ ಮಂಜೂರಾಗಿದೆ. ಈ ಅನುದಾನದಲ್ಲಿ ತಾಲೂಕಿನ ಶಿರಮಳ್ಳಿಯಲ್ಲಿ 25 ಲಕ್ಷ, ಹುಲ್ಲಹಳ್ಳಿಯಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಮುಖ್ಯಮಂತ್ರಿಗಳ ವಿಶೇಷ ಅನುದಾನದ ಅಡಿ ಮಂಜೂರಾದ 50 ಕೋಟಿ ರೂ.ಗಳಲ್ಲಿ 7.5 ಕೋಟಿ ರೂ.ಗಳನ್ನು ಸಾಮಾನ್ಯ ವರ್ಗಗಳ ಬೀದಿಗಳ ಅಭಿವೃದ್ಧಿಗೆ ಮೀಸಲಿಡಲಾಗಿದ್ದು, ಈ ಅನುದಾನದಲ್ಲಿ ಮಾದನಹಳ್ಳಿಯಲ್ಲಿ 25 ಲಕ್ಷ, ಮಾದಾಪುರದಲ್ಲಿ 25 ಲಕ್ಷ ಕಾರ್ಯದಲ್ಲಿ 20 ಲಕ್ಷ ಎಂ.ಕೊಂಗಳ್ಳಿಯಲ್ಲಿ 30 ಲಕ್ಷ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಕಳೆದ 3 ದಿನಗಳಿಂದ 3.40 ಕೋಟಿ ವೆಚ್ಚದಲ್ಲಿ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ನಮ್ಮ ಸರ್ಕಾರ ಗ್ಯಾರಂಟಿ ಅನುಷ್ಠಾನದಷ್ಟೇ ಅಭಿವೃದ್ಧಿ ಕಾಮಗಾರಿಗಳಿಗೂ ಸಹ ಆದ್ಯತೆ ನೀಡಿದೆ ಎಂಬುದಕ್ಕೆ ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕೆಲಸಗಳೇ ಸಾಕ್ಷಿ ಎಂದರು.

> ಕಳೆದ ಸಾಲಿನಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದ ಅಡಿ 25 ಕೋಟಿ, ಸಮಾಜ ಕಲ್ಯಾಣ ಇಲಾಖೆಯಿಂದ ಸಮುದಾಯ ಭವನಗಳ ಅಭಿವೃದ್ಧಿಗಾಗಿ 3 ಕೋಟಿ ಅನುದಾನ ಬಂದಿತ್ತು. ಎಸಿಪಿ ಯೋಜನೆಯಡಿ ಕ್ಷೇತ್ರಕ್ಕೆ 7 ಕೋಟಿಗಳಿಗಿಂತಲೂ ಹೆಚ್ಚು ಅನುದಾನ ಬಂದಿದ್ದು, ಪ.ಜಾತಿ ಬೀದಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ನೆರವೇರಿಸಲಾಗಿದೆ. ಒಟ್ಟಾರೆ ಕಳೆದ 3 ವರ್ಷಗಳ ಅವಧಿಯಲ್ಲಿ ಗ್ಯಾರಂಟಿ ಯೋಜನೆಗಳ ಅನುದಾನ ಬಿಟ್ಟು ಕ್ಷೇತ್ರಕ್ಕೆ 400 ಕೋಟಿಗಳಿಗಿಂತಲೂ ಹೆಚ್ಚಿನ ಅನುದಾನವನ್ನು ತಂದು ಅಭಿವೃದ್ಧಿ ಕೆಲಸ ನಿರ್ವಹಿಸುವ ಮೂಲಕ, ಗ್ರಾಮೀಣ ಜನರ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ.
> – ದರ್ಶನ್ ಧ್ರುವನಾರಾಯಣ್, ಶಾಸಕ.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ. ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಮುಖಂಡರಾದ ಅಭಿನಂದನ್ ಪಟೇಲ್, ಚಂದನ್ ಗೌಡ, ಹಲ್ಲರೆ ಮಹದೇವು, ಮಲ್ಲುಂಡಿ ಪುಟ್ಟಸ್ವಾಮಿ, ಶಿವನಾಗಪ್ಪ, ಅಶೋಕ್, ಸಂಗರಾಜು, ಗಿರೀಶ್, ಮಡಿಕೆಹುಂಡಿ ಶಿವಣ್ಣ, ಚಾಮರಾಜು, ಸಾಮಾಜಿಕ ಜಾಲತಾಣ ಅಧ್ಯಕ್ಷ ಮಹೇಶ್, ಲೋಕೋಪಯೋಗಿ ಇಲಾಖೆ ಎಇಇ ರಮೇಶ್, ಎಇ ಬಸವರಾಜು, ಪಂಚಾಯತ್ ರಾಜ್ ಇಲಾಖೆ ಎಇಇ ರಾಜು, ಎಇ ಈರಯ್ಯ ಸೇರಿದಂತೆ ಇತರರಿದ್ದರು.

ವಿಜೃಂಭಣೆಯ ಶ್ರೀಲಕ್ಷ್ಮಿ ವರದರಾಜಸ್ವಾಮಿ ಬ್ರಹ್ಮ ರಥೋತ್ಸವ



ಶ್ರೀಲಕ್ಷ್ಮಿ ವರದರಾಜಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಹೆಚ್.ಡಿ.ಕೋಟೆ, ಏ.27– ಇತಿಹಾಸ ಪ್ರಸಿದ್ಧ ಶ್ರೀಲಕ್ಷ್ಮಿ ವರದರಾಜಸ್ವಾಮಿ ಬ್ರಹ್ಮ ರಥೋತ್ಸವ ಪಟ್ಟಣದಲ್ಲಿ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯೇ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ಬಳಿಕ ದೇವಾಲಯದ ಆವರಣದಲ್ಲಿ ಶ್ರೀದೇವಿ, ಭೂದೇವಿ ಮತ್ತು ಮಹಾಲಕ್ಷ್ಮಿ ಸಮೇತ ಶ್ರೀವರದರಾಜಸ್ವಾಮಿ ಉತ್ಸವ ಮೂರ್ತಿಗಳನ್ನು ಬೆಳಗ್ಗೆ 9.15 ರಿಂದ 9.45ರೊಳಗೆ ಸಲ್ಲುವ ವೃಷಭ ಲಗ್ನದಲ್ಲಿ ವಿವಿಧ ಹೂಗಳಿಂದ ಅಲಂಕರಿಸಿದ್ದ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಬಳಿಕ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ರಥ ಮಂಗಳವಾದ್ಯ, ನಗಾರಿ, ದಾಸಯ್ಯನ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ದೇವಾಲಯದಿಂದ ಹೊರಟು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸ್ವಸ್ಥಾನ ತಲುಪಿತು. ಈ ವೇಳೆ ರಥವನ್ನು ಹೆಚ್ಚಾಗಿ ಮಹಿಳೆಯರೇ ಎಳೆಯುತ್ತಿದ್ದದ್ದು ಕಂಡುಬಂತು. ದಾರಿಯುದ್ದಕ್ಕೂ ಹರಕೆ ಹೊತ್ತ ಭಕ್ತರು ರಥಕ್ಕೆ ಹಣ್ಣು, ಜವನ ಎಸೆದು ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸಿದರು. ಅಲ್ಲದೇ ಭಕ್ತರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು. ಅಲ್ಲದೇ ತಮಟೆ ಸದ್ದಿಗೆ ಯುವ ಕರು, ಮಹಿಳೆಯರು ಹೆಜ್ಜೆ ಹಾಕಿದರು. ಇದೇ ವೇಳೆ ದೇವಾಲಯದಲ್ಲಿ ಸಾವಿರಾರು ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು.

ಬ್ರಹ್ಮ ರಥೋತ್ಸವ ಅಂಗವಾಗಿ ಏ.19 ರಿಂದ ಪ್ರತಿದಿನ ವಿವಿಧ ಸಮಾಜಗಳಿಂದ ಶೇಷ ವಾಹನ, ಸಮರ ಭೂಪಾಲ, ಸೂರ್ಯ ಮಂಡಲ, ಚಂದ್ರ ಮಂಡಲ, ಪುಷ್ಪ ಮಂಟಪರೋಹಣ, ಗರುಡ ವಾಹನ, ಆನೆ ವಸಂತೋತ್ಸವಗಳ ಮೂಲಕ ವರದರಾಜ ಸ್ವಾಮಿ ಉತ್ಸವ ನಡೆಸಲಾಯಿತು.

ಈ ವೇಳೆ ದೇವಾಲಯ ಸಮಿತಿಯ ಬಿ.ಎಸ್.ಪಾರ್ಥಸಾರಥಿ, ತಿರುಮಲ ಆಚಾರ್, ದೇವರಾಜ್, ವರದರಾಜ್, ವೆಂಕಟೇಶ್ ಪ್ರಸಾದ್, ಡೈರಿ ಶ್ರೀಕಾಂತ್, ಜಯಂತ್, ಪೂರ್ಣೇಶ್, ಕನ್ನಡ ಪ್ರಮೋದ್, ಧಾರ್ಮಿಕ ಆಚರಣೆ ಸಮಿತಿ ಅಧ್ಯಕ್ಷ ರಾಜನಾಯಕ, ಚಾಕಳ್ಳಿ ಕೃಷ್ಣ, ಸಂತೋಷ್, ಆನಂದ್, ರಂಗಸ್ವಾಮಿ, ಅನಿಲ್, ರುದ್ರೇಗೌಡ, ಉದಯ ಕುಮಾರ್, ಮುಖಂಡರಾದ ಅಶೋಕ, ಅನಿಲ್ ಚಿಕ್ಕಮಾದು ಅವರ ತಾಯಿ ನಾಗಮ್ಮ, ಸಿ.ಎನ್.ನಾಗಣ್ಣ ಬ್ಯಾಂಕ್ ವೀರಪ್ಪ, ಮಹೇಶ್, ಹೆಚ್.ಸಿ.ಮಂಜು ನಾಥ್, ಕೆಂಡಗಣ್ಣ, ರೂಪೇಶ್, ಚೆಲುವ ನಾಯಕ, ನಟರಾಜು, ಸುಧಾಕರ್, ಫಣೀಂದ್ರ, ಸಂತೋಷ್, ಪ್ರಶಾಂತ್, ಶ್ರೀನಿವಾಸ್, ಚಂದ್ರು, ರವಿ, ಜವರನಾಯಕ, ಪ್ರಕಾಶ್, ಅರ್ಚಕರಾದ ವಿನಯ್ ವಾದ್ಯರ್, ಶ್ರೀಧರ ಮೂರ್ತಿ, ಶ್ರೀನಿಧಿ, ಕೃಷ್ಣ, ಸೋಮನಾಯಕ ಇದ್ದರು.

ಸಿಪಿಐ ಗಂಗಾಧರ್ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಮಹಿಳಾ ಮೀಸಲಾತಿಗೆ ವಿರೋಧ ಹಿನ್ನೆಲೆ

ಕಾಂಗ್ರೆಸ್ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ



ಕಾಂಗ್ರೆಸ್ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಂಜನಗೂಡು, ಏ.27– ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳ ವಿರುದ್ಧ ನಗರದಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಸಮಾವೇಶಗೊಂಡ ಮಹಿಳಾ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನಳಿನಿಗೌಡ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆ ಜಾರಿಗೊಳಿಸಲು ಐತಿಹಾಸಿಕ ಹೆಜ್ಜೆ ಇಟ್ಟಿದ್ದ ಪ್ರಧಾನಿ ಮೋದಿ ಅವರಿಗೆ ಸದ್ಯದ ಮಟ್ಟಿಗೆ ಹಿನ್ನಡೆಯಾಗಿರಹುದು. ಆದರೆ ಭವಿಷ್ಯದಲ್ಲಿ ಈ ಮಸೂದೆಯನ್ನು ಬಿಜೆಪಿ ಜಾರಿಗೊಳಿಸದೇ ಬಿಡದು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ಈ ಮಹಿಳಾ ವಿರೋಧಿ ನೀತಿಯನ್ನು ಪ್ರತಿ ಹಳ್ಳಿ ಹಳ್ಳಿಗೂ ಮುಟ್ಟಿಸುವ ಕೆಲಸವನ್ನು ಮಹಿಳಾ ಮೋರ್ಚಾದಿಂದ ಕೈಗೆತ್ತಿ ಕೊಳ್ಳಲಾಗಿದೆ. ಪ್ರತಿ ತಾಲೂಕು ಕೇಂದ್ರದಲ್ಲೂ ಪ್ರತಿಭಟನೆ ಕೈಗೊಳ್ಳುವ ಮೂಲಕ ಜನಜಾಗೃತಿ ಮೂಡಿಸಲಾಗುವುದು ಎಂದರು.

ಜಿಪಂ ಮಾಜಿ ಸದಸ್ಯೆ ಮಂಗಳಾ ಸೋಮಶೇಖರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆ ಯೋಜನೆಗಳಲ್ಲಿ ಒಂದಾದ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡಬೇಕೆಂಬ ಆಶಯಕ್ಕೆ ಕಾಂಗ್ರೆಸ್ ಹಾಗೂ ಅವರ ಮಿತ್ರ ಪಕ್ಷಗಳು ನಿರಾಸಕ್ತಿ ತೋರಿವೆ. ಮಹಿಳೆಯರಿಗೂ ರಾಜಕೀಯದಲ್ಲಿ ಸಮಾನ ಅವಕಾಶ ಸಿಗಬೇಕೆಂಬ ಮೋದಿ ಕನಸಿಗೆ ಕಾಂಗ್ರೆಸ್ ಮಿತ್ರ ಪಕ್ಷಗಳು ತಣ್ಣೀರೆರಚಿವೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮಹಿಳೆಯರು ತಕ್ಕ ಪಾಠ ಕಲಿಸಬೇಕು ಎಂದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಂದಿನಿ ಮಾತನಾಡಿ, ಮಹಿಳೆಯರಿಗೆ ರಾಜಕೀಯ ರಂಗದಲ್ಲೂ ಮೀಸಲಾತಿ ಸಿಗಬೇಕೆಂದು ಮಾತಿನಲ್ಲಷ್ಟೇ ಹೇಳುವ ಕಾಂಗ್ರೆಸ್ ಮಿತ್ರಕೂಟ ಮಸೂದೆ ಜಾರಿಗೊಳಿಸಲು ವಿರೋಧ ಧೋರಣೆ ತಳೆಯುವ ಮೂಲಕ ಕಾಂಗ್ರೆಸ್ ತನ್ನ ನಿಜ ಬಣ್ಣ ಬಯಲಾಗಿದೆ. ಇದರಿಂದ ಕಾಂಗ್ರೆಸ್ ಮಹಿಳಾ ವಿರೋಧಿ ಎಂಬುದು ಸಾಬೀತಾಗಿದೆ ಎಂದು ಹರಿಹಾಯ್ದರು.

ಪ್ರತಿಭಟನೆಯಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷೆ ಜ್ಯೋತಿ, ನಗರಾಧ್ಯಕ್ಷೆ ಸರಸ್ವತಿ, ಲಕ್ಷ್ಮಿ, ಪುಷ್ಪಲತಾ, ಮಂಗಳ, ಗಾಯತ್ರಿ, ಸೌಭಾಗ್ಯ ಸೇರಿದಂತೆ ಹಲವರಿದ್ದರು.

ಕಿರಣ್ ಜಿಪಂ ಸದಸ್ಯರಾಗಿ ಜನಸೇವೆ ಮಾಡುವಂತಾಗಲಿ

ಜಿಪಂ ಮಾಜಿ ಸದಸ್ಯ ಜಿ.ಎನ್.ಸದಾನಂದ ಆಶಯ



ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಸದಸ್ಯ ಎಸ್.ಕೆ.ಕಿರಣ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಏ.27– ಸಮಾಜಸೇವೆ, ಜನಪರ ಕಾಳಜಿ ಹಾಗೂ ಅಭಿವೃದ್ಧಿ ಕಾರ್ಯಗಳ ಮೂಲಕ ಜನಮನ ಗೆದ್ದಿರುವ ಪುರಸಭೆ ಸದಸ್ಯ ಎಸ್.ಕೆ.ಕಿರಣ್ ಅವರು ಮುಂಬರುವ ಜಿಪಂ ಚುನಾವಣೆಯಲ್ಲಿ ಸ್ಪರ್ಧಿಸಿ ಮತ್ತಷ್ಟು ಜನಸೇವೆ ಮಾಡುವಂತಾಗಲಿ ಎಂದು ಜಿಪಂ ಮಾಜಿ ಸದಸ್ಯ ಜಿ.ಎನ್.ಸದಾನಂದ ಆಶಯ ವ್ಯಕ್ತಪಡಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಕಿರಣ್ ಅಭಿಮಾನಿ ಬಳಗದಿಂದ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಿರಣ್ ಅವರು ಪುರಸಭೆ ಸದಸ್ಯರಾಗಿದ್ದ ವೇಳೆ ಜನಸಾಮಾನ್ಯರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ, ಅಭಿವೃದ್ಧಿ ಕಾರ್ಯಗಳಲ್ಲಿ ಸದಾ ಮುಂಚೂಣಿಯಲ್ಲಿರುತ್ತಿದ್ದ ಅವರ ಸೇವೆ ಶ್ಲಾಘನೀಯ. ಅವರು ಮತ್ತಷ್ಟು ಜನಸೇವೆ ಮಾಡುವ ಶಕ್ತಿ ಮತ್ತು ಅವಕಾಶಗಳನ್ನು ಹೊಂದಲಿ. ಮುಂಬರುವ ಜಿಪಂ ಚುನಾವಣೆಯಲ್ಲಿ ಮೂಗೂರು ಕ್ಷೇತ್ರ ಸಾಮಾನ್ಯ ಕ್ಷೇತ್ರವಾದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿ ಮತ್ತಷ್ಟು ಜನಸೇವೆಯಲ್ಲಿ ತೊಡಗಿಕೊಳ್ಳುವಂತಾಗಲಿ. ಮುಂದಿನ ದಿನಗಳಲ್ಲಿ ಅವರು ಇನ್ನಷ್ಟು ಉನ್ನತ ಸ್ಥಾನಗಳನ್ನು ಅಲಂಕರಿಸಲಿ. ಅವರಿಗೆ ಆರೋಗ್ಯ, ಆಯುಷ್ಯ, ಯಶಸ್ಸು ಸದಾ ಜೊತೆಯಾಗಿರಲಿ ಎಂದು ಹಾರೈಸಿದರು.

ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಮಾತನಾಡಿ, ಜನಸೇವೆಯೇ ಜನಾರ್ಧನ ಸೇವೆ ಎಂಬ ಧ್ಯೇಯ ಅಳವಡಿಸಿಕೊಂಡು, ತಮ್ಮ ವಾರ್ಡ್‌ನ ಅಭಿವೃದ್ಧಿಗೆ ಶ್ರಮಿಸಿದ ಕಿರಣ್ ಎಲ್ಲರಿಗೂ ಮಾದರಿಯಾಗಿದ್ದಾರೆ. ಅವರ ಸರಳತೆ, ಸೌಜನ್ಯ, ಜನಪರ ಕಾಳಜಿ ಮತ್ತು ಅಭಿವೃದ್ಧಿ ಪರ ಚಿಂತನೆ ಸದಾ ಶ್ಲಾಘನೀಯ. ಮುಂದಿನ ದಿನಗಳಲ್ಲಿ ಅವರು ಇನ್ನಷ್ಟು ಉನ್ನತ ಹುದ್ದೆಗಳನ್ನು ಅಲಂಕರಿಸಿ, ಸಮಾಜ ಸೇವೆಯಲ್ಲಿ ಹೊಸ ಮೈಲಿಗಲ್ಲುಗಳನ್ನು ಸ್ಥಾಪಿಸಲಿ ಎಂದು ಆಶಿಸಿದರು.

> ಜನರ ಪ್ರೀತಿ, ಸ್ನೇಹಿತರ ಬೆಂಬಲ, ವಿಶ್ವಾಸವೇ ನನ್ನ ಶಕ್ತಿ. ಮುಂದೆಯೂ ಜನಸೇವೆಗೆ ಸದಾ ಸಿದ್ಧ. ಜಿಪಂ ಚುನಾವಣೆಯಲ್ಲಿ ಮೂಗೂರು ಕ್ಷೇತ್ರ ಸಾಮಾನ್ಯವಾದರೆ ಚುನಾವಣೆಗೆ ಸ್ಪರ್ಧಿಸಲು ಬಯಸಿದ್ದು, ಪಕ್ಷದ ಎಲ್ಲಾ ಮುಖಂಡರು ನನಗೆ ಸಹಕಾರ ನೀಡುತ್ತಾರೆ ಎಂಬ ಭರವಸೆ ಇದೆ. –ಎಸ್.ಕೆ.ಕಿರಣ್, ಪುರಸಭೆ ಮಾಜಿ ಸದಸ್ಯ

ಈ ವೇಳೆ ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆಬ್ಬೇಹುಂಡಿ ಸೋಮಶೇಖರಪ್ಪ, ಬಿಜೆಪಿ ಜಿಲ್ಲಾ ಓಬಿಸಿ ಪ್ರಧಾನ ಕಾರ್ಯದರ್ಶಿ ಕೆ.ಮಹದೇವಶೆಟ್ಟಿ, ಡೈರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ಬಿಜೆಪಿ ಯುವ ಘಟಕದ ಅಧ್ಯಕ್ಷ ಶ್ರೀರಾಂಪುರ ದರ್ಶನ್, ವರುಣ ಯುವ ಮೋರ್ಚಾ ಅಧ್ಯಕ್ಷ ಮಹೇಶ್, ಕರೋಹಟ್ಟಿ ರಾಜಶೇಖರ್, ಅಡುಗೆ ಪ್ರಭು, ನಾಗೇಶ್, ಪ್ರಭುಸ್ವಾಮಿ, ಟೌನ್ ಕಾರ್ಯದರ್ಶಿ ರಮೇಶ್ ಮತ್ತಿತರರಿದ್ದರು.

ಏತ ನೀರಾವರಿ ಮೂಲಕ ಕೆರೆಕಟ್ಟೆಗಳ ತುಂಬಿಸಲು ಕ್ರಮ

4.96 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ



ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕೆ.ಆರ್.ನಗರ, ಏ.27– ಸುಮಾರು 60 ಕೋಟಿ ರೂ. ವೆಚ್ಚದಲ್ಲಿ ಏತ ನೀರಾವರಿ ಯೋಜನೆ ಮೂಲಕ ತಾಲೂಕಿನ ಸಿದ್ದಾಪುರ, ಕೆಸ್ತೂರು ಕೊಪ್ಪಲು, ಬ್ಯಾಡರಹಳ್ಳಿ, ಮಾವತ್ತೂರು ಗ್ರಾಪಂ ವ್ಯಾಪ್ತಿಯ ಕೆರೆಕಟ್ಟೆಗಳಿಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

4.96 ಕೋಟಿ ವೆಚ್ಚದಲ್ಲಿ ತಾಲೂಕಿನ ಡಿ.ಕೆ.ಕೊಪ್ಪಲು ಗೇಟ್ ಹನುಮಾನ್ ಕಾಲುವೆ ಹಾಗೂ 4ನೇ ಬ್ರಾಂಚ್‌ನ ರಾಮ ಸಮುದ್ರ ನಾಲೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಭಾಗದ ರೈತರ ಬಹುದಿನಗಳ ಕನಸು ಇಂದು ನನಸಾಗಿದೆ. ರೈತರ ಬೇಡಿಕೆಯನ್ನು ಮನಗಂಡು ಕೂಡಲೇ ಅನುದಾನ ಮಂಜೂರು ಮಾಡಿಸಿ ಟೆಂಡರ್ ಮುಗಿಸಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ರೈತರ ಅನುಕೂಲಕ್ಕಾಗಿ ನಾಲೆ ಏರಿಗಳ ಅಭಿವೃದ್ಧಿ, 3 ಸೇತುವೆಗಳ ನಿರ್ಮಾಣ ಸೇರಿದಂತೆ ಸರಾಗವಾಗಿ ನೀರು ಹರಿಯಲು ಆಧುನೀಕರಣ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಚುನಾವಣೆ ವೇಳೆ ನಡೆದ ಜನಾಶೀರ್ವಾದ ಯಾತ್ರೆ ವೇಳೆ ಕೊಟ್ಟ ಮಾತಿನಂತೆ ನಿಮ್ಮೂರಿನ ಶ್ರೀಸಿದ್ದಲಿಂಗೇಶ್ವರ ಸ್ವಾಮಿ ದೇವಾಲಯ ಅಭಿವೃದ್ಧಿಗೆ 10 ಲಕ್ಷ ಹಾಗೂ ಪ.ಜಾತಿ ಕಾಲೋನಿ ಸಿದ್ದಪ್ಪಾಜಿ ದೇವಸ್ಥಾನ ಅಭಿವೃದ್ಧಿಗೆ 5 ಲಕ್ಷ ಅನುದಾನ ನೀಡಲಾಗಿದೆ. ಸಿದ್ದಾಪುರದಿಂದ ಹೊಸಕೊಪ್ಪಲು ಮಾರ್ಗವಾಗಿ ಡಿ.ಕೆ.ಕೊಪ್ಪಲು ಗೇಟ್‌ವರೆಗೆ ರಸ್ತೆ ಹಾಳಾಗಿದ್ದು, ಶೀಘ್ರದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅನುದಾನ ಒದಗಿಸಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ತುರ್ತಾಗಿ ಬೋರ್‌ವೆಲ್ ಕೊರೆಸಲು ಗ್ರಾಮೀಣ ಕುಡಿಯುವ ನೀರು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ರಂಗೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಚಂದ್ರೇಗೌಡ, ನಿವೃತ್ತ ಆರಕ್ಷಕ ನಿರೀಕ್ಷಕ ಸಿ.ಡಿ. ರಾಜಾಚಾರ್, ಕೆ.ಎಸ್.ಹಿರಣ್ಣಯ್ಯ, ಕೆ.ರಾಮಚಂದ್ರ, ವೆಂಕಟರಾಮು, ಕೆ.ವಿ.ಪುಟ್ಟಸ್ವಾಮೀಗೌಡ, ಆನಂದ್, ನಿಂಗೇಗೌಡ, ಪ್ರಭಾಕರ್, ಪಿಡಿಓ ಗಿರೀಶ್, ಕೆಆರ್‌ಡಿಎಲ್ ಅಭಿಯಂತರ ಸತೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ತಾಲೂಕು ಕಾಂಗ್ರೆಸ್ ವಕ್ತಾರ ಸಯ್ಯದ್ ಜಾಬೀರ್, ವಕೀಲ ಕೆ.ಸಿ.ಹರೀಶ್, ಲೋಕೇಶ್, ಭರಣಿ ಸೇರಿದಂತೆ ಗ್ರಾಮಸ್ಥರು ಇದ್ದರು.

> ಜನ ಜಾನುವಾರುಗಳ ಕುಡಿಯುವ ನೀರಿನ ಅನುಕೂಲಕ್ಕಾಗಿ ಹಾಗೂ ಅಂತರ್ಜಲ ಕುಸಿಯದಂತೆ ತಡೆಯಲು ಹಾರಂಗಿ ಜಲಾಶಯದಿಂದ ಕ್ಷೇತ್ರದ ನಾಲೆಗಳಿಗೆ 3 ದಿನಗಳವರೆಗೆ ನೀರು ಹರಿಸಲಾಗಿದೆ. ಡಿ.ಕೆ.ಕೊಪ್ಪಲು ಗ್ರಾಮ ಪರಿಮಿತಿಯಿಂದ ಪ್ರೌಢಶಾಲೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗುವುದು. – ಡಿ.ರವಿಶಂಕರ್, ಶಾಸಕ.

ರೋಟರಿ ಕ್ಲಬ್‌ನ ನಿಸ್ವಾರ್ಥ ಸೇವೆ ಶ್ಲಾಘನೀಯ

3181 ಗವರ್ನರ್ ಪಿ.ಕೆ.ರಾಮಕೃಷ್ಣ



ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ಹುಣಸೂರು, ಏ.27– ರೋಟರಿ ಕ್ಲಬ್ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿ ರೂಪುಗೊಂಡು 121 ವಸಂತಗಳನ್ನು ಯಶಸ್ವಿಯಾಗಿ ಕಳೆದಿರುವುದು ಹೆಮ್ಮೆಯ ವಿಷಯ ಎಂದು 3181 ಗವರ್ನರ್ ಪಿ.ಕೆ.ರಾಮಕೃಷ್ಣ ತಿಳಿಸಿದರು.

ನಗರದ ರೋಟರಿ ಭವನದಲ್ಲಿ ರೋಟರಿ ಕ್ಲಬ್ ವತಿಯಿಂದ ಆಯೋಜಿಸಿದ್ದ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1905ರ ಫೆ.23ರಂದು ಪೌಲ್ ಹ್ಯಾರೀಸ್ ಅವರು ಸ್ಥಾಪಿಸಿದ ರೋಟರಿ ಕ್ಲಬ್, ಆರೋಗ್ಯ, ಶಿಕ್ಷಣ, ಸ್ವಚ್ಛತೆ ಮತ್ತು ಶಾಂತಿ, ಪರಿಸರ ರಕ್ಷಣೆಗಾಗಿ ಕೆಲಸ ಮಾಡುತ್ತಾ, ನೊಂದವರ ಬದುಕಿಗೆ ಆರ್ಥಿಕ ನೆರವು ನೀಡುವ ಹಾಗೂ ಸಮಾಜ ಸುಧಾರಣೆಗೆ ಶ್ರಮಿಸಿದ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ನಿಸ್ವಾರ್ಥದಿಂದ ಮಾಡಿದೆ ಎಂದರು.

ಅಲ್ಲದೇ ಪೋಲಿಯೊ ನಿರ್ಮೂಲನೆ, ಸಮುದಾಯ ಸೇವೆ, ಶುದ್ಧ ಕುಡಿಯುವ ನೀರು ಪೂರೈಕೆ, ಅಂಗನವಾಡಿ ಉನ್ನತಿಗೆ ಆದ್ಯತೆ, ನೈರ್ಮಲ್ಯ ಮತ್ತು ಪರಿಸರ ರಕ್ಷಣೆಗೆ ರೋಟರಿ ಒತ್ತು ನೀಡಿದೆ. ಸೇವಾ ಮನೋಭಾವದಿಂದ ಉಚಿತ ಕೊಡುಗೆ ನೀಡುವ ಸಂಸ್ಥೆ ಇದ್ದರೇ ಅದು ಅಂತಾರಾಷ್ಟ್ರೀಯ ರೋಟರಿ ಸಂಸ್ಥೆ ಎಂದ ಅವರು, ಹುಣಸೂರಿನ ರೋಟರಿ ಅಧ್ಯಕ್ಷರು ವಿವಿಧ ಅಭಿವೃದ್ಧಿ ಕಾರ್ಯದಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ ಎಂದರು.

ಸಹಾಯಕ ಗವರ್ನರ್ ರಾಜೇಗೌಡ ಮಾತನಾಡಿ, ರೋಟರಿ ಕ್ಲಬ್ ಸೇವಾ ಸಂಸ್ಥೆಯಾಗಿ, ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಜೊತೆಗೂಡಿ ಸರ್ಕಾರದ ಭಾಗವಾಗಿ ಅಭಿವೃದ್ಧಿಗೆ ಆದ್ಯತೆ ಮತ್ತು ಮಹಿಳೆಯರ ಸ್ವಾವಲಂಬಿ ಬದುಕಿಗೆ ವೇದಿಕೆಯಾಗಿ ಕೆಲಸ ಮಾಡುತ್ತಿದೆ ಎಂದರು.

ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಆರ್. ಕೃಷ್ಣಕುಮಾರ್ ಮಾತನಾಡಿ, ರೋಟರಿ ಸಂಸ್ಥೆಯಲ್ಲಿ ಸೇವೆ ಮಾಡಲು ಹಣವಿದ್ದರೆ ಸಾಲದು. ಸೇವೆ ಮಾಡುವ ಮನಸ್ಸು ಇದ್ದರೆ ಯಾವ ಸಾಧನೆ ಬೇಕಾದರೂ ಮಾಡಬಹುದು. ಅದಕ್ಕೆ ಉದಾಹರಣೆ ಶುದ್ಧ ಕುಡಿಯುವ ನೀರು ಯೋಜನೆ, ಉಚಿತ ಆರೋಗ್ಯ, ಶಾಲೆಗಳ ಮೂಲಸೌಕರ್ಯ, ಅಂಗನವಾಡಿ ಉನ್ನತಿಗೆ ಕ್ರಮ, ನಗರದ ಬಸ್ ನಿಲ್ದಾಣದಲ್ಲಿ ಐ ಲವ್ ಹುಣಸೂರು, ಸಾರ್ವಜನಿಕರಿಗೆ ಕುಡಿಯುವ ನೀರು ಯೋಜನೆಗೆ ಚಾಲನೆ ಇನ್ನೂ ಹಲವಾರು ಅಭಿವೃದ್ಧಿಗೆ ಸಾಕ್ಷಿಯಾಗಿದೆ ಎಂದರು.


ಕಾರ್ಯಕ್ರಮದಲ್ಲಿ ಹೋಮಿಯೋಪತಿ ವೈದ್ಯ ಡಾ.ರಘುಪತಿ ವಿ.ರಾವ್, ದಾಸನಪುರ ಸರ್ಕಾರಿ ಶಾಲೆ ಶಿಕ್ಷಕಿ ಸುಮಾ, ವಿವೇಕಾನಂದ ಯೂತ್ ಮೂವ್‌ಮೆಂಟ್ ಡಿಸೈನಿಂಗ್ ಶಿಕ್ಷಕಿ ಗೀತಾ ಅವರನ್ನು ಗೌರವಿಸಲಾಯಿತು. ವಲಯ ಸೇನಾನಿ ರಮೇಶ್, ಕಾರ್ಯದರ್ಶಿ ಶ್ಯಾಮಣ್ಣ, ಉಪಾಧ್ಯಕ್ಷ ಸ್ವಾಮೀಗೌಡ, ಸಾರ್ಜೆಂಟ್ ಲೂಯಿಸ್ ಪೆರೇರಾ, ರೊ.ಧರ್ಮಾಪುರ ನಾರಾಯಣ್, ರೊ.ರಾಜಶೇಖರ್, ರೊ.ಆರ್.ಆನಂದ್, ರೊ.ತಂಗಮರಿಯಪ್ಪನ್, ರೊ. ಡಾ.ರವಿಕುಮಾರ್, ರೊ.ಡಾ. ವೃಷಬೇಂದ್ರಸ್ವಾಮಿ, ರೊ.ಡಾ.ಚಂದ್ರ ನಂನ್, ರೊ.ಗಿರೀಶ, ರೊ.ಚನ್ನಕೇಶವ್, ರೊ. ಥಾಮಸ್ ಚೆರಿಯನ್, ರೊ.ಪಾಂಡು ಕುಮಾರ್, ರೊ.ವೀರಭದ್ರಪ್ಪ, ರೊ. ರವೀಶ್, ರೊ.ಲಕ್ಷ್ಮಿಕಾಂತ್, ರೊ. ಚಂದ್ರೇಗೌಡ ಇತರರಿದ್ದರು.

ಆರ್.ಜಿ.ಆಶಾಗೆ ಪಿಹೆಚ್‌ಡಿ



ಹುಣಸೂರು, ಏ.27– ಡಾ.ಕೃಷ್ಣ ಹೊಂಬಾಳ್ ಅವರ ಮಾರ್ಗದರ್ಶನದಲ್ಲಿ ಆರ್.ಜಿ.ಆಶಾ ಅವರು ಸಂಶೋಧನೆ ನಡೆಸಿದ 'ಕರ್ನಾಟಕದಲ್ಲಿ ಬುಡಕಟ್ಟು ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಪ.ಪಂಗಡ ಇಲಾಖೆಯ ಪಾತ್ರ. ವಿಶೇಷವಾಗಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ (2010ರಿಂದ 2020ರವರೆಗೆ) ಒಂದು ಅಧ್ಯಯನ ಎಂಬ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್‌ಡಿ ಪದವಿಗೆ ಅಂಗೀಕರಿಸಿದೆ.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಸಗೊಬ್ಬರ, ಬಿತ್ತನೆ ಬೀಜ ಮತ್ತು ಕೀಟನಾಶಕ ಮಾರಾಟಗಾರರ ಸಂಘದ ಸದಸ್ಯರು ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್ ಅವರಿಗೆ ಮನವಿ ಸಲ್ಲಿಸಿದರು.

ತಿ.ನರಸೀಪುರ, ಏ.27– ಡಿಎಪಿ, ಯೂರಿಯಾ ಜೊತೆಗೆ ಒತ್ತಾಯವಾಗಿ ಬೇರೆ ಉತ್ಪನ್ನಗಳನ್ನು ಲಿಂಕ್ ರೂಪದಲ್ಲಿ ಕೊಡುವುದನ್ನು ನಿಲ್ಲಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ತಾಲೂಕು ರಸಗೊಬ್ಬರ ಬಿತ್ತನೆ ಬೀಜ ಮತ್ತು ಕೀಟನಾಶಕ ಮಾರಾಟಗಾರರು ಕೃಷಿ ಪರಿಕರ ಅಂಗಡಿಗಳನ್ನು ಬಂದ್ ಮಾಡಿ ಪಟ್ಟಣದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಬಳಿ ಜಮಾಯಿಸಿದ ಮಾರಾಟಗಾರರು, ನಿತ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವಂತೆ ದೇಶಾದ್ಯಂತ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸಿ ಪ್ರತಿಭಟನೆ ನಡೆಸಿದರು. ಅಲ್ಲದೇ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ತಾಲೂಕು ಕಚೇರಿ ತಲುಪಿದ ಪ್ರತಿಭಟನಾನಿರತರು ವಿವಿಧ ಬೇಡಿಕೆಯುಳ್ಳ ಮನವಿ ಪತ್ರವನ್ನು ಗ್ರೇಡ್–2 ತಹಸೀಲ್ದಾರ್ ರಾಜಾಕಾಂತ್ ಅವರಿಗೆ ಸಲ್ಲಿಸಿದರು.


ತಾಲೂಕು ರಸಗೊಬ್ಬರ, ಬಿತ್ತನೆ ಬೀಜ ಮತ್ತು ಕೀಟನಾಶಕ ಮಾರಾಟಗಾರರ ಸಂಘದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಮಾರಾಟಗಾರರ ವಿವಿಧ ಸಮಸ್ಯೆಗಳು ಹಾಗೂ ಬೇಡಿಕೆ ಈಡೇರಿಸುವಂತೆ ದೇಶಾದ್ಯಂತ ಇಂದು ಪ್ರತಿಭಟನೆ ನಡೆಯುತ್ತಿದ್ದು, ದೆಹಲಿಯ ಅಖಿಲ ಭಾರತ ಕೃಷಿ ಪರಿಕರ ಮಾರಾಟಗಾರರ ಸಂಘ, ಬೆಂಗಳೂರು ಹಾಗೂ ಮೈಸೂರು ಕರ್ನಾಟಕ ರಾಜ್ಯ ಕೃಷಿ ಪರಿಕರಗಳ ಮಾರಾಟಗಾರರ ಸಂಘಗಳ ಸಂಯುಕ್ತಾಶ್ರಯದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ. ಕೃಷಿ ಪರಿಕರ ಮಾರಾಟಗಾರರು ದಿನನಿತ್ಯ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸರ್ಕಾರ ಕೂಡಲೇ ನಮ್ಮ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರಮುಖವಾಗಿ ಡಿಎಪಿ ಮತ್ತು ಯೂರಿಯಾ ಜೊತೆ ಒತ್ತಾಯವಾಗಿ ಬೇರೆ ಉತ್ಪನ್ನಗಳನ್ನು ಲಿಂಕ್ ರೂಪದಲ್ಲಿ ಕೊಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದ ಅವರು ಇನ್ನು ಮುಂದೆ ಲಿಂಕ್ ರೂಪದಲ್ಲಿ ಗೊಬ್ಬರಗಳನ್ನು ಕೊಟ್ಟರೆ ಸಂಘದಿಂದ ಯಾವ ಡೀಲರ್‌ಗಳು ಕೂಡ ಖರೀದಿ ಮಾಡಿ ಮಾರಾಟ ಮಾಡುವುದಿಲ್ಲ. ಎಲ್ಲಾ ರಸಗೊಬ್ಬರಗಳ ಎಂಆರ್‌ಪಿ ಬೆಲೆ ಮೇಲೆ ಶೇ.8 ರಷ್ಟು ಡೀಲರ್ ಲಾಭಾಂಶ ಇರುವ ಹಾಗೆ ನೋಡಿಕೊಳ್ಳುವುದು. ರಸಗೊಬ್ಬರಗಳನ್ನು ಎಫ್‌ಓಎಲ್ ಕೊಡುವ ಹಾಗೆ ಕ್ರಮ ಕೈಗೊಳ್ಳಬೇಕು. ಸಾಗಣೆ ಸಾಗಣೆ ವೆಚ್ಚದ ಹೊರೆಯನ್ನು ಡೀಲರ್‌ಗಳ ಮೇಲೆ ಏರಿಕೆ ಮಾಡಬಾರದು. ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕಗಳ ಸ್ಯಾಂಪಲ್ ಕಳಪೆ ಬಂದಾಗ ಕಂಪನಿಯವರ ಮೇಲೆ ಮಾತ್ರವೇ ಕೇಸ್ ದಾಖಲಿಸಿ ಡೀಲರ್‌ಗಳನ್ನು ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಡೀಲರ್‌ಗಳಿಂದ ಸ್ಯಾಂಪಲ್ ಡ್ರಾ ಮಾಡಿದಾಗ ಸ್ಯಾಂಪಲ್ ಹಣವನ್ನು ಕಡ್ಡಾಯವಾಗಿ ಡೀಲರ್‌ಗಳಿಗೆ ಪಾವತಿ ಮಾಡಬೇಕು. ಅಧಿಕಾರಿಗಳು ತಪಾಸಣೆಗಾಗಿ ಅಂಗಡಿಗಳಿಗೆ ಭೇಟಿ ಕೊಟ್ಟ ನಂತರ ಮಾಧ್ಯಮಗಳಿಗೆ ಹೇಳಿಕೆ ಕೊಡುವಾಗ ದಾಳಿ ಎಂಬ ಪದ ಬಳಸಬಾರದು ಹಾಗೂ ಅಂಗಡಿಗಳ ಫೋಟೋಗಳನ್ನು ಪತ್ರಿಕೆಯಲ್ಲಿ ಬಳಸಬಾರದು. ಎಫ್‌ಐಡಿ ಮೂಲಕ ರಸಗೊಬ್ಬರ ಮಾರಾಟ ಮಾಡುವ ಆದೇಶ ಒಳ್ಳೆಯದೆ ಆದರೆ ನೀರಾವರಿ, ಅರೆ ನೀರಾವರಿ ಮತ್ತು ಒಣ ಬೇಸಾಯ ಬೆಳೆಗಳಿಗೆ, ಬೆಳೆ ಆಧಾರಿತ ಪೂರ್ಣ ರಸಗೊಬ್ಬರಗಳನ್ನು ದೊರೆಯುವ ಹಾಗೆ ನೋಡಿಕೊಳ್ಳಬೇಕು. ಎಫ್‌ಐಡಿ ತಂತ್ರಾಂಶದಲ್ಲಿ ಇರುವ ನ್ಯೂನತೆಯನ್ನು ಕೂಲಂಕುಷವಾಗಿ ಪರಿಗಣಿಸಿ ಸರಿಪಡಿಸಬೇಕು. ಎಫ್‌ಐಡಿ ಮುಖಾಂತರ ಯೂರಿಯಾ, ಡಿಎಪಿ ಮಾರಾಟ ಮಾಡುವುದನ್ನು ಹಿಂಗಾರು ಬೆಳೆಗಳಿಗೆ ಕಡ್ಡಾಯಗೊಳಿಸಬಾರದು. ಸಾಥಿ ಪೋರ್ಟಲ್‌ನಲ್ಲಿ ಇರುವ ನ್ಯೂನತೆ ಸರಿಪಡಿಸಿ ಮಾರಾಟ ಸ್ನೇಹಿಯಾಗಿ ರೂಪಿಸಬೇಕೆಂದು ಅವರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಕಾರ್ಯದರ್ಶಿ ಯೋಗೇಶ್, ವಿನಾಯಕ ಟ್ರೇಡರ್ಸ್ ರಾಜೇಶ್, ಬನ್ನೂರು ಪಿ.ಮಂಜು, ಬಿ.ಎಚ್.ಸೋಮಶೇಖರ್, ಸೀಹಳ್ಳಿ ಎಸ್.ಕೆ.ಕಾಂತರಾಜು, ಸೋಸಲೆ ಜಯಪ್ರಕಾಶ್, ತಲಕಾಡು ವಿಶ್ವನಾಥ್, ಬಿ.ಎಂ.ನಾಗೇಶ್, ಜಯಕುಮಾರ್, ಜವಾದ್, ಕಾಹಳ್ಳಿ ರಾಜು, ಕುಪ್ಪೇಗಾಲ ರಾಜೇಶ್, ಯಾಕನೂರು ನವೀನ, ಮೂಗೂರು ಕೇಶವ, ಪ್ರಭುಸ್ವಾಮಿ, ಬಾಲ ಸುಬ್ರಹ್ಮಣ್ಯಂ ಸೇರಿದಂತೆ ಮತ್ತಿತರ ಮಾರಾಟಗಾರರು ಭಾಗವಹಿಸಿದ್ದರು.

ವರದರಾಜಪಿಳ್ಳೆ ನಿಧನ



ಹುಣಸೂರು, ಏ.27– ಹುಣಸೂರು ಹನುಮಂತೋತ್ಸವ ಸಮಿತಿ ನಿರ್ದೇಶಕ ಹೆಚ್.ಆರ್.ವರದರಾಜಪಿಳ್ಳೆ (53) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಂಪ್‌ಹೌಸ್ ಬಳಿಯ ಮೃತರ ಜಮೀನಿನಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ದಿನೇಶ್



ಹುಣಸೂರು, ಏ.27– ನಗರದ ಮೂರೂರಮ್ಮ ಬಡಾವಣೆ ನಿವಾಸಿ, ಶ್ರೀಮುನೇಶ್ವರಸ್ವಾಮಿ ಸೇವಾ ಸಮಿತಿ ನಿರ್ದೇಶಕ ಕೆ.ದಿನೇಶ್(59) ಸೋಮವಾರ ಬೆಳಗ್ಗೆ ನಿಧನರಾದರು.

ಅವಿವಾಹಿತರಾಗಿದ್ದ ಮೃತರು ಮೂವರು ಸಹೋದರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ತಾಲೂಕು ಕಚೇರಿ ಪಕ್ಕದಲ್ಲಿರುವ ಚಿರಶಾಂತಿಧಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಮಂಗಳವಾರ 28 ಏಪ್ರಿಲ್ 2026

ಯುದ್ಧ ಸ್ಮಾರಕದ ಪಕ್ಕ ಮನರಂಜನಾ ತಾಣಕ್ಕೆ ಆಕ್ಷೇಪ



ಮೈಸೂರು ಜಿಲ್ಲಾ ನಿವೃತ್ತ ಯೋಧರ ಸಂಘದ ಅಧ್ಯಕ್ಷ, ಯುದ್ಧ ಸ್ಮಾರಕ ನಿರ್ಮಾಣ ಸಮಿತಿ ಸದಸ್ಯ ಕೆ.ಪಿ.ದಿವಾಕರ್ ಹಾಗೂ ನಿವೃತ್ತ ಯೋಧರೂ ಆಗಿರುವ ಹಿರಿಯ ಕೆಎಎಸ್ ಅಧಿಕಾರಿ ಸಿ.ಎಲ್.ಆನಂದ್ ಯುದ್ಧ ಸ್ಮಾರಕದ ಬಳಿ ನಡೆಸುತ್ತಿರುವ ಅಭಿವೃದ್ಧಿ ಕಾಮಗಾರಿ ವೀಕ್ಷಿಸಿದರು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಎನ್‌ಸಿಸಿ ಕವಾಯತು ಮೈದಾನದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಪ್ರಶಾಂತ, ನಿರ್ಮಲ ವಾತಾವರಣಕ್ಕೆ ಆದ್ಯತೆ

ಮೈಸೂರು,ಏ.27(ಎಂಟಿವೈ)– ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದಲ್ಲಿ ನಿರ್ಮಾಣವಾಗುತ್ತಿರುವ ಯುದ್ಧ ಸ್ಮಾರಕ, ಯೋಧರು ಹಾಗೂ ನಿವೃತ್ತ ಯೋಧರಿಗೆ ದೇವಾಲಯವಾಗಿದೆ. ಇಂತಹ ಪವಿತ್ರ ಸ್ಮಾರಕದ ಪಕ್ಕ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕೈಗೆತ್ತಿಕೊಂಡಿರುವ ವಿವಿಧ ಅಸಂಬದ್ಧ ಅಭಿವೃದ್ಧಿ ಕಾಮಗಾರಿಗಳ ಸ್ಥಗಿತಗೊಳಿಸುವಂತೆ ಮೈಸೂರು ಜಿಲ್ಲಾ ನಿವೃತ್ತ ಯೋಧರ ಸಂಘದ ಅಧ್ಯಕ್ಷ ಹಾಗೂ ಯುದ್ಧ ಸ್ಮಾರಕ ನಿರ್ಮಾಣ ಸಮಿತಿ ಸದಸ್ಯ ಕೆ.ಪಿ.ದಿವಾಕರ್ ಒತ್ತಾಯಿಸಿದ್ದಾರೆ.

ಯುದ್ಧ ಸ್ಮಾರಕ ನಿರ್ಮಾಣ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಉಳಿದ ಖಾಲಿ ಜಾಗದಲ್ಲಿ ಬ್ಯುಟಿಫಿಕೇಷನ್(ಅಲಂಕಾರಕ್ಕೆ) ವಿವಿಧ ಗಿಡ–ಮರ ನೆಡುವುದು, ಪಾದಚಾರಿ ಮಾರ್ಗ ನಿರ್ಮಾಣ, ಆಸನ ವ್ಯವಸ್ಥೆಗೆ ಈ ಹಿಂದೆ ಯೋಜನೆ ರೂಪಿಸಲಾಗಿತ್ತು. ಆದರೆ, ಪಾಲಿಕೆ ವತಿಯಿಂದ ಇದೀಗ ಜಿಮ್, ಮಕ್ಕಳ ಆಟಿಕೆ, ಆ್ಯಂಫಿಥಿಯೇಟರ್ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಯುದ್ಧ ಸ್ಮಾರಕ ನಮಗೆ ದೇವಾಲಯವಿದ್ದಂತೆ. ಅದರ ಸುತ್ತಲಿನ ವಾತಾವರಣ ಪ್ರಶಾಂತ ಹಾಗೂ ನಿರ್ಮಲವಾಗಿರಬೇಕು. ಆದರೆ ಮನೋರಂಜನಾ ಚಟುವಟಿಕೆಗಳು ಅಲ್ಲಿ ನಡೆಯುವುದು ಔಚಿತ್ಯಪೂರ್ಣವಲ್ಲ. ಈ ಹಿನ್ನೆಲೆಯಲ್ಲಿ ಶೀಘ್ರದಲ್ಲೇ ಜಿಲ್ಲಾಧಿಕಾರಿ, ಪಾಲಿಕೆ ಆಯುಕ್ತರು, ಅಪರ ಜಿಲ್ಲಾಧಿಕಾರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳನ್ನು ಭೇಟಿ ಮಾಡಿ ಕಾಮಗಾರಿ ನಡೆಸದಂತೆ ಮನವಿ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.

ಮೈಸೂರು,ಏ.27(ಎಂಟಿವೈ)– ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕ ಎನ್‌ಸಿಸಿ ಕವಾಯತು ಮೈದಾನದಲ್ಲಿ ಮೈಸೂರು ಮಹಾನಗರ ಪಾಲಿಕೆ ಅಮೃತ್ ಯೋಜನೆಯಡಿ ಕೋಟಿ ವೆಚ್ಚದಲ್ಲಿ ಪಾದಚಾರಿ ಮಾರ್ಗ, ಜಿಮ್ ಉಪಕರಣ ಅಳವಡಿಕೆ, ಮಕ್ಕಳ ಆಟಿಕೆ ಅಳವಡಿಕೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡಿರುವುದಕ್ಕೆ ಮಾಜಿ ಸೈನಿಕರ ಸಂಘ ಆಕ್ಷೇಪ ವ್ಯಕ್ತಪಡಿಸಿದ್ದು, ಹುತಾತ್ಮರ ಸ್ಮಾರಕದ ಪಕ್ಕ ಇಂತಹ ಅಸಂಬದ್ಧ ಕಾಮಗಾರಿ ಸಲ್ಲದು, ಇದನ್ನು ಸ್ಥಗಿತಗೊಳಿಸುವಂತೆ ಆಗ್ರಹಿಸಿದೆ.

ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡದಲ್ಲಿ ಕಾರ್ಯ ನಿರ್ವಹಣೆ ಆಗುತ್ತಿದ್ದ ವಿವಿಧ ಇಲಾಖೆಗಳ ಕಚೇರಿಗಳು ಸ್ಥಳಾಂತರಗೊಂಡ ಹಿನ್ನೆಲೆಯಲ್ಲಿ ಇದರ ಪಕ್ಕದ ಎನ್‌ಸಿಸಿ ಕವಾಯತು ಮೈದಾನ(ಪಾರ್ಕ್) ಪಾಳು ಬಿದ್ದು ಅನೈತಿಕ ಚಟುವಟಿಕೆಯ ತಾಣವಾಗಿ ಮಾರ್ಪಟ್ಟಿತ್ತು. ಒಂದೆಡೆ ಭಾರತೀಯ ಹುತಾತ್ಮ ಯೋಧರಿಗೆ ನಮನ ಸಲ್ಲಿಸುವ ಯುದ್ಧ ಸ್ಮಾರಕ ನಿರ್ಮಾಣ ಪ್ರಕ್ರಿಯೆ ಪ್ರಗತಿಯಲ್ಲಿರುವಾಗಲೇ ಮೈಸೂರು ಮಹಾನಗರ ಪಾಲಿಕೆ, ಅಮೃತ್ ಯೋಜನೆಯಡಿ ಕೋಟಿ ವೆಚ್ಚದಲ್ಲಿ ಮೈದಾನವನ್ನು ಅಭಿವೃದ್ಧಿ ಮಾಡಿ, ಸದಾ ಚಟುವಟಿಕೆ ತಾಣವಾಗಿಸಲು ಉದ್ದೇಶಿಸಿದೆ. ಈಗಾಗಲೇ ಬೆಂಗಳೂರು ಮೂಲದ ಕಂಪನಿಯೊಂದಕ್ಕೆ ಟೆಂಡರ್ ನೀಡಲಾಗಿದೆ. ಪೂರ್ವ ನಿರ್ಧಾರಿತ ನೀಲ ನಕ್ಷೆಯಂತೆ ವಿವಿಧ ಅಭಿವೃದ್ಧಿ ಕಾಮಗಾರಿ ಆರಂಭಿಸಲಾಗಿದೆ.

ಏನೇನು ಕಾಮಗಾರಿ: ಹಳೆ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಖಾಲಿ ಜಾಗ 22,798.50 ಚದರ ಮೀಟರ್ ವಿಸ್ತೀರ್ಣವಿದ್ದು, ಇಲ್ಲಿ 60 ಮೀಟರ್ ಚೈನ್ ಲಿಂಕ್ ಬೇಲಿ(ಫೆನ್ಸ್) ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರವೇಶ ದ್ವಾರ(ಗೇಟ್), ಲ್ಯಾಂಡ್ ಸ್ಕೇಪ್, ಸುಸಜ್ಜಿತ ಪಾದಚಾರಿ ಮಾರ್ಗ, ಮಕ್ಕಳ ಆಟದ ಸಲಕರಣೆಗಳ ಜೋಡಣೆ, ಜಿಮ್ ಉಪಕರಣಗಳ ಅಳವಡಿಕೆ, 20 ಬೆಂಚುಗಳ ವ್ಯವಸ್ಥೆ, 15 ಎಫ್‌ಆರ್‌ಪಿ ಕಸದಬುಟ್ಟಿ (ಡಸ್ಟ್‌ಬಿನ್), 40 ದೀಪ, ಆಂತರಿಕ ಪೈಪ್‌ಲೈನ್ ನೊಂದಿಗೆ ಬೋರ್‌ವೆಲ್, ಎರಡು ಮಳೆನೀರು ಕೊಯ್ಲು ಘಟಕ ನಿರ್ಮಿಸಿ, ಈ ಜಾಗದಲ್ಲಿ ವಿವಿಧ ಬಗೆಯ 555 ಗಿಡ ನೆಡಲು ಉದ್ದೇಶಿಸಲಾಗಿದೆ. ಅಲ್ಲದೆ, ಚಿಕ್ಕ ಆ್ಯಂಫಿಥೀಯೇಟರ್ ನಿರ್ಮಾಣ ಮಾಡಲಾಗುತ್ತಿದೆ.

ಮಕ್ಕಳನ್ನು ಆಕರ್ಷಿಸಲು ಆಟಿಕೆ: ಹುಣಸೂರು ರಸ್ತೆಗೆ ಹೊಂದಿಕೊಂಡಂತೆ ಮಕ್ಕಳ ಪಾರ್ಕ್ ನಿರ್ಮಿಸಲು ಉದ್ದೇಶಿಸಲಾಗಿದ್ದು, ಅಲ್ಲಿ ಚಿಕ್ಕ ಮಕ್ಕಳಿಗೆ ಪಪ್ಪಿ ಡಾಗ್ ರೈಡರ್, ಮೆರ್ರಿ ಗೊ ರೈಡ್, ಸ್ವಿಂಗ್, ಸ್ಲೈಡ್ ಸೇರಿದಂತೆ ಇನ್ನಿತರ ಆಟಿಕೆಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.

ಜಿಮ್ ಉಪಕರಣ: ಒಂದೆಡೆ ಜಿಮ್ ಉಪಕರಣ ಅಳವಡಿಸಲು ಉದ್ದೇಶಿಸಲಾಗಿದೆ. ದೈಹಿಕ ಕಸರತ್ತಿಗೆ ಆರ್ಮ್ ಪೆಡಲ್, ಬಿಗ್ ಶೋಲ್ಡರ್ ವ್ಹೀಲ್, ಸೀಟೆಡ್ ಚೆಸ್ಟ್ ಪ್ರೆಸ್, ಹೆಲ್ತ್ ವಾಕರ್, ಮಿನಿ ಸ್ಕೀ, ವೇಸ್ಟ್ ಟ್ವಿಸ್ಟರ್ ಅಳವಡಿಸಲು ನಿರ್ಧರಿಸಲಾಗಿದೆ.

ಅಲ್ಲದೆ, ಹುತಾತ್ಮರ ಸ್ಮಾರಕದ ಪಕ್ಕ ಚಿಕ್ಕದಾಗಿ ವೃತ್ತಾಕಾರದ ಆ್ಯಂಫಿಥಿಯೇಟರ್ ನಿರ್ಮಾಣ ಮಾಡಿ, ಅದರಲ್ಲಿ ಸಣ್ಣಪುಟ್ಟ ಕಾರ್ಯಕ್ರಮ, ಅದರ ಸುತ್ತಲೂ ಕುಳಿತುಕೊಳ್ಳಲು ಕಟ್ಟೆ ಕಟ್ಟಲಾಗುತ್ತಿದೆ. ಪಾರ್ಕ್‌ನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದ ದಿಕ್ಕಿಗೆ ಸಣ್ಣ ಕೊಠಡಿ ನಿರ್ಮಿಸಲಾಗುತ್ತಿದ್ದು, ಹುತಾತ್ಮರ ಸ್ಮಾರಕದ ಗನ್‌ಗಳನ್ನು ಇಲ್ಲಿರಿಸಲು ಉದ್ದೇಶಿಸಲಾಗಿದೆ. ಈ ಕಾಮಗಾರಿಗಳು ಒಂದು ತಿಂಗಳೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಳ್ಳಿಚಟ್ಟಂಬಿ (ಕ) + ಪಳ್ಳಿಚಟ್ಟಂಬಿ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಲವ್ ಇನ್ಶೂರೆನ್ಸ್ ಕಂಪನಿ (ತೆ)	4 ಪ್ರದರ್ಶನಗಳು
ಸಂಗಂ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಅಪಘಾತದಲ್ಲಿ ಗಾಯಗೊಂಡಿದ್ದ ಅಪರಿಚಿತ ಮಹಿಳೆ ಸಾವು

ವಾರಸುದಾರರ ಪತ್ತೆಗೆ ಪೊಲೀಸರು ಮನವಿ

ಮೈಸೂರು, ಏ.27– ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಅಪರಿಚಿತ ಮಹಿಳೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.



ಮೈಸೂರಿನ ಹೂಟಗಳ್ಳಿ ಸಿಗ್ನಲ್ ಬಳಿ ಕಳೆದ ಫೆಬ್ರವರಿ 3ರಂದು ಬೆಳಗ್ಗೆ 6 ಗಂಟೆ ಸಮಯದಲ್ಲಿ ರಸ್ತೆ ದಾಟುತ್ತಿದ್ದ ಸುಮಾರು 60 ವರ್ಷದ ಮಹಿಳೆಗೆ ಕೂರ್ಗಳ್ಳಿ ಕಡೆಯಿಂದ ಬಂದ ಬೈಕ್ ಡಿಕ್ಕಿ ಹೊಡೆದಿತ್ತು. ಈ ವೇಳೆ ಮಹಿಳೆ ರಸ್ತೆಗೆ ಬಿದ್ದು, ಅವರ ತಲೆಗೆ ಗಂಭೀರ ಗಾಯವಾಗಿತ್ತು. ಕೂಡಲೇ ಅವರನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಮಹಿಳೆಯ ಕೈಗಳಲ್ಲಿ ಹಳೆ ಕಾಲದ ರಂಗೋಲಿಯ ಹಸಿರು ಹಚ್ಚೆ ಗುರುತಿದೆ.

ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ಮಹಿಳೆಯ ವಾರಸುದಾರರಿದ್ದರೆ ದೂ.ಸಂ.0821–2418529 ಅಥವಾ 9480802262ಕ್ಕೆ ಕರೆ ಮಾಡಿ, ಸಂಪರ್ಕಿಸುವಂತೆ ಮನವಿ ಮಾಡಿದ್ದಾರೆ.

ಜೆಎಸ್‌ಎಸ್ ಆಸ್ಪತ್ರೆ –ಕೆಎಸ್‌ಸಿಎ ಒಡಂಬಡಿಕೆ



ಮೈಸೂರು, ಏ. 27 – ಕೆಎಸ್‌ಸಿಎ ಆಯೋಜಿಸುವ ಕ್ರಿಕೆಟ್ ಪಂದ್ಯಗಳು ಮತ್ತು ಇತರೆ ಕಾರ್ಯಕ್ರಮಗಳ ಸಂದರ್ಭಗಳಲ್ಲಿ ಕ್ರೀಡಾಳುಗಳು ಮತ್ತು ಅಧಿಕಾರಿಗಳಿಗೆ ಅಗತ್ಯವಿರುವ ವೈದ್ಯಕೀಯ ಸೇವೆಗಳನ್ನು ನೀಡಲು ಜೆಎಸ್‌ಎಸ್ ಆಸ್ಪತ್ರೆ ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ನಡುವೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ ಮತ್ತು ಮೈಸೂರು ಪ್ರಾಂತ್ಯದ ಕೆಎಸ್‌ಸಿಎ ಆಡಳಿತ ಮಂಡಳಿ ಸದಸ್ಯರು ಮತ್ತು ಸಂಯೋಜಕ ಪಿ. ಶ್ರೀನಿವಾಸಪ್ರಸಾದ್ ಪರಸ್ಪರ ಒಡಂಬಡಿಕೆಗೆ ಸಹಿ ಮಾಡಿದರು.

ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಪಂದ್ಯಗಳು ನಡೆಯುವ ಸಂದರ್ಭಗಳಲ್ಲಿ ಪ್ರಥಮ ಚಿಕಿತ್ಸೆ, ಫಿಸಿಯೋಥೆರಪಿ, ತುರ್ತು ಆಂಬ್ಯುಲೆನ್ಸ್, ಶುಶ್ರೂಷಕರು ರಿಹ್ಯಾಬಿಲಿಟೇಷನ್ ಸೇವೆಗಳನ್ನು ಒದಗಿಸಲಾಗುವುದು. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಆಸ್ಪತ್ರೆಯಲ್ಲಿ ಪುನಶ್ಚೇತರಿಕೆ ಹಾಗೂ ಚಿಕಿತ್ಸೆ ಇತ್ಯಾದಿ ವೈದ್ಯಕೀಯ ಸೇವೆಗಳನ್ನು ನೀಡಲಾಗುವುದು. ವೈದ್ಯರು ಮತ್ತು ಸಿಬ್ಬಂದಿಯ ನಿಯೋಜನೆ ಮಾಡಲಾಗುವುದು. ಕೆಎಸ್‌ಸಿಎ ವತಿಯಿಂದ ಪಂದ್ಯಗಳ ವೇಳಾಪಟ್ಟಿ, ಆರೋಗ್ಯ ಸೇವೆ ನೀಡಲು ಅಗತ್ಯ ಮೂಲ ಸೌಲಭ್ಯಗಳಿರುವ ತಾತ್ಕಾಲಿಕ ಸ್ಥಳ ನಿಯೋಜನೆ, ನುರಿತ ಸಂಯೋಜಕರ ನಿಯೋಜನೆ ಮಾಡಲಾಗುತ್ತದೆ.

ಈ ಸಂದರ್ಭದಲ್ಲಿ ಕೆಎಸ್‌ಸಿಎಯ ಅರವಿಂದಗೌಡ, ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಆರ್. ಮಹೇಶ್, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕರಾದ ಡಾ. ಸಿ.ಪಿ. ಮಧು, ಜೆಎಸ್‌ಎಸ್ ಕಾಲೇಜ್ ಆಫ್ ಫಿಸಿಯೋಥೆರಪಿ ಪ್ರಾಂಶುಪಾಲರಾದ ಡಾ. ಕವಿತಾ ರಾಜ, ಡಾ. ಮಂಜುನಾಥ ಶೆಟ್ಟಿ, ಡಾ. ವಿಜಯ್ ಸ್ಯಾಮ್ಯುಯಲ್ ಉಪಸ್ಥಿತರಿದ್ದರು.

ಸಿಇಟಿ ವೇಳೆ ವಿಪ್ರ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದವರ ವಿರುದ್ಧ ಸೂಕ್ತ ಕ್ರಮಕ್ಕೆ ಮನವಿ

ಮೈಸೂರು, ಏ.27– ಸಿಇಟಿ ವೇಳೆ ವಿಪ್ರ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದ್ದು ಖಂಡನೀಯವಾಗಿದ್ದು, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ವಿಪ್ರ ಪರಸ್ಪರ ಸಹಾಯ ಸಮಿತಿ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.



ಸಿಇಟಿ ವೇಳೆ ವಿಪ್ರ ವಿದ್ಯಾರ್ಥಿಗಳಿಂದ ಜನಿವಾರ ತೆಗೆಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ವಿಪ್ರ ಪರಸ್ಪರ ಸಹಾಯ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಮನವಿ ಸಲ್ಲಿಸಲಾಯಿತು.

ಬೆಂಗಳೂರಿನ ಕೋರಮಂಗಲದಲ್ಲಿರುವ ಕೃಪಾನಿಧಿ ಶಾಲೆ ಮತ್ತು ನಾಗಾರ್ಜುನ ಎಜುಕೇಶನ್ ಸೊಸೈಟಿ ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ವೇಳೆ ವಿಪ್ರ ವಿದ್ಯಾರ್ಥಿಗಳು ಧರಿಸಿದ್ದ ಧಾರ್ಮಿಕ ಚಿಹ್ನೆಯಾದ ಜನಿವಾರವನ್ನು ಬಲವಂತವಾಗಿ ತೆಗೆಸಿರುವುದು ಅತ್ಯಂತ ಖಂಡನೀಯ ಹಾಗೂ ದುರದೃಷ್ಟಕರ. ಜನಿವಾರ ಕೇವಲ ಒಂದು ದಾರವಲ್ಲ, ಇದು ನಮ್ಮ ಧಾರ್ಮಿಕ ಪರಂಪರೆ, ಸಂಸ್ಕಾರ ಮತ್ತು ಸಂಸ್ಕೃತಿಯ ಪವಿತ್ರವಾದ ಧಾರಣೆಯಾಗಿದೆ. ಪರೀಕ್ಷೆ ನೆಪದಲ್ಲಿ ವಿದ್ಯಾರ್ಥಿಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ನಡೆದುಕೊಂಡಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಹಿಸಲಸಾಧ್ಯವಾದ ಘಟನೆ. ಇದು ವಿಪ್ರ ಸಮುದಾಯದ ಧಾರ್ಮಿಕ ಹಕ್ಕುಗಳ ಉಲ್ಲಂಘನೆಯಾಗಿದೆ.

ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಆದೇಶ ಹೊರಡಿಸಬೇಕು. ಈ ಅಮಾನವೀಯ ಮತ್ತು ಅಸಂವಿಧಾನಿಕ ಕೃತ್ಯ ಎಸಗಿದ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಧಾರ್ಮಿಕ ಸ್ವಾತಂತ್ರ್ಯ ಮತ್ತು ಗೌರವವನ್ನು ಕಾಪಾಡುವಲ್ಲಿ ಆಡಳಿತ ಮಂಡಳಿಗಳು ಜವಾಬ್ದಾರಿಯಿಂದ ವರ್ತಿಸುವಂತೆ ಸೂಚಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಮನವಿ ಸಲ್ಲಿಸಿದ ವೇಳೆ ಈ ಸಂದರ್ಭದಲ್ಲಿ ವಿಪ್ರ ಪರಸ್ಪರ ಸಹಾಯ ಸಮಿತಿ ಗೌರವಾಧ್ಯಕ್ಷ ಇಳೈಆಳ್ವಾರ್ ಸ್ವಾಮೀಜಿ, ಸಂಚಾಲಕ ಬಿ.ಎಸ್. ಸುಂದರೇಶ್, ಸಹಸಂಚಾಲಕ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಜಂಟಿ ಕಾರ್ಯದರ್ಶಿ ಎಸ್.ರಂಗನಾಥ, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಎಂ.ಎಸ್.ಪ್ರಶಾಂತ್, ಎನ್.ವಿಶ್ವನಾಥ್, ಸಮಿತಿಯ ಸದಸ್ಯರಾದ ವೀಣಾ, ಲಕ್ಷ್ಮೀ, ಮಹೇಶ್, ನಾಗಭೂಷಣ್ ಮತ್ತಿತರರಿದ್ದರು.

ಮೈಸೂರಲ್ಲಿ ಹೀಟ್ ಸ್ಟ್ರೋಕ್‌ಗೆ ಮತ್ತೊಂದು ಶ್ವಾನ ಬಲಿ

ಮತ್ತೆರಡಕ್ಕೆ ಚಿಕಿತ್ಸೆ ಮುಂದುವರೆಕೆ

ಮೈಸೂರು,ಏ.27(ಪಿಎಂ)– ಹೀಟ್ ಸ್ಟ್ರೋಕ್‌ನಿಂದ ಮೈಸೂರಿನಲ್ಲಿ ಮತ್ತೊಂದು ಶ್ವಾನ ಸಾವನ್ನಪ್ಪಿದೆ. ಬೀಗಲ್ ವರ್ಗಕ್ಕೆ ಸೇರಿದ ನಾಲ್ಕು ವರ್ಷದ ಹೆಣ್ಣು ಶ್ವಾನ ಸೋನು ಬಿಸಿಲಿನ ಹೊಡೆತಕ್ಕೆ ಅನಾರೋಗ್ಯಕ್ಕೆ ತುತ್ತಾಗಿ ಮೃತಪಟ್ಟಿದೆ.

ಹೀಟ್ ಸ್ಟ್ರೋಕ್‌ನಿಂದ ಶನಿವಾರ ಗೋಲ್ಡನ್ ರಿಟ್ರೈವರ್ ವರ್ಗಕ್ಕೆ ಸೇರಿದ 7 ವರ್ಷದ ರೋನಿ ಎಂಬ ಗಂಡು ಶ್ವಾನ ಸಾವನ್ನಪ್ಪಿತ್ತು. ಅಂದೇ ರಾತ್ರಿ ಸೋನು ಸಹ ಬಿಸಿಲಿನ ತಾಪದಿಂದ ಅನಾರೋಗ್ಯಕ್ಕೆ ತುತ್ತಾಗಿ ಜೀವಬಿಟ್ಟಿದೆ. ಈ ಎರಡೂ ಶ್ವಾನಗಳನ್ನು ವಿಜಯನಗರದ ಶ್ರೀ ಪೆಟ್ ಆಸ್ಪತ್ರೆಗೆ ಕರೆತಂದರೂ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿವೆ.

ಜೊತೆಗೆ ಹೀಟ್ ಸ್ಟ್ರೋಕ್‌ನಿಂದ ಅನಾರೋಗ್ಯಕ್ಕೆ ತುತ್ತಾಗಿರುವ ಇನ್ನೆರಡು ಶ್ವಾನಗಳು ಇದೇ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಚಿಕಿತ್ಸೆ ಪಡೆಯುತ್ತಿವೆ. ಈ ಎರಡೂ ಸಹ ಕಿಡ್ನಿ ಸಮಸ್ಯೆಯಿಂದ ಬಳಲುತ್ತಿವೆ.

ಈ ಸಂಬಂಧ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಶ್ರೀ ಪೆಟ್ ಆಸ್ಪತ್ರೆ ವೈದ್ಯ ಡಾ.ಕಿರಣ್ ಕುಂದರಗಿ, ರೋನಿ ಸಾವನ್ನಪ್ಪಿದ ರಾತ್ರಿಯೇ ಸೋನು ಸಾವನ್ನಪ್ಪಿತು. ಇದರ ಸಾವಿಗೂ ಹೀಟ್ ಸ್ಟ್ರೋಕ್ ಕಾರಣ. ಈಗ ನಮ್ಮಲ್ಲಿ ಇನ್ನು ಎರಡು ಶ್ವಾನಗಳು ಹೀಟ್ ಸ್ಟ್ರೋಕ್ ಸಮಸ್ಯೆಯಿಂದ ಕಿಡ್ನಿ ಹಾನಿಗೆ ಚಿಕಿತ್ಸೆ ಪಡೆಯುತ್ತಿವೆ. ಲ್ಯಾಬ್ರಡಾರ್ ರಿಟ್ರೈವರ್ ತಳಿಯ ಬೊಯ್ಲಾ ಎಂಬ 4 ವರ್ಷದ ಹೆಣ್ಣು ಶ್ವಾನ ಬಿಸಿಲಿನಲ್ಲಿ ನಡೆಸಿಕೊಂಡು ಹೋಗಿದ್ದ ಪರಿಣಾಮ ಹೀಟ್ ಸ್ಟ್ರೋಕ್ ಸಮಸ್ಯೆ ಎದುರಿಸುತ್ತಿದೆ. ಕಿಡ್ನಿಗೆ ಹಾನಿಯಾಗಿರುವ ಇದಕ್ಕೆ ಕಳೆದ 15 ದಿನಗಳಿಂದ ಚಿಕಿತ್ಸೆ ನೀಡುತ್ತಿದ್ದು, ಸಂಪೂರ್ಣವಾಗಿ ಗುಣಮುಖವಾಗಿಲ್ಲ. ಆದರೆ ಚೇತರಿಕೆ ಕಾಣುತ್ತಿದೆ ಎಂದು ತಿಳಿಸಿದರು.

ಹೀಟ್ ಸ್ಟ್ರೋಕ್‌ನಿಂದ ಕಿಡ್ನಿಗೆ ಹಾನಿಯಾಗುವುದೂ ಸೇರಿದಂತೆ ಬಹು ಅಂಗಾಂಗ ವೈಫಲ್ಯದ ಸಮಸ್ಯೆ ಎದುರಾಗಲಿದ್ದು, ಹಾಗಾಗಿ ಶ್ವಾನಗಳನ್ನು ಈ ಸಮಯದಲ್ಲಿ ಮುತುವರ್ಜಿಯಿಂದ ಆರೈಕೆ ಮಾಡಬೇಕಾಗುತ್ತದೆ. ಜರ್ಮನ್ ಶೆಫರ್ಡ್ ತಳಿಯ ಒಂದು ವರ್ಷದ ಗಂಡು ಶ್ವಾನ ಸಹ ಇಂದಿನಿಂದ ನಮ್ಮಲ್ಲಿ ಚಿಕಿತ್ಸೆ ಪಡೆಯುತ್ತಿದೆ. ಇದರ ಹೆಸರು ಮ್ಯಾಕ್ಸ್. ನಿನ್ನೆ ಮಧ್ಯರಾತ್ರಿ ಇದನ್ನು ಕರೆತಂದಿದ್ದರು. ಇದಕ್ಕೂ ಕಿಡ್ನಿಗೆ ಹಾನಿಯಾಗಿದೆ. ಬೆಳಗ್ಗೆ ಮತ್ತು ಸಂಜೆ ಚಿಕಿತ್ಸೆಗೆ ನಮ್ಮಲ್ಲಿಗೆ ಕರೆತರುತ್ತಿದ್ದಾರೆ ಎಂದು ಹೇಳಿದರು.

ಮೈಸೂರು ಕನ್ನಡ ವೇದಿಕೆಯಿಂದ ಬಸವಣ್ಣ, ಸಿದ್ಧಗಂಗಾ ಶ್ರೀಗಳ ಜಯಂತಿ ಆಚರಣೆ



ಸಮಾರಂಭದಲ್ಲಿ ವಿವಿಧ ವಲಯದ ಸಾಧಕರನ್ನು ಸನ್ಮಾನಿಸಲಾಯಿತು

ಮೈಸೂರು, ಏ.27– ಮೈಸೂರು ಕನ್ನಡ ವೇದಿಕೆ ವತಿಯಿಂದ ಬಸವಣ್ಣ ಮತ್ತು ಶ್ರೀ ಸಿದ್ಧಗಂಗಾ ಜಯಂತಿ ಕಾರ್ಯಕ್ರಮವನ್ನು ನಗರದ ನಮನ ಕಲಾ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾಯಕವೇ ಕೈಲಾಸ ಎಂದ ಬಸವಣ್ಣ ಎಲ್ಲರಲ್ಲೂ ಸಮಾನತೆಯನ್ನು ಕಾಣಬೇಕೆಂದು ಅವರ ವಚನಗಳಲ್ಲಿ ಹೇಳುತ್ತದೆ. ಆದರೆ ಬಸವಣ್ಣನ ಜಯಂತಿ ಬಹಳ ವಿಜೃಂಭಣೆಯಿಂದ ಮೆರವಣಿಗೆಯನ್ನು ಮಾಡುತ್ತೇವೆ ಬಸವಣ್ಣನ ಆದರ್ಶಗಳನ್ನು ಯಾರು ಪಾಲನೆ ಮಾಡುವುದಿಲ್ಲ ಇಂದಿಗೂ ಸಹ ಅಸ್ಪೃಶ್ಯತೆಯು ಜೀವಂತವಾಗಿದೆ ಮೊದಲೆಲ್ಲ ಹಳ್ಳಿಗಳಲ್ಲಿ ಕಾಣುತ್ತಿದ್ದೆವು ಆದರೆ ಈಗ ಪಟ್ಟಣಕ್ಕೆ ಹಬ್ಬಿದೆ. ಅವನ್ಯಾರವ ಅವನ್ಯಾರವ ಇವ ನಮ್ಮವ ಇವ ನಮ್ಮವ ಎಂದು ಘೋಷಣೆಯ ಮೂಲಕ ನಾವೆಲ್ಲ ಸಾರುತ್ತೇವೆ ಆದರೆ ಬಸವಣ್ಣನವರನ್ನು ಫೋಟೋದಲ್ಲಿಟ್ಟು ಪೂಜೆ ಮಾಡುವುದಕ್ಕಿಂತ ಅವರ ಆದರ್ಶಗಳನ್ನು ನಾವು ಪಾಲನೆ ಮಾಡಬೇಕು.

ಸಿದ್ದಗಂಗಾ ಶ್ರೀಗಳು ವಿದ್ಯೆ ದಾನ ಜೊತೆಗೆ ಅನ್ನದಾನವು ಸಹ ಮಾಡಿದರು ಯಾರು ಕೂಡ ಹಸಿವಿನಿಂದ ಬಳಲಬಾರದು ಅನ್ನದಾನ ಮಾಡುವುದು ನಮ್ಮ ಧರ್ಮ ಎಂದರು ಅಂದಿನ ಪ್ರಧಾನಿ ವಾಜಪೇಯಿರವರು ಉತ್ತರ ಮೇ ಗಂಗಾ ದಕ್ಷಿಣ ಮೇ ಸಿದ್ಗಂಗಾ ಎಂದರು. ಇಂದು ಮೈಸೂರು ವೇದಿಕೆಯಿಂದ ಈ ಮಹಾನ್ ವ್ಯಕ್ತಿಗಳ ಜಯಂತಿಯನ್ನು ಮಾಡುತ್ತಿರುವುದು ಬಹಳ ಸಂತೋಷಕರವಾದ ವಿಷಯ ಶ್ರೀಗಳ ಹೆಸರಿನಲ್ಲಿ ಸನ್ಮಾನ ಮಾಡಿಸಿಕೊಳ್ಳುತ್ತಿರುವವರು ಪುಣ್ಯ ಮಾಡಿದವರು ಎಂದು ಮಾ ಗು ಸದಾನಂದಯ್ಯನವರು ಹೇಳಿದರು.

ಸಿದ್ದಗಂಗಾ ಶ್ರೀಗಳು ಲಕ್ಷಾಂತರ ಜನಕ್ಕೆ ವಿದ್ಯ ದಾನ ಅನ್ನದಾನಮಾಡಿ ಇಂದಿಗೂ ಅವರನ್ನು ನಡೆದಾಡುವ ದೇವರು ಎಂದು ಕರ್ನಾಟಕದಲ್ಲಿ ಮನೆ ಮಾತಾಗಿದೆ. ಇಂಥ ಮಹಾನುಭಾವರು ನಮ್ಮ ನಾಡಿನಲ್ಲಿ ಹುಟ್ಟಿರುವುದು ನಮ್ಮ ಪುಣ್ಯ ಅವರ ಆದರ್ಶಗಳನ್ನು ನಾವು ಪಾಲನೆ ಮಾಡಬೇಕು ಮೈಸೂರು ಕನ್ನಡ ವೇದಿಕೆಯ ಈ ಕಾರ್ಯಕ್ರಮ ಅರ್ಥಪೂರ್ಣವಾಗಿದೆ ಎಂದು ಚುಟುಕು ಸಂಪಾದಕ ಎಂ ಜಿ ಆರ್ ಅರಸು ಹೇಳಿದರು.

ಸನ್ಮಾನಿತರನ್ನು ಉದ್ದೇಶಿಸಿ ಮಾಜಿ ನಗರ ಪಾಲಿಗೆ ಮಾಜಿ ಸದಸ್ಯ ಬಿ .ವಿ ಮಂಜುನಾಥ್ ಮಾತನಾಡಿ, ಸಂಘ ಸಂಸ್ಥೆಗಳು ಇಂಥ ಅರ್ಥಪೂರ್ಣ ಕಾರ್ಯಕ್ರಮವನ್ನು ಮಾಡುವುದರಿಂದ ಮಹಾನ್ ವ್ಯಕ್ತಿಗಳನ್ನು ಸ್ಮರಿಸಿದಂತಾಗುತ್ತದೆ ಎಂದರು.


ಇದೇ ವೇಳೆ ವೇದಿಕೆ ಅಧ್ಯಕ್ಷ ಎಸ್ ಬಾಲಕೃಷ್ಣ ಮಾತನಾಡಿ, ಸಾಧಕರ ಜಯಂತಿ ಆಚರಿಸುತ್ತೇವೆ. ಅವರ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತೇವೆ. ಇಷ್ಟು ಸಾಲದು, ಅವರ ಆದರ್ಶ ಪಾಲನೆಯಾಗಬೇಕು ಎಂದರು.

ಬಸವಣ್ಣ ಮತ್ತು ಸಿದ್ದಗಂಗಾ ಶ್ರೀ ಪ್ರಶಸ್ತಿಗೆ ಫಾತಿಮಾ–ಶಿಕ್ಷಕಿ, ಚನ್ನಬಸಪ್ಪ ವಚನ–ಗಾಯಕರು, ರೇಣುಕಾ –ಶಿಕ್ಷಕಿ, ಕೆ ನಾಗೇಶ್ ನಾಯಕ್–ಸಮಾಜ ಸೇವಕರು, ಮಂಜಪ್ಪ ಬೈರಾ ಮುಟಿ–ಕಾರ್ಮಿಕ ಮುಖಂಡರು, ಆರ್ ಕೆ ಕರ್ನಾಟಕ–ಸಾಹಿತ್ಯ ಕ್ಷೇತ್ರ, ರಾಮು–ಪೌರಕಾರ್ಮಿಕ, ರಮೇಶ್–ದೈಹಿಕ ಶಿಕ್ಷಕರು, ಚೈತ್ರ–ಟಿವಿ ಮಾಧ್ಯಮ, ರಂಜಿನಿ ಎನ್–ಸಮಾಜಸೇವಕರು ಭಾಜನರಾದರು.

ವೇದಿಕೆ ಪದಾಧಿಕಾರಿಗಳಾದ ಬೋಗಾದಿ ಸಿದ್ದೇಗೌಡ, ಗೋಪಿ, ಎಲ್‌ಐಸಿ ಸಿದ್ದಪ್ಪ, ಹೊನೆಕೆರೆ ಸ್ವಾಮಿ, ಮಾದಪ್ಪ ,ಸಾಯಿ ಚಾಮರಾಜ ಮಂಟಕಳ್ಳಿ, ಕಾವೇರಮ್ಮ, ಮಾಲಿನಿ ಮುಂತಾದವರಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಶ ಭಟ್, ರವಿ ನಾಲಾಬೀದಿ ಉಪಸ್ಥಿತರಿದ್ದರು.

ಗ್ರೀಸ್‌ನಲ್ಲಿ ಧಾರ್ಮಿಕ ಪುನರುಜ್ಜೀವನ; ದೇವಿ ಮಹಾತ್ಮೆ ಕಾರ್ಯಕ್ರಮ

ವಿಶ್ವದ ಉಳಿವು ಗೀತೆಯ ಸಂದೇಶ, ದೇವಿ ಮಹಾತ್ಮೆ ಅವಲಂಬಿಸಿದೆ: ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ



ಗ್ರೀಕ್‌ನಲ್ಲಿ ನಡೆದ 'ದೇವಿ ಮಹಾತ್ಮೆ– ಧಾರ್ಮಿಕ ಪುನರುಜ್ಜೀವನ' ಕಾರ್ಯಕ್ರಮದಲ್ಲಿ ಉಡುಪಿಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಸೇರಿದಂತೆ ಅನೇಕ ಧರ್ಮ ಗುರುಗಳು, ವಿದ್ವಾಂಸರು ಹಾಗೂ ಚಿಂತಕರು ಭಾಗವಹಿಸಿದ್ದರು.

ಮೈಸೂರು, ಏ.27– ವಿಶ್ವದ ಉಳಿವು ಗೀತೆಯ ಸಂದೇಶ ಹಾಗೂ ದೇವಿ ಮಹಾತ್ಮೆಯನ್ನು ಅವಲಂಭಿಸಿದೆ ಎಂದು ಉಡುಪಿಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ಮೊದಲ ಬಾರಿಗೆ ಗ್ರೀಕ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಭಾರತೀಯ ಧರ್ಮ ಗುರುಗಳು, ವಿದ್ವಾಂಸರು ಹಾಗೂ ಚಿಂತಕರನ್ನೊಳಗೊಂಡ 'ದೇವಿ ಮಹಾತ್ಮೆ– ಧಾರ್ಮಿಕ ಪುನರುಜ್ಜೀವನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಆಶೀರ್ವಚನ ನೀಡಿದರು.

ಶ್ರೀಮದ್ ಭಗವದ್ಗೀತೆ ಮತ್ತು ದೇವಿ ಪುರಾಣವು ಅಹಂಕಾರದ ಮೇಲೆ ಸದಾಚಾರವನ್ನು ಬೋಧಿಸುವುದು, ಅನ್ಯಾಯದ ಮೇಲೆ ಧರ್ಮವನ್ನು ಮತ್ತು ಯುದ್ಧದ ಮೇಲೆ ಶಾಂತಿಯನ್ನು ವ್ಯಾಖ್ಯಾನಿಸುವುದು ಸೇರಿದಂತೆ ಹಲವಾರು ಸಾಮಾನ್ಯ ವಿಷಯಗಳನ್ನು ಒಳಗೊಂಡಿವೆ. ವಿಶ್ವದ ಉಳಿವು ಗೀತೆಯ ಸಂದೇಶ ಹಾಗೂ ದೇವಿ ಮಹಾತ್ಮೆಯನ್ನು ಅವಲಂಬಿಸಿದೆ. ಈ ಕಾರಣಕ್ಕಾಗಿಯೇ ಕೋಟಿ ಗೀತಾ ಲೇಖನದ ಸಂಕಲ್ಪ ಹೊಂದಲಾಗಿದೆ ಎಂದು ತಿಳಿಸಿದರು.

ಗ್ರೀಕ್ ಸರ್ಕಾರವು ಇಂತಹ ಕಾರ್ಯಕ್ರಮವನ್ನು ಅತ್ಯಂತ ಅಭಿಮಾನ ಪೂರ್ವಕವಾಗಿ ಅತ್ಯಂತ ಆಸಕ್ತಿಯಿಂದ ಆಯೋಜಿಸಿದ್ದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು, ಜಗತ್ತಿನಲ್ಲಿ ಸಹೋದರತ್ವ ಮತ್ತು ಏಕತೆಯ ಭಾವನೆಯನ್ನು ಗಟ್ಟಿಗೊಳಿಸಲು ಗ್ರೀಕ್ ಒಲಿಂಪಿಕ್ಸ್ ಪ್ರಾರಂಭಿಸಿತು ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಅನ್ಯಾಯದ ವಿರುದ್ಧ ಶಾಂತಿ ಗೆಲ್ಲಲಿದೆ ಎಂಬ ಸಂದೇಶವನ್ನೊಳಗೊಂಡ 'ದೇವಿಯ ಕ್ರಾನಿಕಲ್ಸ್' ಚಲನಚಿತ್ರ ಬಿಡುಗಡೆಗೊಳಿಸಲಾಯಿತು. ಶ್ರೀಗಳು ಗಣ್ಯರು, ಗ್ರೀಕ್ ಪ್ರಜೆಗಳು ಸೇರಿದಂತೆ ಕಾರ್ಯಕ್ರಮದಲ್ಲಿ ನೆರೆದಿದ್ದವರಿಗೆ ಕೋಟಿ ಗೀತಾ ಲೇಖನ ಯಜ್ಞದೀಕ್ಷೆ ನೀಡಿದರು. ಇದೇ ವೇಳೆ ಶ್ರೀಗಳನ್ನು ಸನ್ಮಾನಿಸಲಾಯಿತು.

ಎರಡು ಮಹಾನ್ ನಾಗರಿಕತೆಗಳ ಸಂಗಮವಾಗಿದ್ದ ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಬಿಎಪಿಎಸ್‌ನ ಶ್ರೀ ಭದ್ರೇಶ್ ದಾಸ್ ಸ್ವಾಮೀಜಿ, ಶ್ರೀಶೈಲಂನ ಶ್ರೀ ಚೆನ್ನ ಸಿದ್ಧರಾಮ ಸ್ವಾಮೀಜಿ, ಜನಪ್ರಿಯ ಗ್ರೀಕ್ ನಟ ಅಂತಿಮೋಸ್ ಅನನಿಯದಾಸ್, ಗ್ರೀಕ್‌ನ ಭಾರತದ ರಾಯಭಾರ ಕಚೇರಿಯ ಶ್ರೀ ಬಾಲ್ಜಿ ನಾಗರತ್, ಚಾರ್ಜ್ ಡಿ ಅಫೇರ್ಸ್ ಸೇರಿದಂತೆ ಅನೇಕ ಧಾರ್ಮಿಕ ಗುರುಗಳು, ಭಾರತದ ವಿದ್ವಾಂಸರು ಮತ್ತು ಚಿಂತಕರು ಭಾಗವಹಿಸಿದ್ದರು.

ಮೂರು ದಿನದಲ್ಲಿ ಒಪ್ಪಿಕೊಳ್ಳಿ: ಇಲ್ಲದಿದ್ದರೆ ತೈಲ ಪೈಪ್‌ಲೈನ್‌ಗಳು ಸ್ಫೋಟ

ಇರಾನ್‌ಗೆ ಟ್ರಂಪ್ ವಾರ್ನಿಂಗ್



ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್‌ಗೆ ಹೊಸ ಎಚ್ಚರಿಕೆ ನೀಡಿದ್ದು, ಕದನ ವಿರಾಮಕ್ಕೆ ಒಪ್ಪಿಕೊಳ್ಳಲು ಮೂರು ದಿನಗಳ ಕಾಲಾವಕಾಶ ನೀಡಿದ್ದಾರೆ.

ಫಾಕ್ಸ್ ನ್ಯೂಸ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್ ಅವರು, ಒಂದು ವೇಳೆ ಇರಾನ್ ತೈಲ ರಫ್ತು ಮಾಡಲು ಸಾಧ್ಯವಾಗದಿದ್ದರೆ, ತೈಲ ಸಂಗ್ರಹಣಾ ಸಾಮರ್ಥ್ಯ ಮೀರಿ ಪೈಪ್‌ಲೈನ್‌ಗಳ ಒಳಗೆ ಒತ್ತಡ ಹೆಚ್ಚಾಗಲಿದೆ. ಇದರಿಂದಾಗಿ ಪೈಪ್‌ಲೈನ್‌ಗಳು ಒಳಗಿನಿಂದಲೇ ಸ್ಫೋಟಗೊಳ್ಳಲಿವೆ ಎಂದು ಅವರು ಎಚ್ಚರಿಸಿದ್ದಾರೆ.

ಅಮೆರಿಕದ ನೌಕಾಪಡೆಯು ಇರಾನ್‌ನ ಬಂದರುಗಳನ್ನು ಸಂಪೂರ್ಣವಾಗಿ ದಿಗ್ಬಂಧನ ಮಾಡಿದ್ದರಿಂದ ಇರಾನ್‌ಗೆ ತನ್ನ ತೈಲವನ್ನು ರಫ್ತು ಮಾಡಲು ಸಾಧ್ಯವಾಗುತ್ತಿಲ್ಲ. ತೈಲ ಹರಿವು ನಿಂತರೆ, ಪೈಪ್‌ಲೈನ್‌ಗಳಲ್ಲಿ ಅತಿಯಾದ ಒತ್ತಡ ಉಂಟಾಗಿ ಅವು ಯಾಂತ್ರಿಕವಾಗಿ ಮತ್ತು ತಾಂತ್ರಿಕವಾಗಿ ಹಾನಿಗೊಳಗಾಗುತ್ತವೆ ಎಂದು ಟ್ರಂಪ್ ಹೇಳಿದ್ದಾರೆ.

ಈ ರೀತಿ ಪೈಪ್‌ಲೈನ್‌ಗಳು ಸ್ಫೋಟಗೊಂಡರೆ ಅಥವಾ ಹಾನಿಗೊಳಗಾದರೆ ಅದನ್ನು ಮೊದಲಿನ ಸ್ಥಿತಿಗೆ ತರಲು ಸಾಧ್ಯವಿಲ್ಲ. ಇರಾನ್ ತನ್ನ ಒಟ್ಟು ತೈಲ ಉತ್ಪಾದನಾ ಸಾಮರ್ಥ್ಯದ ಶೇ. 50 ರಷ್ಟು ಭಾಗವನ್ನು ಶಾಶ್ವತವಾಗಿ ಕಳೆದುಕೊಳ್ಳಬಹುದು ಎಂದು ತಿಳಿಸಿದರು.

ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಪಾಕಿಸ್ತಾನದ ಮೂಲಕ ಹೊಸ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಅಮೆರಿಕ ತನ್ನ ಆರ್ಥಿಕ ದಿಗ್ಬಂಧನವನ್ನು ಹಿಂತೆಗೆದುಕೊಂಡರೆ, ಜಾಗತಿಕ ತೈಲ ಸಾಗಣೆಗೆ ಪ್ರಮುಖವಾಗಿರುವ ಹಾರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವುದಾಗಿ ಇರಾನ್ ಹೇಳಿದೆ. ಟ್ರಂಪ್ ಅವರು ಅಮೆರಿಕದ ನಿಯಮಗಳಿಗೆ ಒಪ್ಪದಿದ್ದರೆ ಈ ಯಾವುದೇ ಪ್ರಸ್ತಾವನೆಗಳು ಕೆಲಸ ಮಾಡುವುದಿಲ್ಲ ಎಂಬ ಕಠಿಣ ನಿಲುವು ಹೊಂದಿದ್ದಾರೆ.

ಇರಾನ್ ತನ್ನ ದೇಶದಲ್ಲಿ ನಡೆಸುತ್ತಿರುವ ಯುರೇನಿಯಂ ಪುಷ್ಟೀಕರಣ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇರಾನ್ ಬಳಿ ಇರುವ ಸುಮಾರು 440 ಕೆಜಿಗಿಂತ ಹೆಚ್ಚು ಪ್ರಮಾಣದ ಶೇ.60 ರಷ್ಟು ಪುಷ್ಟೀಕರಿಸಿದ ಯುರೇನಿಯಂ ದಾಸ್ತಾನನ್ನು ಸಂಪೂರ್ಣವಾಗಿ ಅಮೆರಿಕಕ್ಕೆ ಅಥವಾ ಯಾವುದಾದರೂ ಮೂರನೇ ದೇಶಕ್ಕೆ ಹಸ್ತಾಂತರಿಸಬೇಕು ಎಂಬ ಬೇಡಿಕೆಯನ್ನು ಅಮೆರಿಕ ಇರಿಸಿದೆ.

ಯುದ್ಧ ಕೊನೆಗೊಳಿಸಿ, ಹಾರ್ಮುಜ್ ಜಲಸಂಧಿ ತೆರೆಯಲು

'ಹೊಸ ಪ್ರಸ್ತಾವನೆ' ಮುಂದಿಟ್ಟ ಇರಾನ್!

ಟೆಹರಾನ್: ಪ್ರಾದೇಶಿಕ ಉದ್ವಿಗ್ನತೆ ಶಮನಗೊಳಿಸುವ ನಿಟ್ಟಿನಲ್ಲಿ ಪಾಕಿಸ್ತಾನ ಮಧ್ಯವರ್ತಿ ಮೂಲಕ ಅಮೆರಿಕಕ್ಕೆ "ಹೊಸ ಪ್ರಸ್ತಾವನೆ"ಯನ್ನು ಇರಾನ್ ಸಲ್ಲಿಸಿದೆ ಎಂದು ವರದಿಯಾಗಿದೆ.

ಆಕ್ಸಿಯೋಸ್ ಸುದ್ದಿ ಸಂಸ್ಥೆಯ ವರದಿಯ ಪ್ರಕಾರ, ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಮತ್ತು ಯುದ್ಧವನ್ನು ಕೊನೆಗೊಳಿಸಲು ನಿರ್ದಿಷ್ಟವಾದ ಯೋಜನೆಯೊಂದನ್ನು ರೂಪಿಸಲು ಇರಾನ್ ಆಫರ್ ನೀಡಲಾಗಿದೆ ಎನ್ನಲಾಗಿದೆ. ಶಾಂತಿ ಪ್ರಯತ್ನಗಳು ಹೆಚ್ಚಾಗಿ ಸ್ಥಗಿತಗೊಂಡಿರುವ ಸಮಯದಲ್ಲಿ ರಾಜತಾಂತ್ರಿಕ ಬೆಳವಣಿಗೆಯಾಗುತ್ತಿದೆ.

ಪರಮಾಣು ಶಸ್ತ್ರಾಸ್ತ್ರಗಳನ್ನು ಎಂದಿಗೂ ಪಡೆಯಬಾರದು ಎಂಬ ದೃಢ ನಿಲುವನ್ನು ಉಳಿಸಿಕೊಂಡು ಇರಾನ್ ಮಾತುಕತೆ ನಡೆಸಲು ವಾಷಿಂಗ್ಟನ್‌ಗೆ ಕರೆ ಮಾಡಬಹುದು ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇತ್ತೀಚೆಗೆ ಹೇಳಿದ್ದರು. ರಾಯಭಾರಿಗಳಾದ ಸ್ಟೀವ್ ವಿಟ್ಕಾಫ್ ಮತ್ತು ಜೇರೆಡ್ ಕುಶ್ನರ್ ಅವರ ಇಸ್ಲಾಮಾಬಾದ್‌ಗೆ ನಿಗದಿತ ಭೇಟಿಯನ್ನು ಶ್ವೇತಭವನ ರದ್ದುಗೊಳಿಸಿದ ನಂತರ ನೇರ ಮಾತುಕತೆ ಕ್ಷೀಣಿಸುತ್ತಿದೆ. ಇದರ ಹಿಂದೆ ಇರಾನ್ ಅಸಮಾಧಾನವೇ ಕಾರಣ ಎನ್ನಲಾಗುತ್ತಿದೆ. ಇರಾನ್ ಯುರೇನಿಯಂ ದಾಸ್ತಾನನ್ನು ಕನಿಷ್ಠ ಹತ್ತು ವರ್ಷಗಳ ಕಾಲ ನಿಲ್ಲಿಸಬೇಕು ಮತ್ತು ತನ್ನ ಪ್ರಸ್ತುತ ಪರಮಾಣು ದಾಸ್ತಾನನ್ನು ವಿದೇಶಕ್ಕೆ ಸ್ಥಳಾಂತರಿಸಬೇಕು ಎಂಬ ಅಮೆರಿಕದ ಬೇಡಿಕೆಯು ಪ್ರಸ್ತುತ ಬಿಕ್ಕಟ್ಟಿನ ಕೇಂದ್ರಬಿಂದುವಾಗಿದೆ.



ಆದಾಗ್ಯೂ, ಈ ನಿರ್ದಿಷ್ಟ ಅವಶ್ಯಕತೆಗಳಿಗೆ ಪ್ರತಿಕ್ರಿಯೆ ನೀಡುವ ಬಗ್ಗೆ ಇರಾನಿನ ನಾಯಕರಲ್ಲಿ ಒಮ್ಮತವಿಲ್ಲ ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ವಾರಾಂತ್ಯದಲ್ಲಿ ಮಧ್ಯವರ್ತಿಗೆ ತಿಳಿಸಿದ್ದಾರೆ. ಇದು ಸಮುದ್ರದ ಬಿಕ್ಕಟ್ಟು ಮತ್ತು ನೌಕಾ ದಿಗ್ಬಂಧನವನ್ನು ಆದ್ಯತೆಯಾಗಿ ಪರಿಹರಿಸಲು ಪ್ರಯತ್ನಿಸುವ ಎರಡು ಹಂತವಾಗಿದೆ ಎಂದು ಪಾಕಿಸ್ತಾನ ಮೂಲಕ ತಲುಪಿಸಲಾಗಿದೆ. ಈ ಪ್ರಸ್ತಾಪ ದೀರ್ಘಾವಧಿಗೆ ಕದನ ವಿರಾಮ ವಿಸ್ತರಣೆ ಅಥವಾ ಯುದ್ಧಕ್ಕೆ ಶಾಶ್ವತ ಅಂತ್ಯ"ವನ್ನು ಕಲ್ಪಿಸುತ್ತದೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

ಈ ಒಪ್ಪಂದದಡಿ ಪರಮಾಣು ಚರ್ಚೆಗಳು ಸಮುದ್ರ ಮಾರ್ಗವನ್ನು ತೆರವುಗೊಳಿಸಿದ ನಂತರ ಮಾತ್ರ ಪ್ರಾರಂಭವಾಗುತ್ತವೆ. ಶ್ವೇತಭವನವು ಅಧಿಕೃತವಾಗಿ ಪ್ರಸ್ತಾಪವನ್ನು ಸ್ವೀಕರಿಸಿದೆ" ಎಂದು ಆಕ್ಸಿಯೋಸ್ ವರದಿ ಮಾಡಿದರೂ. ಯುನೈಟೆಡ್ ಸ್ಟೇಟ್ಸ್ ಅದನ್ನು ಪರಿಶೀಲಿಸಲು ಸಿದ್ಧವಾಗಿದೆಯೇ" ಎಂಬುದು ಸ್ಪಷ್ಟವಾಗಿಲ್ಲ. ಇತ್ತೀಚಿನ ದಿನಗಳಲ್ಲಿ, ಅಬ್ಬಾಸ್ ಅರಘ್ಚಿ ಪಾಕಿಸ್ತಾನ ಮತ್ತು ಒಮಾನ್ ನಡುವೆ ಶಟಲ್ ರಾಜತಾಂತ್ರಿಕತೆಯಲ್ಲಿ ತೊಡಗಿಸಿಕೊಂಡಿದ್ದು, ಇಂದು ರಷ್ಯಾದಲ್ಲಿ ವ್ಲಾಡಿಮಿರ್ ಪುಟಿನ್‌ರೊಂದಿಗೆ ಹೆಚ್ಚಿನ ಉನ್ನತಮಟ್ಟದ ಮಾತುಕತೆ ನಡೆಸಲು ನಿರ್ಧರಿಸಿದೆ.

ಆರ್. ಅರುಣ್‌ಗೆ ಪಿಎಚ್.ಡಿ



ಮೈಸೂರು: ಡಾ.ವಿಜಯಕುಮಾರಿ ಎಸ್. ಕರಿಕಲ್ ಅವರ ಮಾರ್ಗದರ್ಶನದಲ್ಲಿ ಅರುಣ್.ಆರ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಸುನಂದಾ ಪ್ರಕಾಶ ಕಡಮೆ ಅವರ ಸಾಹಿತ್ಯ' ಎಂಬ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಹಿಳಾ ಮೀಸಲಾತಿ ಮಸೂದೆಗೆ ಸೋಲು

ಕಾಂಗ್ರೆಸ್–ಮಿತ್ರ ಪಕ್ಷಗಳ ವಿರುದ್ಧ ಬಿಜೆಪಿ ಮಹಿಳಾ ಮೋರ್ಚಾ ಪ್ರತಿಭಟನೆ



ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಕೆಆರ್ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಏ.27(ಪಿಎಂ)– ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಸೋಲಾಗಲು ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಕಾರಣ ಎಂದು ಆರೋಪಿಸಿ ಕೆಆರ್ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಸಮಾವೇಶಗೊಂಡ ಪ್ರತಿಭಟನಾಕಾರರು, ಮೊದಲಿಗೆ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಪ್ರತಿಭಟನೆ ನಡೆಸಿದರು.

'ಮಹಿಳಾ ಮೀಸಲಾತಿ ವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ಧಿಕ್ಕಾರ' ಘೋಷಣೆ ಕೂಗಿ ಪ್ರತಿಭಟನಾಕಾರರು, ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳು ಮಹಿಳಾ ಮೀಸಲಾತಿ ಮಸೂದೆ ವಿರುದ್ಧವಾಗಿ ನಡೆದುಕೊಂಡು ತಮ್ಮ ಮಹಿಳಾ ವಿರೋಧಿ ನಿಲುವು ವ್ಯಕ್ತಪಡಿಸಿವೆ ಎಂದು ದೂರಿದರು.

ಬಳಿಕ ಇಲ್ಲಿಂದ ಕೆಆರ್ ಕ್ಷೇತ್ರದ ಬಿಜೆಪಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಅಲ್ಪಸಂಖ್ಯಾತರ ಮೋರ್ಚಾದ ರಾಜ್ಯ ಕಾರ್ಯದರ್ಶಿ ರೋಜಿತಾ ಮೇರಿ, ಮಹಿಳಾ ಮೋರ್ಚಾ ನಗರಾಧ್ಯಕ್ಷೆ ರೇಣುಕಾ ರಾಜ್, ಕೆಆರ್ ಕ್ಷೇತ್ರದ ಮಹಿಳಾ ಮೋರ್ಚಾ ಅಧ್ಯಕ್ಷೆ ಸರ್ವಮಂಗಳಾ, ನಗರ ಪಾಲಿಕೆ ಮಾಜಿ ಸದಸ್ಯೆ ರೂಪಾ, ಬಿಜೆಪಿ ಮುಖಂಡರಾದ ಲಕ್ಷ್ಮೀದೇವಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಇದೇ ಕೇರಳ ರಾಜ್ಯದ, ಕ್ಯಾಲಿಕಟ್‌ನ, ಚಕ್ಕೊರತ್ ಕುಲಮ್, "ಅನರ್" ರಲ್ಲಿ ವಾಸವಾಗಿರುವ ಕೆ.ಪಿ. ಹೇಮರಾಜ್ ರವರ ಮಗ ವಿಕ್ಕಿರಾಜ್ ಇವರ ಸಂಪೂರ್ಣ ಸ್ವಾಧೀನಾನುಭವ ಹಾಗೂ ಮಾಲೀಕತ್ವಕ್ಕೆ ಒಳಪಟ್ಟ, ಇದೇ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮದ ಸರ್ವೇ ನಂ. 285, ಸದರಿ ಸ್ವತ್ತಿನ ಪೂರ್ವಕ್ಕೆ ಸರ್ವೇ ನಂ. 287 ರ ಜಮೀನು, ಪಶ್ಚಿಮಕ್ಕೆ: ಸರ್ವೇ ನಂ. 284/2ರ ಜಮೀನು, ದಕ್ಷಿಣಕ್ಕೆ: ಸರ್ವೇ ನಂ. 284/2 ರ ಉಳಿಕೆ ಜಮೀನು ಹಾಗೂ ಹುಣಸೂರಿಗೆ ಹೋಗುವ ಮುಖ್ಯರಸ್ತೆ ಹಾಗೂ ಉತ್ತರಕ್ಕೆ: ಸರ್ವೇ ನಂ.286 ರ ಜಮೀನು ಈ ಮಧ್ಯೆ ಇರುವ 0.22 ಗುಂಟೆ ಹಾಗೂ 0.29 ಗುಂಟೆ ಒಟ್ಟು 1 ಎಕರೆ 0.11 ಗುಂಟೆ ಪೂರಾ ಜಮೀನನ್ನು ನಮ್ಮ ಕಕ್ಷಿದಾರರು ನೋಂದಾಯಿತ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಪಡೆಯಲು ಇಚ್ಛಿಸಿರುವುದು ಸರಿಯಷ್ಟೆ. ಈ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದಾದರು ತಂಟೆ ತಕರಾರುಗಳು ಹಾಗೂ ಕ್ಲೇಮ್‌ಗಳಿದ್ದ ಪಕ್ಷದಲ್ಲಿ ಈ ಸಾರ್ವಜನಿಕ ತಿಳುವಳಿಕೆಯು ಪ್ರಕಟಣೆಯಾದ 7 ದಿನಗಳ ಒಳಗಾಗಿ ನಮ್ಮನ್ನು ಈ ಕೆಳಕಂಡ ವಿಳಾಸದ ಕಛೇರಿಯಲ್ಲಿ ಸೂಕ್ತ ದಾಖಲೆಗಳ ಸಮೇತವಾಗಿ ಖುದ್ದಾಗಿ ಅಥವಾ ಲಿಖಿತ ರೂಪದಲ್ಲಿ ತಮ್ಮ ತಕರಾರುಗಳನ್ನು ಸಲ್ಲಿಸ ತಕ್ಕದ್ದು, ಹಾಗೊಂದು ವೇಳೆ ಯಾವುದೇ ತಂಟೆ ತಕರಾರುಗಳು ಸದರಿ 7 ದಿನಗಳ ಒಳಗಾಗಿ ನಮ್ಮನ್ನು ತಲುಪದಿದ್ದ ಪಕ್ಷದಲ್ಲಿ, ನಮ್ಮ ಕಕ್ಷಿದಾರರು ಮೇಲೆ ಹೇಳಿದ ಸ್ವತ್ತನ್ನು ಖರೀದಿಸಲು ಸಂಪೂರ್ಣವಾಗಿ ಕಾನೂನು ಸಮ್ಮತವಾಗಿ ಹಕ್ಕುಳ್ಳವರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

ಸಹಿ/– N. Mahadevaswamy
ADVOCATE / LEGAL ADVISOR
No. 376/A, 12th cross,
Ramakrishna Nagara "G" block, Mysore-22.
Mobile: 9448038689

ದಿನಾಂಕ: 27-04-2026
ಸ್ಥಳ: ಮೈಸೂರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ನನ್ನ ಕಕ್ಷಿದಾರರಾದ ಮೈಸೂರು ನಗರದ ದೇವರಾಜ ಮೊಹಲ್ಲಾ, ಕೃಷ್ಣ ವಿಲಾಸ ರಸ್ತೆಯಲ್ಲಿ ಮುನಿಸಿಪಲ್ ಡೋರ್ ನಂಬರು ಮೂರುನೂರ ಎಂಭತ್ತನಾಲ್ಕನೇ ಮನೆಯಲ್ಲಿ ವಾಸವಾಗಿರುವ ಲೇ. ಜಿ.ಎನ್. ಅಳಶಿಂಗ್ಲಾಚಾರ್ಯ ರವರ ಪುತ್ರರಾದ ಶ್ರೀ ಎಂ.ಜಿ. ಕೃಷ್ಣರವರ ಪರವಾಗಿ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ದಿನಾಂಕ: 02–06–1977 ರ ಶುದ್ಧ ಕ್ರಯಪತ್ರ ನೋಂದಾವಣಿ ಸಂಖ್ಯೆ: 1 ನೇ ಪುಸ್ತಕದ 573 ನೇ ಸಂಪುಟದಲ್ಲಿ 63–65 ನೇ ಪುಟದಲ್ಲಿ 233 ರ ಮೂಲಕ ಈ ಕೆಳಕಂಡ 1 ಐಟಂ ನೇ ಸ್ವತ್ತನ್ನು, ಹಾಗೆಯೇ ದಿನಾಂಕ: 02–06–1977 ರ ಶುದ್ಧ ಕ್ರಯಪತ್ರ ನೋಂದಾವಣಿ ಸಂಖ್ಯೆ: 1 ನೇ ಪುಸ್ತಕದ 571ನೇ ಸಂಪುಟದಲ್ಲಿ 176–178 ನೇ ಪುಟದಲ್ಲಿ ನೋಂದಾವಣಿ ಸಂಖ್ಯೆ 234 ರ ಮೂಲಕ ಈ ಕೆಳಕಂಡ 2ನೇ ಐಟಂ ಸ್ವತ್ತನ್ನು, ದಾಸನಕೊಪ್ಪಲು ಗ್ರಾಮದಲ್ಲಿ ವಾಸವಾಗಿದ್ದ ಕರೀಗೌಡರ ಮಗ ಶಂಭುಗೌಡ ಮತ್ತು ಆತನ ಮಕ್ಕಳಿಂದ ಖರೀದಿ ಮಾಡಿದ್ದು ಕ್ರಮವಾಗಿ MR H28/2018-2019 17/11/2018 ಹಾಗೂ MR H29/2018-2019 17/11/2018 ಖಾತೆಯನ್ನು ಅವರ ಹೆಸರಿಗೆ ದಾಖಲು ಮಾಡಿಕೊಂಡು ಅದರ ಸ್ವಾಧೀನದಲ್ಲಿದ್ದ ಅದರ ಸರ್ವತಂತ್ರ ಸ್ವತಂತ್ರ ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿದ್ದು ನಕಲಿ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಸದರಿ ಸ್ವತ್ತುಗಳು ಇನ್ನೂ ವ್ಯವಸಾಯದ ಜಮೀನುಗಳು ಆಗಿದ್ದರೂ ಸಹ ಪಂಚಾಯಿತಿ ಖಾತೆ ಇತ್ಯಾದಿಗಳನ್ನು ಮಾಡಿಕೊಂಡು ಅದರ ಆಧಾರದಲ್ಲಿ ಸುಳ್ಳು ದಾವಾಗಳನ್ನು ದಾಖಲಿಸಿಕೊಂಡು ಅದನ್ನು ಕ್ರಯ ವಗೈರೆ ಮಾಡಲು ಪ್ರಯತ್ನಿಸುತ್ತಿದ್ದಾರೆಂದು ನನ್ನ ಕಕ್ಷಿದಾರರಿಗೆ ತಿಳಿದುಬಂದಿದೆ. ಆದುದರಿಂದ ಸಾರ್ವಜನಿಕರು ಮೋಸ ಹೋಗಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ಈ ಎಚ್ಚರಿಕೆ ನೋಟೀಸನ್ನು ನೀಡಲಾಗಿರುತ್ತದೆ.

ಷೆಡ್ಯೂಲ್

1. ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 52/1 ರ ವಿಸ್ತೀರ್ಣ 3 ಎಕರೆ 23 ಖುಷ್ಕಿ ಜಮೀನಿನ ಪೈಕಿ ಪೂರ್ವದ ಕಡೆ ಕ್ರಯಕ್ಕೆ ಮಾರಾಟವಾಗಿರುವ 0–23 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ ಈ ಮುಂದಿನಂತಿದೆ: ಪೂರ್ವಕ್ಕೆ: ಶಿಂಗ್ರೀ ಬೆಟ್ಟೇಗೌಡರ ಜಮೀನು ; ಉತ್ತರಕ್ಕೆ: ಪಡುವಾರಹಳ್ಳಿ ಶಿಂಗ್ರೀ ಬೆಟ್ಟೇಗೌಡರ ಜಮೀನು ; ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ: ನಾನು ಸ್ವಂತಕ್ಕೆ ಉಳಿಸಿಕೊಂಡಿರುವ 3 ಎಕರೆ ಜಮೀನು ಈ ಮಧ್ಯೆ ಇರುವ 23 ಗುಂಟೆ ಖುಷ್ಕಿ ಜಮೀನು.

2. ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೇ ನಂ. 52/1 ರ ಪೈಕಿ ಪೂರ್ವಭಾಗದ ಕಡೆ ಕ್ರಯಕ್ಕೆ ಮಾರಾಟವಾಗಿರುವ 0–20 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ ಈ ಮುಂದಿನಂತಿದೆ: ಪೂರ್ವಕ್ಕೆ: ಶಿಂಗ್ರೀ ಬೆಟ್ಟೇಗೌಡರ ಜಮೀನು ; ಪಶ್ಚಿಮಕ್ಕೆ: ನಾನು ಉಳಿಸಿಕೊಂಡಿರುವ 2–20 ಗುಂಟೆ ಜಮೀನು ; ಉತ್ತರಕ್ಕೆ: ಎಂ.ಜಿ. ಕೃಷ್ಣರವರ ಜಮೀನು ; ದಕ್ಷಿಣಕ್ಕೆ: ಶ್ರೀ ಎಂ.ಜಿ. ನರಸಿಂಹರವರ ಜಮೀನು, ಈ ಮಧ್ಯೆ ಇರುವ – 20 ಗುಂಟೆ ಜಮೀನು ಎಂ.ಜಿ. ಕೃಷ್ಣರವರ ಸ್ವತ್ತು.

ಸಹಿ/– ಎ.ವಿ. ಜಯರಾಮ ರಾವ್, ವಕೀಲರು
ನಂ. 1230/ಎ, 2ನೇ ಕ್ರಾಸ್, (ಕೃಷ್ಣಮೂರ್ತಿಪುರಂ ರಾಮ ಮಂದಿರದ ಹಿಂಭಾಗ),
ಚಾಮರಾಜ ಮೊಹಲ್ಲ, ಮೈಸೂರು– 570 004
Mob: 94484 39222

ದಿನಾಂಕ: 27–4–2026

ಸೇಂಟ್ ಆನ್ಸ್ ಎಜುಕೇಷನ್ ಸೊಸೈಟಿ ನಂ.2, ಮಿಲ್ಲರ್ ರಸ್ತೆ, ಬೆಂಗಳೂರು–52

ಬೇಕಾಗಿದ್ದಾರೆ

ಮೇಲ್ಕಂಡ ಶಿಕ್ಷಣ ಸಂಸ್ಥೆ ವತಿಯಿಂದ ಪಾಲಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಸೇಂಟ್ ಆನ್ಸ್ ಪ್ರೌಢಶಾಲೆ, ಪಾಲಹಳ್ಳಿ ಶ್ರೀರಂಗ ಪಟ್ಟಣ, ತಾ|| ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಅನುದಾನಿತ ಶಿಕ್ಷಕರ ಈ ಕೆಳಗಿನ ಹುದ್ದೆ ತುಂಬಲು ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರುರವರ ಅನುಮತಿ ಪತ್ರದ ಸಂಖ್ಯೆ: DPI, CPIO ಸಿ 8 (2):Fov 4/E 2013883/ ಖಾಹುಭ ಅನು/77)2025–26 ದಿನಾಂಕ 12.04.2026ರ ಅನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆ ವಿವರ	ವಿದ್ಯಾರ್ಹತೆ	ಮೀಸಲಾತಿ	ಹುದ್ದೆಗಳ ಸಂಖ್ಯೆ
1	ಕನ್ನಡ ಸಹಶಿಕ್ಷಕರು	B.A., B.Ed.,	ಮೀಸಲಾತಿ ಅನ್ವಯಿಸುವುದಿಲ್ಲ	01

ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳು ಪ್ರಕಟವಾದ 21 ದಿನಗಳ ಒಳಗಾಗಿ ಕಾರ್ಯದರ್ಶಿಗಳು, ಸೇಂಟ್ ಆನ್ಸ್ ಪ್ರೌಢಶಾಲೆ, ಪಾಲಹಳ್ಳಿ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ–571606 ಇವರಿಗೆ ಅರ್ಜಿ ಸಲ್ಲಿಸುವುದು ಹಾಗೂ ಅರ್ಜಿಯ ಒಂದು ಪ್ರತಿಯನ್ನು ಉಪನಿರ್ದೇಶಕರು, ಸಾ.ಶಿ. ಇಲಾಖೆ, ಮಂಡ್ಯ ಇವರಿಗೆ ಕಳುಹಿಸುವುದು. ದಿನಾಂಕ: 25.05.2026ರಂದು ಬೆಳಿಗ್ಗೆ 11.00 ಗಂಟೆಗೆ ಪಾಲಹಳ್ಳಿ ಗ್ರಾಮದಲ್ಲಿರುವ ಸೇಂಟ್ ಆನ್ಸ್ ಪ್ರೌಢಶಾಲೆಯಲ್ಲಿ ತಮ್ಮ ಮೂಲ ಪ್ರಮಾಣ ಪತ್ರದೊಂದಿಗೆ ಆಯ್ಕೆ ಸಮಿತಿ ಮುಂದೆ ಸಂದರ್ಶನಕ್ಕೆ ಹಾಜರಾಗಲು ಕೋರಿದೆ.

ವಿ.ಸೂ.: ಸಂದರ್ಶನದ ವೇಳೆ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಭತ್ಯೆ ನೀಡಲಾಗುವುದಿಲ್ಲ.

ಯೋಗಕ್ಷೇಮ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.

ನಂ. 105, 'ಕ್ಷೇಮಧಾಮ', ಎಲ್ ಐ ಸಿ ಕಾಲೋನಿ, ಶ್ರೀರಾಂಪುರ 2ನೇ ಹಂತ, ಮೈಸೂರು –570034. ಫೋ: 0821–2362369

ಸಾರ್ವಜನಿಕ ಪ್ರಕಟಣೆ

ಯೋಗಕ್ಷೇಮ ಹೌಸಿಂಗ್ ಕೋ–ಆಪರೇಟಿವ್ ಸೊಸೈಟ್(ಲಿ) ಮೈಸೂರು ಇವರು, ಜೀವವಿಮಾ ನೌಕರರು ಮತ್ತು ಜೀವ ವಿಮಾ ಪ್ರತಿನಿಧಿ ಹಾಗೂ ಇತರರಿಗಾಗಿ ಮುಡಾ ನಿಯಮಾವಳಿಗಳ (MUDA NORMS) ಪ್ರಕಾರ, "ಜೀವವಿಮಾ ನಗರ 6ನೇ ಹಂತದ ಬಡಾವಣೆ" ನಿರ್ಮಿಸಿ ನಿವೇಶನಗಳನ್ನು ಅಭಿವೃದ್ಧಿಪಡಿಸಿ ವಿತರಿಸಲು ತೀರ್ಮಾನಿಸಿದ್ದಾರೆ. ಆಸಕ್ತ DEVELOPERSಗಳು ಮುಡಾ ಅಥವಾ DTCP ಪರಿಮಿತಿಯೊಳಗೆ ಅನ್ಯಕ್ರಾಂತವಾದ (ALINATED) ಸ್ವತ್ತು ಅಥವಾ ಅನ್ಯಕ್ರಾಂತಕ್ಕೆ ಅರ್ಜಿ ಸಲ್ಲಿಸಿರುವ ಸ್ವತ್ತುಗಳು ಸುಮಾರು 25 ಎಕರೆ ಪ್ರದೇಶವಿದ್ದಲ್ಲಿ TURN KEY BASIS ಪ್ರಕಾರ ಬಡಾವಣೆ ನಿರ್ಮಿಸಿ ಅಭಿವೃದ್ಧಿ ಪಡಿಸಿ (DEVELOPMENT) ಒಂದು ಚದರ ಅಡಿಗೆ ನಿಗದಿತ ಮೊತ್ತವನ್ನು ನಮೂದಿಸಿ ಮೊಹರು ಮಾಡಿದ ಲಕೋಟೆಯೊಂದಿಗೆ ಮೇಲ್ಕಂಡ ವಿಳಾಸಕ್ಕೆ ಏಳು ದಿವಸಗಳೊಳಗಾಗಿ ಸಲ್ಲಿಸುವುದು

ಸಹಿ/– ಎನ್ ಎಲ್ ಶೇಖರ್
ಅಧ್ಯಕ್ಷರು
94480 56075

ಸ್ಥಳ: ಮೈಸೂರು
ದಿನಾಂಕ: 27–04–2026

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570006.

ಸಂಖ್ಯೆ: ಕರಾಮುವಿ/ಡೀನ್(ಶೈ)/ಡಿಎಸಿ–07/ಪಿಹೆಚ್.ಡಿ/8390/ಉ.ಕ–4/2025–26 ದಿನಾಂಕ: 27.04.2026

ಅಧಿಸೂಚನೆ

ಪಿಹೆಚ್.ಡಿ ಕಾರ್ಯಕ್ರಮದ ಪ್ರವೇಶಾತಿ 2025–26 (ರೆಗ್ಯುಲರ್ ಮೋಡ್)

ಉಲ್ಲೇಖ: (1) ಯುಜಿಸಿ ಸಾರ್ವಜನಿಕ ಪತ್ರ ಸಂಖ್ಯೆ: F.No.2-1/2017(DEB-III) ದಿ: 14.09.2018. (2) ಕರಾಮುವಿ ಪಿಹೆಚ್.ಡಿ ಅಧ್ಯಾದೇಶ 2012 (4ನೇ ತಿದ್ದುಪಡಿ 2023). (3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 04.04.2026.

ಈ ಕೆಳಕಂಡ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಅರೆಕಾಲಿಕ / ಪೂರ್ಣಾವಧಿ ಪಿಹೆಚ್.ಡಿ. ಪದವಿ ಕಾರ್ಯಕ್ರಮಕ್ಕೆ ಅರ್ಹ ಅಭ್ಯರ್ಥಿಗಳಿಂದ ಪ್ರವೇಶಾತಿಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

• ಕನ್ನಡ • ಇಂಗ್ಲೀಷ್ • ಹಿಂದಿ • ತೆಲುಗು • ಸಮಾಜಶಾಸ್ತ್ರ • ಅರ್ಥಶಾಸ್ತ್ರ • ರಾಜ್ಯಶಾಸ್ತ್ರ • ವಾಣಿಜ್ಯಶಾಸ್ತ್ರ • ನಿರ್ವಹಣಾಶಾಸ್ತ್ರ • ರಸಾಯನಶಾಸ್ತ್ರ • ಭೂಗೋಳಶಾಸ್ತ್ರ • ಪರಿಸರ ವಿಜ್ಞಾನ • ಮಾಹಿತಿ ತಂತ್ರಜ್ಞಾನ

ಸಾಮಾನ್ಯ ಪ್ರವೇಶ ಪರೀಕ್ಷೆ (CET)

- ಅರ್ಹ ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆ ತೆಗೆದುಕೊಳ್ಳಬೇಕು.
- UGC/UGC-CSIR, JRF Test/NET/GATE/GRE/M.Phil ತೇರ್ಗಡೆಯಾದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷಾ ವಿನಾಯಿತಿ ಇರುತ್ತದೆ. ಆದಾಗ್ಯೂ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗುವುದು.

ಸಾಮಾನ್ಯ ಪ್ರವೇಶ ಪರೀಕ್ಷೆ (CET) ಯ ಕೇಂದ್ರ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ ಆವರಣ, ಮೈಸೂರಿನಲ್ಲಿ ಮಾತ್ರ ನಡೆಸಲಾಗುವುದು.

ಶುಲ್ಕ ಪಾವತಿ ಅರ್ಜಿ ಸಂಸ್ಕರಣೆ ಶುಲ್ಕ : ರೂ.2000/– (ರೂ.1000/–ಪ.ಜಾ/ಪ.ಪಂ/ಪ್ರವರ್ಗ–1) ಹೆಚ್ಚಿನ ಮಾಹಿತಿಗೆ ಕರಾಮುವಿ ಜಾಲತಾಣ ಪರಿಶೀಲಿಸುವುದು. ಕರಾಮುವಿ ಪೋರ್ಟಲ್ ಮುಖಾಂತರ ಶುಲ್ಕ ಪಾವತಿಸಲು ತಿಳಿಸಲಾಗಿದೆ. ಸಂಬಂಧಿಸಿದ ದಾಖಲಾತಿಗಳ ದೃಢೀಕೃತ ನಕಲು ಪ್ರತಿಗಳ ಜೊತೆ ಜಾಲತಾಣದಿಂದ ಡೌನ್‌ಲೋಡ್ ಮಾಡಿದ ಅರ್ಜಿಯನ್ನು ಭರ್ತಿ ಮಾಡಿ ಅಂಚೆ ಮೂಲಕ ಅಥವಾ ಖುದ್ದಾಗಿ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.

ಅಧ್ಯಕ್ಷರು,...................ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570006.

ಪ್ರಮುಖ ದಿನಾಂಕಗಳು:

ವಿವರಗಳು	ದಿನಾಂಕ
ಜಾಲತಾಣದಲ್ಲಿ ಅರ್ಜಿ ಲಭ್ಯವಾಗಲಿರುವ ದಿನಾಂಕ	28.04.2026
ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಶುಲ್ಕವಿಲ್ಲದೆ)	15.05.2026
ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ (ದಂಡ ಶುಲ್ಕ ರೂ 500/–ರೊಂದಿಗೆ)	21.05.2026
ಸಾಮಾನ್ಯ ಪ್ರವೇಶಾತಿ ಪರೀಕ್ಷೆ ದಿನಾಂಕ	07.06.2026
ಪ್ರವೇಶಾತಿ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ದಿನಾಂಕ	15.06.2026
ಆಯ್ಕೆ ಪಟ್ಟಿ ಪ್ರಕಟಣೆ	22.06.2026
ಮಾರ್ಗದರ್ಶಕರ ಹಂಚಿಕೆಯ ಕೌನ್ಸಿಲಿಂಗ್	29.06.2026

ವಿವರಣಾ ಪುಸ್ತಕದಲ್ಲಿ ಅರ್ಜಿಯ ಜೊತೆ ವಿಷಯವಾರು ಖಾಲಿ ಇರುವ ಸೀಟುಗಳು ಪ್ರವೇಶಾರ್ಹತೆ, ಸಾಮಾನ್ಯ ಪ್ರವೇಶ ಪರೀಕ್ಷೆ ವಿವರ, ಪರೀಕ್ಷಾ ಪಠ್ಯಕ್ರಮ, ಪ್ರಶ್ನೆ ಪತ್ರಿಕೆ ಮಾದರಿ ಹಾಗೂ ಇತರೆ ನಿಯಮಗಳಿಗೆ ಕರಾಮುವಿ ವೆಬ್‌ಸೈಟ್ **www.ksoumysuru.ac.in** ಗೆ ಭೇಟಿ ನೀಡುವುದು.

ಸಹಿ/– ಕುಲಸಚಿವ



ಮೈಸೂರು ಮಿತ್ರ 47

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು



ಹಸಿರು ನಮ್ಮ ಉಸಿರು

7ನೇ ವರ್ಷದ ಸವಿನೆನಪು



ಕು|| ಶಂಕರಮ್ಮ ಎಂ
(ಪರಿಸರ ವಾಯು ಮಾಲಿನ್ಯ ಇಲಾಖೆ)
ಗಾಂಧಿನಗರ, ಮೈಸೂರು

ನಿಮ್ಮ ಅಗಲಿಕೆ ನಮ್ಮನ್ನು ಭಾದಿಸುತ್ತಿದೆ ನಿಮ್ಮ ನಡೆ, ನುಡಿ, ಆದರ್ಶ ನಮಗೆ ದಾರಿದೀಪವಾಗಿದೆ.

ದುಃಖತಪ್ತರು: ನಾಗಲಕ್ಷ್ಮಿ, ಸಹೋದರ– ಸಹೋದರಿಯರು, ಮಕ್ಕಳು ಹಾಗೂ ಕುಟುಂಬವರ್ಗದವರು

12ನೇ ವರ್ಷದ ಸವಿನೆನಪು



ಶ್ರೀಮತಿ ಸಿ.ಬಿ. ಪವಿತ್ರ

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,

ಇಂತಿ ದುಃಖತಪ್ತರು: ತಂದೆ: ಬೀರೇಗೌಡ ಬಿ. ನಿವೃತ್ತ ಎಎಸ್ಐ, ಪೋಲೀಸ್ ಇಲಾಖೆ ತಾಯಿ: ಸಾವಿತ್ರಮ್ಮ ಮತ್ತು ತಂಗಿಯರು, ಮಕ್ಕಳಾದ ನಯನ, ವಂದನ ಮತ್ತು ಕುಟುಂಬವರ್ಗ.